

# ಒಬ್ಬ ವ್ಯಕ್ತಿ ಎರಡು ಕೋನಗಳು


ಗ್ರಂಥಕರ್ತ : ತ್ರಿಮತ ಏಕೈಕ ಗುರುವು


**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**



ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ಜನವರಿ–2018

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು–ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ–ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ – ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು–ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ–ರಾವಣಬ್ರಹ್ಮ–ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ–ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ದ್ಯಾನ – ಪ್ರಾರ್ಥನೆ – ನಮಾಜ್
100. ಹಿಂದೂ ಧರ್ಮದಲ್ಲಿ ರಕ್ಷಣೆ ಅವಶ್ಯವಾ?

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
    ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
    ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
    ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
    ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
    ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
    ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
    ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ–
    ರೋಗಂ ಒಕಭೂತಂ.

## ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಬ್ರಹ್ಮವಿದ್ಯ.
132. ಶಕ್ತಿ
133. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್.B**
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

**ತಪ್ಪದೆ ಓದಿರಿ!** **ಓದಿಸಿರಿ!!**

## ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಒಬ್ಬ ವ್ಯಕ್ತಿ ಎರಡು ಕೋನಗಳು

ಮನುಷ್ಯ ಎಂದರೆ ಏನೋ ಮನುಷ್ಯರೆಲ್ಲರಿಗೂ ತಿಳಿದಿದೆ. ಮನನ ಮಾಡುವ ಮನಸ್ಸನ್ನು ಅನುಸರಿಸಿ ಮನುಷ್ಯ ಎಂದು ಹೆಸರು ಬಂದಿದೆ. ಮನಸ್ಸನ್ನನುಸರಿಸಿ 'ಮನುಷ್ಯ' 'ಮಾನವನು' ಎನ್ನುವ ಹೆಸರುಗಳು ಬಂದಿವೆಯೆಂದು ವಿವರಿಸಿಕೊಂಡು ನೋಡಿದರೆ ತಿಳಿಯುತ್ತಿದೆ. ಮನುಷ್ಯ ತನ್ನ ಭಾವನೆಗಳನ್ನು ಭಾಷೆಯೊಂದಿಗೆ ವ್ಯಕ್ತಪಡಿಸುತ್ತಿದ್ದಾನೆ. ಆದ್ದರಿಂದ ಆತನನ್ನು 'ವ್ಯಕ್ತಿ' ಎಂದು ಸಹ ಕರೆಯುತ್ತಿದ್ದೇವೆ. ಮನನ ಇರುವವನು ಮನುಷ್ಯ, ವ್ಯಕ್ತ ಮಾಡುವವನು ವ್ಯಕ್ತಿ ಎಂದು ಹೇಳುತ್ತಿದ್ದಂತೆ ತಿಳಿಯುತ್ತಿದೆ. ಮನುಷ್ಯ ಸ್ವಲ್ಪ ಸ್ಥೂಲವಾಗಿ, ಸ್ವಲ್ಪ ಸೂಕ್ಷ್ಮವಾಗಿ ಇದ್ದಾನೆಂದು ಎಲ್ಲರಿಗೂ ತಿಳಿಯದಿದ್ದರೂ ಕೆಲವರಿಗಾದರೂ ತಿಳಿದಿದೆ. ಸ್ಥೂಲಶರೀರ ಹತ್ತು ಭಾಗಗಳು, ಸೂಕ್ಷ್ಮ ಶರೀರ 14 ಭಾಗಗಳು ಇದೆಯೆಂದು ಹೇಳಬಹುದು. 24 ಭಾಗಗಳ ಶರೀರದಲ್ಲಿ ಮೂರು ಆತ್ಮಗಳು ಸಹ ಇವೆ. ಸ್ಥೂಲ ಮತ್ತು ಸೂಕ್ಷ್ಮ ಶರೀರಗಳು ಎರಡೂ ಪ್ರಕೃತಿಯೊಂದಿಗೆ ತಯಾರಾಗಿರುವವು ಆದಾಗ, ಪ್ರಕೃತಿ ಶರೀರದಲ್ಲಿ ಮೂರು ಪ್ರತ್ಯೇಕವಾದ ಆತ್ಮಗಳು ಇವೆ. ಇದನ್ನನುಸರಿಸಿ ಒಂದು ಸಜೀವ ಶರೀರ ಪ್ರಕೃತಿ ಮತ್ತು ಆತ್ಮ ಸಂಬಂಧವಾದ ಎರಡು ಭಾಗಗಳಾಗಿ ಇದೆಯೆಂದು ಹೇಳಬಹುದು. ಪ್ರಕೃತಿ ಭಾಗಗಳು 24 ಆದಾಗ, ಆತ್ಮ ಭಾಗಗಳು ಮೂರು. ಒಟ್ಟು 27 ಭಾಗಗಳನ್ನು ವಿವರಿಸಿಕೊಂಡು ನೋಡಿದರೆ ಈ ರೀತಿ ಇವೆ.

## ಮಾನವ ಶರೀರ

| ಸ್ಥೂಲ ಭಾಗ | | ಸೂಕ್ಷ್ಮ ಭಾಗಗಳು | |
|---|---|---|---|
| 1. | ಕಣ್ಣು | 1. | ನೋಟ |
| 2. | ಕಿವಿ | 2. | ಶಬ್ದ |
| 3. | ಮೂಗು | 3. | ವಾಸನೆ |
| 4. | ನಾಲಿಗೆ | 4. | ರುಚಿ |
| 5. | ಚರ್ಮ | 5. | ಸ್ಪರ್ಶ |

| | | | |
|---|---|---|---|
| 6. | ಕಾಲುಗಳು | 6. | ವ್ಯಾನವಾಯು |
| 7. | ಕೈಗಳು | 7. | ಸಮಾನವಾಯು |
| 8. | ಬಾಯಿ | 8. | ಉದಾನವಾಯು |
| 9. | ಗುದ | 9. | ಪ್ರಾಣ ವಾಯು |
| 10. | ಲಿಂಗ | 10. | ಅಪಾನ ವಾಯು |
| | | 11. | ಮನಸ್ಸು |
| | | 12. | ಬುದ್ಧಿ |
| | | 13. | ಚಿತ್ತ |
| | | 14. | ಅಹಂ |
| **10 ಭಾಗಗಳು** | | **14 ಭಾಗಗಳು** | |

ಮಾನವ ಶರೀರವೊಂದರ ಒಟ್ಟು 24 ಪ್ರಕೃತಿ ಭಾಗಗಳನ್ನು ತಿಳಿದು ಕೊಂಡಿದ್ದೇವೆ. ಎರಡನೆಯ ಭಾಗವಾದ ಆತ್ಮ ಭಾಗವನ್ನು ವಿವರಿಸಿಕೊಂಡು ನೋಡಿದರೆ ಈ ರೀತಿಯಾಗಿ ಇವೆ.

## ಮಾನವ ಶರೀರ

| **ಪ್ರಕೃತಿ ಭಾಗಗಳು** | **ಆತ್ಮ ಭಾಗಗಳು** |
|---|---|
| | 1. ಜೀವಾತ್ಮ |
| | 2. ಆತ್ಮ |
| | 3. ಪರಮಾತ್ಮ |
| **ಒಟ್ಟು 24 ಭಾಗಗಳು** | **ಒಟ್ಟು 3 ಭಾಗಗಳು** |

**ಒಟ್ಟು 27 ಭಾಗಗಳು**

ಈ 27 ಭಾಗಗಳ ಶರೀರದಲ್ಲಿ ಮೂರು ಭಾಗಗಳಾಗಿ ಆತ್ಮ ನಿವಾಸಿಸುತ್ತಿದೆ. ಸೃಷ್ಠಿ ಪೂರ್ವದಲ್ಲಿ ದೇವರು ಒಬ್ಬನು ಹೊರತು ಯಾರೂ ಇಲ್ಲ. ಪ್ರಕೃತಿ ಸಹ ಇಲ್ಲದ ಆ ಸಮಯ ಯಾರ ಊಹೆಗೂ ಸಿಗುವುದಲ್ಲ. ಅಂತಹ ಸಮಯದಲ್ಲಿ ದೇವರು ಸ್ವಲ್ಪ ಕೃಷಿ ಮಾಡಿ ಕೃತಿಯನ್ನು ಮಾಡಿದ್ದಾನೆ. 'ಕೃತಿ' ಎಂದರೆ ಮಾಡಲ್ಪಟ್ಟಿರುವುದು ಎಂದು ಅರ್ಥ. ದೇವರು ಮುಖ್ಯವಾಗಿ ಮಾಡಿರುವುದು ಆದ್ದರಿಂದ 'ಪ್ರಕೃತಿ' ಎಂದು ಮಾಡಲ್ಪಟ್ಟಿರುವುದಕ್ಕೆ ಹೆಸರು ಇಡಲಾಗಿದೆ. ಮಾಡಿದವನು ಯಾರೋ ಆತನಿಗೆ ಹೆಸರು ಇಲ್ಲ. ಆತನು ಯಾರಿಗೂ ತಿಳಿಯದವನು, ಆದ್ದರಿಂದ ಆತನನ್ನು 'ದೇವರು' ಎಂದು ಕರೆಯುವುದು ನಡೆಯುತ್ತಿದೆ. ದೇವರು ಎಂದರೆ ಹುಡುಕಲ್ಪಡುವವನೇ ಹೊರತು, ಸಿಗುವವನಲ್ಲ ಎಂದು ಅರ್ಥ. ಹುಡುಕಲ್ಪಡುವವನೇ ಹೊರತು, ತಿಳಿಯುವವನಲ್ಲ ಎಂದು ಅರ್ಥ ಬರುವ ಹಾಗೆ ಆತನಿಗೆ 'ದೇವರು' ಎಂದು ಹೆಸರಿಡುವುದು ನಡೆದಿದೆ. ವಾಸ್ತವವಾಗಿ ಅದು ಹೆಸರಲ್ಲ. ಆತನು ಎಂತಹವನೋ ತಿಳಿಸುವ ಸೂಚನೆ ಎಂದು ತಿಳಿಯಬೇಕು.

ಏನೂ ತಿಳಯದವನನ್ನು ಒಂದು ಸೂಚನೆ ಮೇರೆಗೆ ದೇವರು ಎಂದು ಕರೆದರೂ, ಆತನು ಮಾಡಿದ ಕೆಲಸವನ್ನನುಸರಿಸಿ ಆತನನ್ನು 'ಸೃಷ್ಠಿಕರ್ತ' ಎಂದು ಕರೆದಿದ್ದೇವೆ. ಸೃಷ್ಠಿಕರ್ತ ಎನ್ನುವುದು ಸಹ ಹೆಸರಲ್ಲ. ಆತನು ಮಾಡಿದ ಕೆಲಸಕ್ಕೆ ತಕ್ಕ ವಿಧವಾಗಿ ಕರೆಯುತ್ತಿದ್ದೇವೆ ಹೊರತು ಮತ್ತೇನೂ ಅಲ್ಲ. ದೇವರು ಮಾಡಿದ ಕೃತಿಯನ್ನು ಪ್ರಕೃತಿಯೆಂದು ಹೇಳುತ್ತಿದ್ದೇವೆ ಅಲ್ಲವೆ! ಪ್ರಕೃತಿಯನ್ನು ತಯಾರಿಸಿದ ದೇವರು ಮೂರು ಭಾಗಗಳಾಗಿ ಬೇರ್ಪಟ್ಟಿದ್ದಾನೆ. ದೇವರ ಮೂರು ಭಾಗಗಳು, ಪ್ರಕೃತಿ ಒಂದು ಭಾಗ ಎಲ್ಲವೂ ಸೇರಿಸಿದರೆ ಸೃಷ್ಠಿ ಪೂರ್ವದಲ್ಲಿರುವ ದೇವರಾಗುತ್ತಾನೆ. ಸೃಷ್ಠಿ ಪೂರ್ವದಲ್ಲಿರುವ ದೇವರು ಪ್ರಕೃತಿಯೊಂದಿಗೆ ಸಹ ನಾಲ್ಕು ಭಾಗಗಳಾಗಿ ಬೇರ್ಪಟ್ಟಿದ್ದಾನೆಂದು ಹೇಳಬಹುದು. ಹಾಗೆ ನಾಲ್ಕು ಭಾಗಗಳಾಗಿ ಬೇರ್ಪಟ್ಟವನು ತನ್ನಿಂದ ಪ್ರಕೃತಿಯನ್ನು ಮೊದಲು ತಯಾರಿಸಿ, ನಂತರ ಉಳಿದ ತನ್ನಿಂದ ಎರಡು ಆತ್ಮಗಳನ್ನು ಸಹ ಹೊರಗೆ ಕಳುಹಿಸಿ,

ಮೂರನೆಯ ಆತ್ಮವಾಗಿ ತಾನು ಹಾಗೆಯೇ ಉಳಿದಿದ್ದಾನೆ. ಮೊದಲ ಆತ್ಮ ಜೀವಾತ್ಮ ಆದಾಗ, ಎರಡನೆಯದು ಆತ್ಮ ಎಂದು ಕರೆಯಲ್ಪಡುತ್ತಿದೆ. ದೇವರು ಮೂರನೆಯವನಾಗಿದ್ದು ತನ್ನಿಂದ ಬಂದಿರುವ ಜೀವಾತ್ಮ ಮತ್ತು ಆತ್ಮಕ್ಕಿಂತಲೂ ಬೇರೆಯಾಗಿದ್ದಾನೆ ಆದ್ದರಿಂದ ಆತನು ಪರಮಾತ್ಮಯೆಂದು ಕರೆಯಲ್ಪಡುತ್ತಿದ್ದಾನೆ. ಆತ್ಮಗಿಂತಲೂ ಬೇರೆಯಾಗಿ ಇದ್ದಾನೆ ಆದ್ದರಿಂದ ಆತ್ಮ+ಪರ=ಪರಮಾತ್ಮ ಎಂದು ಹೇಳಬಹುದು. ಹೇಗೆ ನೋಡಿದರೂ ಆತ್ಮಗಿಂತ ಬೇರೆಯಾದವನು ಆದ್ದರಿಂದ ಮೊದಲು ಪರ ನಂತರ ಆತ್ಮಯೆಂದು ಹೇಳಿದರೂ ಪರಮಾತ್ಮನೇ ಆಗುತ್ತಾನೆ. ಚೆನ್ನಾಗಿ ಗಮನಿಸಿದರೆ ಪರಮಾತ್ಮಯೆನ್ನುವುದು ಸಹ ಹೆಸರಲ್ಲ. ದೇವರು ಇರುವ ವಿಧಾನವನ್ನು ಸೂಚಿಸುವ ಸೂಚನೆಯಾಗಿ ಪರಮಾತ್ಮಯೆಂದು ಹೇಳುತ್ತಿದ್ದೇವೆ ಹೊರತು ಅದೂ ಸಹ ಹೆಸರಲ್ಲ.

ಈ ವಿಧವಾಗಿ ಮೊಟ್ಟಮೊದಲು ಸೃಷ್ಠಿಯನ್ನು ತಯಾರಿಸಿದವನು ಪರಮಾತ್ಮ ಇಲ್ಲವೆ ಸೃಷ್ಠಿಕರ್ತ ಇಲ್ಲವೆ ದೇವರು ಎಂದು ಹೇಳಬಹುದು. ಈ ವಿಷಯವಾಗಿ ಅಂತಿಮ ದೈವ ಗ್ರಂಥದಲ್ಲಿ ಸೂರಾ ಎರಡು, ಆಯತ್ 117ರಲ್ಲಿ ಈ ವಿಧವಾಗಿ ಹೇಳಿದ್ದಾರೆ ನೋಡಿರಿ. **(2–117) "ಭೂಮಿ ಆಕಾಶಗಳನ್ನು ಪ್ರಪ್ರಥಮವಾಗಿ ಸೃಷ್ಠಿಸಿದವನು ಆತನೇ. ಆತನು ಯಾವ ಕೆಲಸವನ್ನಾದರೂ ಮಾಡಲು ಸಂಕಲ್ಪಿಸಿಕೊಂಡಾಗ ಅದನ್ನು 'ತಯಾರಾಗು' ಎಂದರೇ ಸಾಕು ಅದೇ ನಡೆದುಹೋಗುತ್ತದೆ."** ಇಲ್ಲಿ ಹೇಳಿದ ವಾಕ್ಯವನ್ನನುಸರಿಸಿ ಮೊದಲು ಭೂಮಿ, ಆಕಾಶಗಳನ್ನು ಎಂದರೆ ಪ್ರಕೃತಿಯನ್ನು ತಯಾರಿಸಿದವನು ಪರಮಾತ್ಮಯೆಂದು ತಿಳಿಯುತ್ತಿದೆ. ಮೊಟ್ಟಮೊದಲು ಭೂಮಿ, ಆಕಾಶ ಅವುಗಳ ಮಧ್ಯದಲ್ಲಿರುವ ಗಾಳಿ, ನೀರು, ಅಗ್ನಿಯನ್ನು ತಯಾರು ಮಾಡಿದವನು ಮೊದಲ ಸೃಷ್ಠಿಕರ್ತ ಎಂದು ಹೇಳುವುದಕ್ಕೆ 'ಪ್ರಪ್ರಥಮವಾಗಿ ತಯಾರು ಮಾಡಿದವನು ಆತನೇ' ಎಂದಿದ್ದಾರೆ. ಆತನು ಎಂದಾಗ ಆತ್ಮಕ್ಕಿಂತ ಬೇರೆಯಾಗಿದ್ದ ಪರಮಾತ್ಮಯೆಂದು ಜ್ಞಾಪಕವಿಟ್ಟುಕೊಳ್ಳಬೇಕು. ಇಲ್ಲಿ ಮೊದಲ ಸೃಷ್ಠಿಕರ್ತ ಪರಮಾತ್ಮಯೆಂದು ಪ್ರತ್ಯೇಕವಾಗಿ ಹೇಳುವುದಕ್ಕೆ ನಂತರ ಎರಡನೆಯ ಸೃಷ್ಠಿಯನ್ನು ಆತನು

ತಯಾರಿಸಲಿಲ್ಲ. ಮೊಟ್ಟ ಮೊದಲು ಐದು ಭಾಗಗಳಾಗಿರುವ ಪ್ರಕೃತಿಯನ್ನು, ಮೂರು ಭಾಗಗಳಾಗಿರುವ ತನ್ನನ್ನು ಒಟ್ಟಾರೆ ನಾಲ್ಕು ಭಾಗಗಳನ್ನು ತಯಾರಿಸಿದ ಸೃಷ್ಠಿಕರ್ತ, ಮೂರು ಆತ್ಮಗಳಲ್ಲಿ ಮೂರನೆಯವನಾಗಿ ಇದ್ದುಹೋದ ಪರಮಾತ್ಮ ಎರಡನೆಯ ಕಾರ್ಯವನ್ನು ಮಾಡಲಿಲ್ಲ. ಪರಮಾತ್ಮನಾದ ಆತನು ಮನುಷ್ಯರನ್ನು, ಜೀವರಾಶಿಗಳನ್ನು ಸೃಷ್ಠಿಸಲಿಲ್ಲ. ಆದರೆ ಈಗಿರುವ ನಾವೆಲ್ಲಾ ಮೊದಲ ಸೃಷ್ಠಿಕರ್ತನಾದ ಪರಮಾತ್ಮ ಸಂತತಿ ಅಲ್ಲವೆಂದು ಹೇಳಬಹುದು. ಈ ನಮ್ಮ ಮಾತು ಬಹಳ ಜನರಿಗೆ ಹೊಸದಾಗಿ ಇರಬಹುದು ಆದರೆ, ನಾನು ಹೇಳುವುದು ವಾಸ್ತವ. ನನ್ನ ಮಾತು ವಾಸ್ತವ ಎನ್ನುವುದಕ್ಕೆ ಅಂತಿಮ ದೈವ ಗ್ರಂಥದಲ್ಲಿ ಸೂರಾ 112, ಆಯತ್ ಮೂರರಲ್ಲಿ ಹೀಗಿದೆ ನೋಡಿರಿ.

**(112–3) "ಆತನಿಗೆ ಯಾರೂ ಸಂತತಿ ಇಲ್ಲ. ಆತನು ಯಾರ ಸಂತತಿಯೂ ಅಲ್ಲ."**

ಈ ಮಾತನ್ನನುಸರಿಸಿ ಪರಮಾತ್ಮಯೆನ್ನುವ ದೇವರು ಎಂದಿಗೂ ಇರುವವನೆಂದು, ಆತನು ಯಾರಿಗೂ ಹುಟ್ಟಲಿಲ್ಲವೆಂದು ಹಾಗೆಯೇ ಆತನಿಗೆ ಯಾರೂ ಸಂತತಿ ಅಲ್ಲವೆಂದು ತಿಳಿಯುತ್ತಿದೆ. ಆದರೆ ಈಗಿರುವ ಮನುಷ್ಯರನ್ನು ಹುಟ್ಟಿಸಿರುವುದು ಅಥವಾ ಸೃಷ್ಠಿಸಿರುವುದು ಯಾರು? ಎನ್ನುವ ಪ್ರಶ್ನೆ ಬಾರದೆ ಇರುವುದಿಲ್ಲ. ಆ ಪ್ರಶ್ನೆಗೆ ಪರಮಾತ್ಮ ಯಾರನ್ನೂ ಹುಟ್ಟಿಸಲಿಲ್ಲವೆಂದು ಇಲ್ಲವೆ ಸೃಷ್ಠಿಸಲಿಲ್ಲವೆಂದು ಉತ್ತರವಾಗಿ ಹೇಳಬಹುದು. ಮನುಷ್ಯನನ್ನು ತಯಾರು ಮಾಡಿದ ಸೃಷ್ಠಿಕರ್ತ ಮತ್ತೊಬ್ಬನಿದ್ದಾನೆ. ಮನುಷ್ಯನಿಗೆ ಜನ್ಮವನ್ನು, ಮರಣವನ್ನು, ಮರಣದಲ್ಲಿ ತೀರ್ಪನ್ನು ಮಾಡುವವನು ಸರ್ವ ಜೀವರಾಶಿಗಳನ್ನು ತಯಾರು ಮಾಡಿದವನು ಪರಮಾತ್ಮ ಅಲ್ಲ. ಜೀವರಾಶಿಗಳಿಗು ಪರಮಾತ್ಮನಿಗು ಸಂಬಂಧ ವಿಲ್ಲ. ಆದರೆ ಈ ದಿನ ಜಡವಾಗಿ ಇರುವ ಭೂಮಿ, ಆಕಾಶ, ಸೂರ್ಯಚಂದ್ರರು, ಸಮುದ್ರಗಳು ಅಲ್ಲದೆ ಜೀವರೂಪವಾಗಿ ಇರುವ ಕದಲುವ ಪ್ರಾಣಿ ಕೋಟಿಯೆಲ್ಲವನ್ನೂ ಸೃಷ್ಠಿಸಿದವರು ಯಾರು? ಎನ್ನುವ ಪ್ರಶ್ನೆ ತಪ್ಪದೆ ಬರುತ್ತದೆ. ಯಾರೋ ಒಬ್ಬರು ಜೀವರಾಶಿಗಳನ್ನು, ಮನುಷ್ಯರನ್ನು ಸೃಷ್ಠಿಸಿದ್ದಾನೆ ಎಂದು

ಅಂದುಕೊಳ್ಳೋಣ. ಹಾಗೆ ಸೃಷ್ಠಿಸಿದವನನ್ನು ಎರಡನೆಯ ಸೃಷ್ಠಿಕರ್ತ ಎಂದು ಹೇಳಬಹುದು. ಎರಡನೆ ಸೃಷ್ಠಿಕರ್ತನನ್ನು ತಯಾರಿಸಿದವನು ಮೊದಲ ಸೃಷ್ಠಿಕರ್ತನೇ ಅಲ್ಲವೆ! ಎರಡನೆ ಸೃಷ್ಠಿಯನ್ನು ಮಾಡಿದವನು ಎರಡನೆ ಆತ್ಮವಾಗಿ ಇರುವವನೆ ಎರಡನೆಯ ಆತ್ಮ ಸ್ವತಃವಾಗಿ ಕೆಲಸ ಮಾಡಿ ಮನುಷ್ಯರನ್ನು ಸಮಸ್ತ ಜೀವರಾಶಿಗಳನ್ನು ತಯಾರಿಸಿದ್ದಾನೆ. ಜೀವರಾಶಿಗಳನ್ನು ತಯಾರಿಸುವುದಕ್ಕೆ ಎರಡನೆಯ ಆತ್ಮ ಸ್ವತಃವಾಗಿ ನಿರ್ಣಯ ತೆಗೆದುಕೊಂಡಿದ್ದಾನಾ? ಎಂದು ಪ್ರಶ್ನಿಸಿಕೊಂಡರೇ ಅದಕ್ಕೆ ಉತ್ತರ ಈ ವಿಧವಾಗಿ ಇದ್ದಂತೆ ತಿಳಿಯುತ್ತಿದೆ.

ಮೊಟ್ಟಮೊದಲು ಪ್ರಕೃತಿಯನ್ನು ಸೃಷ್ಠಿಸಿದ ದೇವರು ಎಂದರೇ! ಪರಮಾತ್ಮ ತನ್ನ ಎರಡನೆಯ ಆತ್ಮದಿಂದ ಜೀವರಾಶಿಗಳನ್ನು ಸೃಷ್ಠಿಸಬೇಕೆಂದುಕೊಂಡನು. ಏಕೆಂದರೆ! ದೇವರಾದ ತಾನು ಪ್ರಕೃತಿ, ಜೀವಾತ್ಮ, ಆತ್ಮರನ್ನು ತನ್ನಿಂದ ತಯಾರಿಸಿ ತಾನು ಪರಮಾತ್ಮನಾಗಿ ಉಳಿದು ಹೋಗಿದ್ದಾನೆ. ಹಾಗೆ ಉಳಿದುಹೋದ ಪರಮಾತ್ಮ ತಾನು ಮೊದಲು ಸೃಷ್ಟಿಯನ್ನು ತಯಾರು ಮಾಡಿದ ನಂತರ ತಾನು ಕೆಲಸವನ್ನು ಮಾಡಬೇಕೆಂದುಕೊಳ್ಳಲಿಲ್ಲ. ತಾನು ತಯಾರಿಸಿದವರಿಂದ ಕೆಲಸವನ್ನು ಮಾಡಿಸಿ ತಾನು ಯಾವ ಕಾರ್ಯವನ್ನೂ ಮಾಡದೆ ಸುಮ್ಮನೆ ಇರಬೇಕೆಂದುಕೊಂಡ ಪರಮಾತ್ಮ, ತನ್ನ ನಂತರ ದೊಡ್ಡದಾಗಿರುವ ಆತ್ಮಕ್ಕೆ ಎರಡನೆ ಸೃಷ್ಠಿ ಕಾರ್ಯವನ್ನು ಒಪ್ಪಿಸಿದ್ದಾನೆ. ಆತ್ಮನಿಂದ ಜೀವರಾಶಿಗಳ ಸೃಷ್ಠಿ, ಜೀವರಾಶಿಗಳ ಜೀವನ, ಜೀವರಾಶಿಗಳ ಮರಣ, ಜೀವರಾಶಿಗಳ ಪುನರ್ಜನ್ಮವನ್ನು ಉಂಟುಮಾಡುವಂತೆ ಆತ್ಮವನ್ನು ನೇಮಿಸಿದ್ದಾನೆ. ಮನುಷ್ಯನ ಹುಟ್ಟು, ಜೀವನ, ಮರಣದ ನಂತರ ಪುನರ್ಜನ್ಮಕ್ಕೆ ಬೇಕಾದ ನ್ಯಾಯ ತೀರ್ಪನ್ನು ಮಾಡುವ ಅಧಿಕಾರವನ್ನು ಸಹ ಪರಮಾತ್ಮನೇ ಆತ್ಮನಿಗೆ ಕೊಟ್ಟಿದ್ದಾನೆ. ಈ ವಿಧವಾಗಿ ಪರಮಾತ್ಮ ಆತ್ಮಗೆ ತಕ್ಕ ಶಕ್ತಿಯನ್ನು ಕೊಟ್ಟು ನೇಮಿಸಿ, ಆತ್ಮ ಮಾಡುವ ಕೆಲಸಗಳೆಲ್ಲವನ್ನು ನೋಡುತ್ತಿರುತ್ತಾ ಯಾವ ಕಾರ್ಯವನ್ನೂ ಮಾಡದೆ ಸುಮ್ಮನೆ ಇದ್ದು ಹೋಗಿದ್ದಾನೆ. ಈ ವಿಧಾನದಿಂದ ಮೊದಲ ಸೃಷ್ಠಿ, ಎರಡನೆ ಸೃಷ್ಠಿಯೆಂದು ಎರಡು ಸೃಷ್ಠಿ ವಿಧಾನಗಳು ಏರ್ಪಟ್ಟಂತಾಗಿದೆ. ಮೊದಲ ಸೃಷ್ಠಿಗೆ ಪರಮಾತ್ಮ

ಅಧಿಪತಿಯಾದಾಗ, ಎರಡನೆಯ ಸೃಷ್ಠಿಗೆ ಆತ್ಮ ಅಧಿಪತಿಯಾಗಿದೆ. ಮೊದಲ ಸೃಷ್ಠಿಗೆಲ್ಲಾ ಪರಮಾತ್ಮ ಜವಾಬ್ದಾರಿ ವಹಿಸಿರುವಾಗ, ಎರಡನೆ ಸೃಷ್ಠಿಯಾದ ಜೀವರಾಶಿಗಳ ಜವಾಬ್ದಾರಿ ಎಲ್ಲಾ ಆತ್ಮ ವಹಿಸಿದೆ. ಎರಡನೆ ಸೃಷ್ಠಿಯಾದ ಜೀವರಾಶಿಗಳ ಶರೀರವೆಲ್ಲಾ ಆತ್ಮ ವ್ಯಾಪಿಸಿ ಶರೀರಗಳಿಗೆ ಅಧಿಪತಿಯಾಗಿರುವಾಗ, ಮೊದಲ ಸೃಷ್ಠಿಯಾದ ಪ್ರಕೃತಿಯೆಲ್ಲಾ ಪರಮಾತ್ಮ ವ್ಯಾಪಿಸಿ ಮೊದಲ ಸೃಷ್ಠಿಗೆಲ್ಲದಕ್ಕೂ ಅಂದರೆ ಭೂಮಿಯಿಂದ ಹಿಡಿದು ಆಕಾಶದವರೆಗು ಪರಮಾತ್ಮನೇ ಅಧಿಪತಿಯಾಗಿ ಇದ್ದಾನೆ. ಎರಡನೆ ಸೃಷ್ಠಿಯಾದ ಶರೀರಗಳಲ್ಲಿ ಆತ್ಮ ವ್ಯಾಪಿಸಿ ಶರೀರದಲ್ಲಿ ಪ್ರತಿ ಕೆಲಸವನ್ನು ಮಾಡುವುದಾಗಿ ಇರುವಾಗ! ಮೊದಲ ಸೃಷ್ಠಿಯಾದ ಪ್ರಕೃತಿಯಲ್ಲಿ ಪರಮಾತ್ಮ ವ್ಯಾಪಿಸಿದ್ದರೂ ತಾನು ಕೆಲಸ ಮಾಡದವನಾದ್ದರಿಂದ ತನ್ನ ಪ್ರಕೃತಿಗೆಲ್ಲಾ ತನ್ನ ದೂತರನ್ನು (ಸೇವಕರನ್ನು) ನೇಮಿಸಿ ಹೊರಗೆ ಪ್ರಕೃತಿಯಿಂದ ತನ್ನ ಪಾಲನೆ ಸಾಗುವಂತೆ ಮಾಡಿದ್ದಾನೆ. ಈ ವಿಧವಾಗಿ ಎರಡು ಸೃಷ್ಠಿಗಳಲ್ಲಿ ಆತ್ಮ, ಪರಮಾತ್ಮ ಪಾಲನೆ ಸಾಗುತ್ತಿದೆ.

ಆತ್ಮ ಪಾಲನೆಯಲ್ಲಿ 24 ಶರೀರ ಭಾಗಗಳು ಕೆಲಸ ಮಾಡುವಾಗ! ಪರಮಾತ್ಮ ಪಾಲನೆಯಲ್ಲಿ ಕೋಟ್ಯಾಂತರ ಭೂತಗಳು, ಗ್ರಹಗಳು ಎನ್ನುವ ದೂತರು ಕೆಲಸ ಮಾಡುತ್ತಿದ್ದಾರೆ. ಆತ್ಮ ರಾಜ್ಯವಾದ ಶರೀರ (ಶರೀರಗಳು) ದಲ್ಲಿ 24 ಭಾಗಗಳನ್ನು ಉಪಯೋಗಿಸಿಕೊಂಡು ಆತ್ಮ ಸ್ವತಃವಾಗಿ ತನ್ನ ಶಕ್ತಿಯನ್ನು ವಿನಿಯೋಗಿಸಿ ಕಾರ್ಯಗಳು ಮಾಡುತ್ತಿದೆ. ಪರಮಾತ್ಮ ರಾಜ್ಯವಾದ ವಿಶ್ವವೆಲ್ಲಾ ಎಂದರೆ ಹೊರಗೆ ಪ್ರಪಂಚವೆಲ್ಲಾ ದೇವದೂತರು ತುಂಬಿದ್ದು ಪರಮಾತ್ಮ ಶಕ್ತಿಯನ್ನು ಉಪಯೋಗಿಸಿಕೊಂಡು ದೂತರೇ ಸ್ವತಃವಾಗಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಪರಮಾತ್ಮ ಮಾತ್ರ ಯಾವ ಕೆಲಸವನ್ನು ಮಾಡದೆ ಸಾಕ್ಷಿಯಾಗಿ ಇದ್ದಾನೆ. ಶರೀರದ ಹೊರಗೆ ವಿಶ್ವವೆಲ್ಲಾ ಮನುಷ್ಯರ ಕರ್ಮಗಳನ್ನು ಅನುಸರಿಸಿ ದೂತರು ಕೆಲಸ ಮಾಡುತ್ತಿರುವಾಗ, ಶರೀರದ ಒಳಗೆ ಕರ್ಮಗಳನ್ನನುಸರಿಸಿ ಆತ್ಮ ಸ್ವತಃವಾಗಿ ಕೆಲಸ ಮಾಡುತ್ತಿದೆ. ಈ ರೀತಿ ಶರೀರದ ಒಳಗಿನ ಆತ್ಮ, ಶರೀರದ ಹೊರಗಿನ

ದೇವದೂತರು (ಭೂತಗಳು, ಗ್ರಹಗಳು) ಕೆಲಸ ಮಾಡುತ್ತಾ, ಆತ್ಮ ಅಂಶವಾದ ಜೀವಾತ್ಮವನ್ನು ಪ್ರಪಂಚದಲ್ಲಿ ಜೀವಿಸುವಂತೆ, ಮರಣಿಸುವಂತೆ, ಪುನಃ ಹುಟ್ಟುವಂತೆ ಮಾಡುತ್ತಾ ವಿಶ್ವ ಕಾರ್ಯವನ್ನು ಸಾಗಿಸುತ್ತಿದ್ದಾರೆ. ದೇವರು ಮೊದಲನೆಯವನಾಗಿರುವಾಗ ದೇವರು ಒಟ್ಟಾರೆ ನಾಲ್ಕು ಭಾಗಗಳಾಗಿ ವಿಭಜಿಸಲ್ಪಟ್ಟು ವಿಶ್ವ ನಾಟಕವನ್ನು ಆಡಿಸುತ್ತಿದ್ದಾನೆ.

ವಿಶ್ವ ನಾಟಕದಲ್ಲಿ ದೇವರು ಒಬ್ಬನೇ ನಾಲ್ಕು ಪಾತ್ರಗಳಲ್ಲಿ ನಟಿಸುತ್ತಿದ್ದಾನೆಂದು ಅರ್ಥವಾಗಿದೆ. ಚಲನ ಚಿತ್ರದಲ್ಲಿ (ಸಿನಿಮಾದಲ್ಲಿ) ಒಬ್ಬನೇ ವ್ಯಕ್ತಿ ನಾಲ್ಕು ಪಾತ್ರಗಳನ್ನು ಪೋಷಿಸಿದಂತೆ ಒಬ್ಬನೇ ದೇವರು ಒಂದು ಪ್ರಕೃತಿಯಾಗಿ ಮೂರು ಆತ್ಮಗಳಾಗಿ ನಟಿಸುವಂತೆ ತಿಳಿಯುತ್ತಿದೆ. ಈ ವಿಶ್ವನಾಟಕದಲ್ಲಿ ಒಂದು ಸ್ತ್ರೀ ಪಾತ್ರ ಮೂರು ಪುರುಷ ಪಾತ್ರಗಳಿವೆ. ಸ್ತ್ರೀ ಪಾತ್ರವನ್ನು ಪ್ರಕೃತಿ ಪೋಷಿಸುತ್ತಿರುವಾಗ, ಪುರುಷರ ಪಾತ್ರಗಳನ್ನು ದೇವರೇ ಪೋಷಿಸುತ್ತಿದ್ದಾನೆ. ಮೂರು ಪುರುಷ ಪಾತ್ರಗಳಲ್ಲಿ ಒಂದು ಜೀವಾತ್ಮ, ಎರಡು ಆತ್ಮ, ಮೂರು ಪರಮಾತ್ಮಯೆಂದು ಪ್ರಥಮ ದೈವ ಗ್ರಂಥದ ಪ್ರಕಾರ ತಿಳಿಯುತ್ತಿದೆ. ಸ್ತ್ರೀ ಪಾತ್ರವಾದ ಪ್ರಕೃತಿಯನ್ನು ಕುರಿತು ಭಗವದ್ಗೀತೆ ಗುಣತ್ರಯ ವಿಭಾಗ ಯೋಗದಲ್ಲಿ 3, 4 ಶ್ಲೋಕಗಳಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

***ಶ್ಲೋ॥ 3. ಮಮ ಯೋನಿ ರ್ಮಹದ್ಬ್ರಹ್ಮ ತಸ್ಮಿನ್ ಗರ್ಭಮ್ ದಧಾಮ್ಯಹಮ್।***

***ಸಂಭವ ಸ್ಸರ್ವ ಭೂತಾನಾಂ ತತೋ ಭವತಿ ಭಾರತ! ॥***

**ಭಾವಾರ್ಥ :–** ಅಚೇತನ ಪ್ರಕೃತಿ ನನಗೆ ಪತ್ನಿಯಾಗಿರುವಾಗ, ಆಕೆಗೆ ನಾನು ಬೀಜದಾತನಾದ ಪತಿಯಾಗಿದ್ದೇನೆ. ನಮ್ಮಿಂದ ಸಂತತಿಯಾಗಿ ಜೀವಾತ್ಮ ಹುಟ್ಟುತ್ತಿದೆ.

***ಶ್ಲೋ॥ 4. ಸರ್ವಯೋನಿಷು ಕೌಂತೇಯ! ಮೂರ್ತಯಃ ಸಂಭವಂತಿ ಯಾಃ।***

***ತಾಸಾಂ ಬ್ರಹ್ಮ ಮಹದ್ಯೋನಿಃ ಅಹಂ ಬೀಜ ಪ್ರದಃ ಪಿತಾ ॥***

**ಭಾವಾರ್ಥ :–** ಅನೇಕ ಗರ್ಭಗಳಲ್ಲಿ ಅನೇಕ ರೂಪಗಳನ್ನು ಧರಿಸಿ ಹುಟ್ಟುವ ಜೀವರಾಶಿಗಳೆಲ್ಲವುಗಳಿಗೂ ತಾಯಿ ಪ್ರಕೃತಿಯಾಗಿರುವಾಗ, ದೇವರಾದ ನಾನು ತಂದೆಯಾಗಿದ್ದೇನೆ.

ಈ ಎರಡು ಶ್ಲೋಕಗಳ ಭಾವನೆ ಪ್ರಕಾರ ಪ್ರಕೃತಿ ತಾಯಿಪಾತ್ರವನ್ನು ಪೋಷಿಸಿದಾಗ, ಪುರುಷನ ಪಾತ್ರವನ್ನು ದೇವರು ಪೋಷಿಸಿದಾಗ, ಜೀವಾತ್ಮ ಸಂತತಿ ಪಾತ್ರವನ್ನು ಪೋಷಿಸುತ್ತಿದೆ. ಇಲ್ಲಿ ಪಾತ್ರಗಳ ವಿಷಯದಲ್ಲಿ ಸ್ವಲ್ಪ ಅರ್ಥವಾಗದ ಪರಿಸ್ಥಿತಿ ಯಾರಿಗಾದರೂ ಇದ್ದರೂ, ಅದು ಸ್ವಲ್ಪ ಬುದ್ಧಿಯನ್ನುಪ ಯೋಗಿಸುವವರಿಗೆ ಸುಲಭವಾಗಿ ಅರ್ಥವಾಗಬಲ್ಲದು. ಸ್ತ್ರೀ ಪುರುಷ ತತ್ತ್ವಗಳು ಪ್ರಪಂಚದಲ್ಲಿ ಎರಡೇ ಇವೆ. ದೇವರು ಮೊದಲು ಪ್ರಕೃತಿಯನ್ನು ತನ್ನಿಂದ ವಿಭಜಿಸಿ, ಪ್ರಕೃತಿ ಹಿಂದೆ ಮೂರು ಆತ್ಮಗಳಾಗಿ ವಿಭಜಿಸಲ್ಪಟ್ಟಿದ್ದಾನೆ. ಸ್ತ್ರೀಗಿಂತಲೂ ಪುರುಷನಿಗೆ ಬಲ ಹೆಚ್ಚು ಎಂದಹಾಗೆ, ಸ್ತ್ರೀ ಶರೀರಗಳಿಗಿಂತ ಪುರುಷ ಶರೀರಗಳೇ ಬಲವಾಗಿ ಇದ್ದಂತೆ ಹೊರಗಿನ ಪ್ರಪಂಚದಲ್ಲಿ ಕಾಣಿಸುತ್ತಿದೆ. ಅದೇ ರೀತಿಯಾಗಿ ಪುರುಷನನ್ನು ಆಧಾರಮಾಡಿಕೊಂಡು ಸ್ತ್ರೀ ಇದ್ದಂತೆ, ದೇವರನ್ನು ಆಧಾರ ಮಾಡಿಕೊಂಡು ಪ್ರಕೃತಿ ಇದೆ. ಇದೆಲ್ಲಾ ಶಾಸ್ತ್ರಬದ್ಧವಾಗಿ ನಿರ್ಮಾಣವಾಗಿದ್ದಂತೆ ಮೊದಲ ದೈವಗ್ರಂಥವಾದ ತೌರಾತ್ ಅಥವಾ ಭಗವದ್ಗೀತೆಯಲ್ಲಿ ಹೇಳಲಾಗಿದೆ. ಪ್ರಕೃತಿ ದೇವರಿಗೆ ಹೆಂಡತಿ ಪಾತ್ರವನ್ನು, ಜೀವಿಗೆ ತಾಯಿ ಪಾತ್ರವನ್ನು ಪೋಷಿಸುತ್ತಿರುವಾಗ, ದೇವರು (ಆತ್ಮ) ಪ್ರಕೃತಿಗೆ ಪತಿಯ ಪಾತ್ರವನ್ನು, ಜೀವಿಗೆ ತಂದೆ ಪಾತ್ರವನ್ನು ಪೋಷಿಸುತ್ತಿದ್ದಾನೆ. ಪರಮಾತ್ಮ ಆತ್ಮನಿಗೆ ತಂದೆ ಪಾತ್ರವನ್ನೂ, ಜೀವಾತ್ಮನಿಗೆ ತಾತ ಪಾತ್ರವನ್ನು, ಪ್ರಕೃತಿಗೆ ತಂದೆ ಪಾತ್ರವನ್ನು ಮತ್ತು ಮಾಮ ಪಾತ್ರವನ್ನು ಪೋಷಿಸುತ್ತಿದ್ದಾನೆ. ಈ ಸಂಬಂಧಗಳು ಕೆಳಗಿನ ರೀತಿಯಾಗಿ ಇದ್ದಂತೆ ತಿಳಿಯಬಹುದು.

**ಪ್ರಕೃತಿ :-**
- ಜೀವಾತ್ಮನಿಗೆ – ತಾಯಿ
- ಆತ್ಮಕ್ಕೆ – ಹೆಂಡತಿ
- ಪರಮಾತ್ಮನಿಗೆ – ಸೊಸೆ

**ಜೀವಾತ್ಮ :-**
- ಪ್ರಕೃತಿಗೆ – ಮಗ (ಮಗಳು)
- ಆತ್ಮಕ್ಕೆ – ಮಗ (ಮಗಳು)
- ಪರಮಾತ್ಮನಿಗೆ – ಮೊಮ್ಮಗ

**ಆತ್ಮ :-**
- ಪ್ರಕೃತಿಗೆ – ಗಂಡ (ಪತಿ)
- ಜೀವಾತ್ಮನಿಗೆ – ತಂದೆ
- ಪರಮಾತ್ಮನಿಗೆ – ಕುಮಾರನು

**ಪರಮಾತ್ಮ :-**
- ಪ್ರಕೃತಿಗೆ – ಮಾಮ (ತಂದೆ)
- ಆತ್ಮಕ್ಕೆ – ತಂದೆ
- ಜೀವಾತ್ಮಕ್ಕೆ – ತಾತ

ಒಬ್ಬನೇ ದೇವರು ನಾಲ್ವರಾಗಿದ್ದು ಪ್ರಪಂಚವನ್ನು ಏರ್ಪಡಿಸಿ ಅದರಲ್ಲಿ ಒಬ್ಬರೊಂದಿಗೆ ಮತ್ತೊಬ್ಬರು ಹನ್ನೆರಡು ವರಸೆಗಳಾಗಿ ಕಾಣಿಸುತ್ತಿದ್ದಾನೆ. ಅದರಲ್ಲಿ ಇನ್ನೂ ಚೆನ್ನಾಗಿ ಆಲೋಚಿಸಿದರೆ ಪಂಚ ಭೂತಗಳಾಗಿ ಹೊರಗೆ ಕಾಣಿಸುತ್ತಿರುವ ಒಂದೇ ಪ್ರಕೃತಿ ಕೋಟ್ಯಾನು ಕೋಟಿ ಜೀವ ಶರೀರಗಳಾಗಿ ತಯಾರಾಗಿದೆ. ಕಾಣಿಸುವ ಪ್ರಕೃತಿ ಒಂದೇ. ಅದೇ ಪ್ರಕೃತಿ ಕಾಣಿಸುವ ಕೋಟಿ ಶರೀರಗಳಾಗಿ ಇದೆಯೆಂದು ತಿಳಿಯಬೇಕು. ಹಾಗೆಯೇ ದೇವರಿಂದ ಬೇರ್ಪಟ್ಟ ಜೀವಾತ್ಮ ಒಂದೇಯಾದರೇ ಅದೇ ಜೀವಾತ್ಮ ಎಷ್ಟೋ ಕೋಟಿಗಳ ಜೀವಾತ್ಮಗಳಾಗಿ ತಯಾರಾಗಿ, ತಯಾರಾದ ಪ್ರತಿ ದೇಹದಲ್ಲಿ ಒಂದು ಜೀವಿಯಾಗಿ ಕಾಣಿಸುತ್ತಿದೆ. ಅಷ್ಟೇ ಅಲ್ಲದೆ ಒಂದೇ ಪ್ರಕೃತಿ ಎಷ್ಟೋ ಶರೀರಗಳಾಗಿ ತಯಾರಾಗಿರುವಾಗ,

ಹಾಗೆಯೇ ಒಂದೇ ಜೀವಾತ್ಮ ಪ್ರತಿ ಶರೀರದಲ್ಲಿ ಜೀವಾತ್ಮವಾಗಿ ಎಷ್ಟೋ ದೇಹಗಳಲ್ಲಿ ಇರುವಾಗ, ಪ್ರತಿ ಜೀವಾತ್ಮ ಹಿಂದೆ ಒಂದು ಆತ್ಮ ಇರುವಹಾಗೆ ಒಂದೇ ಆತ್ಮ, ಜೀವಾತ್ಮ ಇರುವ ಪ್ರತಿ ಶರೀರದಲ್ಲಿಯೂ ಇದೆ. ಪ್ರತಿ ಜೀವಾತ್ಮ ಹಿಂದೆ ಪ್ರತಿ ಶರೀರದಲ್ಲಿಯೂ ಆತ್ಮ ಇರುವಾಗ, ಆತ್ಮವನ್ನು ಜೀವಾತ್ಮವನ್ನು ಜೋಡಿ ಆತ್ಮಗಳೆಂದು ಹೇಳುತ್ತಿದ್ದೇವೆ. ಪ್ರತಿ ಶರೀರದಲ್ಲಿ ಪ್ರತಿ ಜೀವಾತ್ಮಕ್ಕೂ ಪಕ್ಕದವನಾಗಿ ಆತ್ಮ ಇದೆ. ಪ್ರತಿ ಜೀವಾತ್ಮನಿಗೂ ಸ್ನೇಹಿತನಾಗಿ ಪ್ರತಿ ಶರೀರದಲ್ಲಿಯೂ ಆತ್ಮ ಇದೆ. ಈ ವಿಧವಾಗಿ ಅನೇಕ ಕಡೆ ಅನೇಕ ರೂಪಗಳಲ್ಲಿರುವ ಶರೀರಗಳಲ್ಲಿ ಜೀವಾತ್ಮ, ಆತ್ಮ ಇದ್ದರೂ ಅವರೊಂದಿಗೆ ಪರಮಾತ್ಮ ಸಹ ಇದೆ. ಜೀವಾತ್ಮ ಆತ್ಮಗಳು ಶರೀರದಲ್ಲೇ ಇರುವಾಗ, ಪರಮಾತ್ಮ ಶರೀರಗಳ ಒಳಗೂ, ಶರೀರಗಳ ಹೊರಗೂ ಇದ್ದಾನೆ. ಇದನ್ನನುಸರಿಸಿ ಪರಮಾತ್ಮ ಅಣುಅಣುವಿನಲ್ಲಿ ವ್ಯಾಪಿಸಿದ್ದಾನೆಂದು ತಿಳಿಯುತ್ತಿದೆ. ಜೀವಿಯು ಅಥವಾ ಜೀವಾತ್ಮ ಶರೀರದಲ್ಲಿ ಒಂದು ಕಡೆ ರವೆಯಷ್ಟಾಗಿ ಸೂಜಿ ಮೊನೆಯಷ್ಟು ಜಾಗದಲ್ಲಿರುವಾಗ ಆತ್ಮ ಶರೀರವೆಲ್ಲಾ ವ್ಯಾಪಿಸಿದೆ.

ಇದೆಲ್ಲವನ್ನು ಗಮನಿಸಿದರೆ ವಿಶ್ವನಾಟಕವೊಂದರ ನಮೂನೆ ಎಲ್ಲಾ ತಿಳಿದುಹೋಗುತ್ತಿದೆ. ಈ ವಿಧವಾಗಿ ತಯಾರಾದ ವಿಶ್ವದಲ್ಲಿನ ಜೀವರಾಶಿಗಳು 84 ಲಕ್ಷಗಳ ವಿಧಗಳ ಜಾತಿಗಳಿವೆ. ಅದರಲ್ಲಿ ಮನುಷ್ಯ ಜಾತಿ ಒಂದು ವಿಧ. ಕೋಟ್ಯಾನು ಕೋಟಿ ಇರುವ ಮನುಷ್ಯರಲ್ಲಿ ನಾನು ಒಬ್ಬ ಮನುಷ್ಯ. ಹಾಗೆಯೇ ನೀನು ಒಬ್ಬ ಮನುಷ್ಯ. ಮನುಷ್ಯ ಎನ್ನುವ ಹೆಸರು ಹೇಗೆ ಬಂದಿದೆಯೋ ಮೊದಲೇ ತಿಳಿದುಕೊಂಡಿದ್ದೇವೆ. ಒಬ್ಬ ಮನುಷ್ಯನಿಗೆ ಶರೀರ ಒಂದು ಇರುವಾಗ, ಶರೀರದಲ್ಲಿ ಜೀವಾತ್ಮ ಒಬ್ಬನಿದ್ದಾನೆ. ಶರೀರದಲ್ಲಿರುವ ಜೀವಿಯು ನಾನು ಮನುಷ್ಯನೆಂದು ಹೊರಗೆ ಹೇಳಿಕೊಳ್ಳುತ್ತಿದ್ದಾನೆ. ಹಾಗೆ ಹೇಳಿಕೊಳ್ಳುವ ಮನುಷ್ಯ ನಾನು ಶರೀರದೊಳಗೆ ಜೀವಿಯು ಎಂದು ತಿಳಿಯದೆ ಶರೀರವೇ ನಾನು ಎನ್ನುವ ಭಾವನೆಯೊಂದಿಗೆ ತನ್ನನ್ನು ಶರೀರದೊಂದಿಗೆ ಸಹ ಸೇರಿಸಿ ಹೇಳಿಕೊಳ್ಳುತ್ತಿದ್ದಾನೆ ಹೊರತು ನಾನು ಬೇರೆ, ಶರೀರ ಬೇರೆಯೆಂದು ಸ್ವಲ್ಪವಾದರೂ

ಅಂದುಕೊಳ್ಳುತ್ತಿಲ್ಲ. ಶರೀರದೊಂದಿಗೆ ಸೇರಿಸಿ ನಾನು ಎನ್ನುವ ಜೀವಿಯು ಶರೀರದಲ್ಲಿ ತಲೆಯಲ್ಲಿ ಒಂದು ಕಡೆ ಮಾತ್ರ ಇದ್ದೇನೆಂದಾಗಲಿ, ಶರೀರದಲ್ಲಿ ಎಲ್ಲಾಕಡೆ ಇರುವ ಆತ್ಮ ಮತ್ತೊಂದು ಇದೆಯೆಂದಾಗಲಿ, ಶರೀರದ ಹೊರಗೆ, ಶರೀರದ ಒಳಗೆ ಎಲ್ಲೆಡೆ ವ್ಯಾಪಿಸಿರುವ ಪರಮಾತ್ಮ ಒಂದಿದೆಯೆಂದಾಗಲಿ ತಿಳಿಯದ ಸ್ಥಿತಿಯಲ್ಲಿದ್ದಾನೆ. ಮನುಷ್ಯರಲ್ಲಿ ಕೆಲವರು ಹೊರಗಿನ ಆರಾಧನೆಗಳೇ ಮುಖ್ಯವೆಂದು ತಿಳಿದು ತನ್ನ ಧ್ಯಾಸವನ್ನು ಹೊರಗೆ ಇಟ್ಟುಕೊಂಡಿದ್ದಾರೆ. ನಾವು ಚೆನ್ನಾಗಿ ದೇವರನ್ನು ಆರಾಧಿಸುತ್ತಿದ್ದೇವೆಂದು, ನಾವು ದೇವರನ್ನು ಚೆನ್ನಾಗಿ ಪ್ರಾರ್ಥನೆ ಮಾಡುತ್ತಿದ್ದೇವೆಂದು ಅಂದುಕೊಳ್ಳುತ್ತಿದ್ದಾರೆ ಹೊರತು ದೇವರು ತಮ್ಮಲ್ಲಿಯೇ ಇದ್ದಾನೆ ಎನ್ನುವ ಆಲೋಚನೆ ಸ್ವಲ್ಪವಾದರೂ ಇಲ್ಲದವರಾಗಿದ್ದಾರೆ. ಅಂತಹವರು ಮಾಡುತ್ತಿರುವುದು ಒಳ್ಳೆಯ ಕೆಲಸವೇ ಆದರೂ ತಮ್ಮ ಅಡ್ರಸ್ ತಮಗೇ ತಿಳಿಯದ ಹಾಗೆ ಇತರರಿಗೆ ಪತ್ರ ಬರೆದಂತೆ ಇರುತ್ತದೆ. ಅಂತಹ ಪತ್ರ ಸೇರಬೇಕಾದ ಅಡ್ರಸ್‌ಗೆ ಸೇರಿದರೂ ಅದು ಎಲ್ಲಿಂದ ಕಳುಹಿಸಿರುವುದೋ ಅದಕ್ಕೆ ಯಾರಿಗೆ ಸಮಾಧಾನ ಕೊಡಬೇಕೋ ತಿಳಿಯದ ಸ್ಥಿತಿ ಏರ್ಪಟ್ಟಂತಿರುತ್ತದೆ. ನಾವಾದರೂ ನಮ್ಮ ಅಡ್ರಸ್ ಹೇಳದಂತೆ ಇತರರೊಂದಿಗೆ ವ್ಯಾಪಾರ ಮಾಡಿದರೂ, ಅದರಲ್ಲಿನ ಲಾಭ ನಮಗೆ ಸೇರುವುದಿಲ್ಲ ಅಲ್ಲವೆ! ಹಾಗೆಯೇ ಮನುಷ್ಯ ತನ್ನ ಸ್ಥಿತಿಯನ್ನು ತಿಳಿಯದಂತೆ ದೇವರನ್ನು ಪ್ರಾರ್ಥಿಸಿದರೂ ಅದು ಅಸಂಪೂರ್ಣ ಪ್ರಾರ್ಥನೆಯಾಗುತ್ತದೆ.

ದೇವರು ಮನುಷ್ಯನಿಗೆ ಹೇಳಿದ ಮುಖ್ಯವಾದ ಎರಡು ಮಾತುಗಳಲ್ಲಿ ಎರಡು ಆಜ್ಞೆಗಳಲ್ಲಿ ಮೊದಲ ಆಜ್ಞೆ **'ನಿನ್ನ ಪೂರ್ಣ ಹೃದಯದಿಂದ, ನಿನ್ನ ಪೂರ್ಣ ಆತ್ಮದಿಂದ, ನಿನ್ನ ಪೂರ್ಣ ಮನಸ್ಸಿನಿಂದ ದೇವರನ್ನು ಪ್ರಾರ್ಥಿಸು'** ಎಂದು ದ್ವಿತೀಯ ದೈವ ಗ್ರಂಥದಲ್ಲಿ ಹೇಳಿದ್ದಾರೆ. ನಿನ್ನ ಪೂರ್ಣ ಹೃದಯದಿಂದ ಎಂದಾಗ 'ನೀನು ಯಾರ ಹತ್ತಿರ ಇದ್ದೀಯೋ, ಎಲ್ಲಿ ಇದ್ದೀಯೋ ತಿಳಿದು' ಎಂದು ಭಾವಿಸಬೇಕು. ಹಾಗೆಯೇ 'ನಿನ್ನ ಪೂರ್ಣ ಆತ್ಮದಿಂದ' ಎಂದರೆ ನಾನು ಜೀವಾತ್ಮನಾಗಿ ಇದ್ದೇನೆನ್ನುವ ಸತ್ಯ ತಿಳಿದು ಎಂದು ಅರ್ಥ

ಮಾಡಿಕೊಳ್ಳಬೇಕು. 'ನಿನ್ನ ಪೂರ್ಣ ಮನಸ್ಸಿನಿಂದ' ಎಂದರೆ ನಿನ್ನೊಂದಿಗೆ ನಿನ್ನ ಶರೀರದಲ್ಲಿರುವ ಮುಖ್ಯವಾದ ಮನಸ್ಸನ್ನು ತಿಳಿದು ಆ ಮನಸ್ಸಿನೊಂದಿಗೆ ದೇವರನ್ನು ಪ್ರಾರ್ಥಿಸಿದರೆ, ಆ ಪ್ರಾರ್ಥನೆ ಸರಿಯಾದುದೆನ್ನುವ ಅರ್ಥದೊಂದಿಗೆ ದೇವರು ಮನುಷ್ಯನಿಗೆ ಹೇಳಿದ ಎರಡು ಮುಖ್ಯವಾದ ಮಾತುಗಳಲ್ಲಿ ಮೊದಲ ಮಾತು ಇದೆ. ಈ ಮಾತನ್ನು ದ್ವಿತೀಯ ದೈವಗ್ರಂಥವಾದ ಇಂಜೀಲ್‌ನಲ್ಲಿ (ಬೈಬಲ್‌ನಲ್ಲಿ) ಮತ್ತಾಯ ಸುವಾರ್ತೆ 22ನೇ ಅಧ್ಯಾಯದಲ್ಲಿ 37, 38 ವಚನಗಳಲ್ಲಿ ಹೀಗಿದೆ ನೋಡಿರಿ.

**(ಮತ್ತಾಯ 22–37, 38)** ಅದಕ್ಕೆ ಆತನು **"ನಿನ್ನ ಪೂರ್ಣ ಹೃದಯದಿಂದ, ನಿನ್ನ ಪೂರ್ಣ ಆತ್ಮದಿಂದ, ನಿನ್ನ ಪೂರ್ಣ ಮನಸ್ಸಿನಿಂದ ನಿನ್ನ ದೇವರಾದ ಪ್ರಭುವನ್ನು ಪ್ರೀತಿಸಬೇಕೆನ್ನುವುದೇ ಮುಖ್ಯವಾದುದು, ಮೊದಲನೆಯದಾದ ಆಜ್ಞೆ"** ಎಂದು ಹೇಳಿದಹಾಗೆ ಇದೆ. ಈ ವಾಕ್ಯದ ಮೂಲಕ ಮೊದಲು ನೀನು ನಿನ್ನ ಸ್ಥಾನವನ್ನು ತಿಳಿದು, ನೀನು ಯಾರೋ ತಿಳಿದು, ನಿನ್ನ ಮನೋಧ್ಯಾಸದಿಂದ ದೇವರನ್ನು ಆರಾಧಿಸೆಂದು ಹೇಳಿದ್ದಾರೆ.

ಈ ವಾಕ್ಯದಲ್ಲಿ ಮತ್ತೊಂದು ವಿಶೇಷತೆ ಇದೆ. ಆರಾಧಿಸುವ ನೀನು ನಿನ್ನ ಅಡ್ರಸ್ ತಿಳಿದು **"ನಿನ್ನ ದೇವರಾದ ಪ್ರಭುವನ್ನು"** ಪ್ರೀತಿಸಬೇಕೆಂದು ಹೇಳುವುದಾಗಿದೆ. ಪ್ರೀತಿಸುವುದು ಎಂದರೆ 'ಪ್ರಾರ್ಥಿಸುವುದು' ಅಥವಾ 'ಆರಾಧಿಸುವುದು' ಎಂದು ಅರ್ಥ. ಭಾಷಾನುವಾದದಲ್ಲಿ ಪ್ರಾರ್ಥನೆಯನ್ನು ಪ್ರೀತಿಸುವುದು ಎಂದು ಬರೆದಿದ್ದಾರೆ. 'ನಿನ್ನ ದೇವರಾದ' ಎಂದು ಅಂದರೆ 'ನಿನಗೆ ಅಧಿಪತಿಯಾದ' ಎಂದು ಭಾವಿಸಿಕೊಳ್ಳಿ. ಇನ್ನು ಮುಖ್ಯವಾದ ಪದ 'ಪ್ರಭುವನ್ನು' ಎಂದು ಹೇಳುವುದು. 'ಪ್ರ' ಎಂದರೆ ಹುಟ್ಟಿದ ಎನ್ನುವ ಅರ್ಥವಿದೆ. ಪ್ರ ಎಂದರೆ ಮುಖ್ಯವಾದ ಎಂದು ಸಹ ಅರ್ಥವಿದೆ. ಅದು ಸಂದರ್ಭಾ ನುಸಾರವಾಗಿ ಪಕ್ಕದಲ್ಲಿರುವ 'ಭು' ಅಕ್ಷರದ ಹಿಂದೆ 'ಮುಖ್ಯವಾಗಿ' ಎನ್ನುವ ಅರ್ಥ ಸರಿಹೋಗುತ್ತದೆ. 'ಭು' ಎಂದರೆ ಹುಟ್ಟಿದ ಎಂದು ಅರ್ಥ. 'ಪ್ರಭು' ಎಂದರೆ "ಮುಖ್ಯವಾಗಿ ಹುಟ್ಟಿದವನು" ಎಂದು ಅರ್ಥವಿದೆ. ಪರಮಾತ್ಮಯೆನ್ನುವ

ಮೊದಲ ದೇವರಿಂದ ಹುಟ್ಟಿದವನು ಆತ್ಮಯೆನ್ನುವ ದೇವರು. ಆತ್ಮವನ್ನು, ಪರಮಾತ್ಮವನ್ನು ಇಬ್ಬರನ್ನೂ ದೇವರು ಎಂದು ಕರೆಯುವುದು ನಡೆಯುತ್ತಿದೆ. ಆಧ್ಯಾತ್ಮಿಕ ವಿದ್ಯೆಯನ್ನು ಅನುಸರಿಸಿ ದೇವರು ಎಂದಾಗ ತಿಳಿಯದವನು ಎಂದು ಅರ್ಥ. ಆತ್ಮ, ಪರಮಾತ್ಮ ಇಬ್ಬರೂ ತಿಳಿಯುವುದಿಲ್ಲ, ಆದ್ದರಿಂದ ಇಬ್ಬರನ್ನೂ ದೇವರು ಎಂದು ಕನ್ನಡ ಭಾಷೆಯಲ್ಲಿ ಹೇಳುವುದು ನಡೆಯುತ್ತಿದೆ. ಅಂತಿಮ ದೈವ ಗ್ರಂಥದಲ್ಲಿಯೂ ಸಹ ಇಬ್ಬರನ್ನೂ ಅಲ್ಲಾಹ್ ಎಂದು ಹೇಳುವುದು ನಡೆದಿದೆ. ಆದರೆ ಇಬ್ಬರು ದೇವರುಗಳ ವಿಷಯವು ಯಾರಿಗೂ ತಿಳಿಯದಂತೆ ಹೋಗಿದೆ. ಅಲ್ಲಾಹ್ ಎನ್ನುವ ಪದ ತೆಲುಗು ಭಾಷೆಯೊಳಗಿನದ್ದು.

ಮೊದಲ ದೇವರಾದವನು ತನ್ನಿಂದ ಆತ್ಮನನ್ನು, ಜೀವಾತ್ಮನನ್ನು ಸೃಷ್ಟಿಸಿದ್ದಾನೆ. ಜೀವಾತ್ಮ ಮನುಷ್ಯನಾಗಿ ಚಲಾವಣೆ ಆಗುತ್ತಿರುವಾಗ, ಆತ್ಮ ದೇವರಾಗಿ ಚಲಾವಣೆ ಆಗುತ್ತಿದ್ದಾನೆ. ದೇವರಾಗಿರುವ ಆತ್ಮವನ್ನು ಪ್ರಭು ಎಂದು ಹೇಳುವುದು ನಡೆದಿದೆ. ಮೊದಲ ದೇವರಿಂದ ಇಲ್ಲವೆ ಮೊದಲ ಸೃಷ್ಟಿಕರ್ತನಿಂದ ಹುಟ್ಟಿದವನು ಎರಡನೆ ದೇವರಾದ ಆತ್ಮ. ಆದ್ದರಿಂದ ಆತ್ಮವನ್ನು ಪ್ರಭು ಎಂದು ಹೇಳುವುದಾಗಿದೆ. ಪ್ರಭು ಎಂದರೆ 'ಮುಖ್ಯವಾಗಿ ಹುಟ್ಟಿದವನು' ಎಂದು ಅರ್ಥ. ಮೊದಲ ಸೃಷ್ಟಿಕರ್ತನಿಂದ ಹುಟ್ಟಿದವನು ಆತ್ಮ ಆಗಿರುವುದರಿಂದ ಆತ್ಮವನ್ನು 'ದೇವರಾದ ಪ್ರಭು' ಎಂದು ಹೇಳಿದ್ದಾರೆ. ಮನುಷ್ಯರೆಲ್ಲರೂ ಆರಾಧಿಸಬೇಕಾದ ದೇವರು ಎರಡನೆ ಆತ್ಮವೇ ಆಗಿರುವುದರಿಂದ ಮೊದಲ ಪರಮಾತ್ಮನನ್ನು ಯಾರೂ ಆರಾಧಿಸಲಾರರು, ಆರಾಧಿಸಬಾರದು, ಆದ್ದರಿಂದ ಮೊದಲ ದೇವರು ಎರಡನೆ ದೇವರಾದ ಆತ್ಮನನ್ನು ನಿನ್ನ ಅಡ್ರಸ್ ತಿಳಿದು ಆರಾಧಿಸೆಂದು ವಾಕ್ಯವನ್ನು ಹೇಳುತ್ತಾ ಎರಡನೆ ಆತ್ಮನನ್ನು ಪ್ರಭು ಎಂದು ಹೇಳುವುದಾಗಿದೆ. ಈ ರೀತಿಯಾಗಿ ಮೊದಲನೆಯವನಾದ ಜೀವಾತ್ಮ, ಎರಡನೆಯವನಾದ ಆತ್ಮನನ್ನು ಆರಾಧಿಸೆಂದು ಸ್ವತಃವಾಗಿ ಮೂರನೆಯವನಾದ ಪರಮಾತ್ಮನೇ ಹೇಳಿದ್ದಾನೆ. ಈ ವಿಷಯವನ್ನು ಅಂತಿಮ ದೈವ ಗ್ರಂಥ ಖುರ್‌ಆನ್‌ನಲ್ಲಿ ಸೂರಾ 3, ಆಯತ್ 18ರಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

**(3-18) "ಅಲ್ಲಾಹ್ ಹೊರತು ಮತ್ತೊಬ್ಬ ಆರಾಧ್ಯ ದೈವವಿಲ್ಲವೆಂದು ಸ್ವತಃ ಅಲ್ಲಾಹ್, ಆತನ ದೂತರು ಮತ್ತು ಜ್ಞಾನ ಸಂಪನ್ನರು ಸಾಕ್ಷಿಯನ್ನು ಕೊಡುತ್ತಿದ್ದಾರೆ. ಆತನು ಸಮತ್ವ, ಸಮ ತೂಕದಿಂದ ಈ ವಿಶ್ವವನ್ನು ನಿಲ್ಲಿಸಿದ್ದಾನೆ. ಸರ್ವಾಧಿಕ್ಯನು, ವಿವೇಚನಾಶೀಲಿಯಾದ ಆತನು ಹೊರತು ಮತ್ತೊಬ್ಬರ್ಯಾರೂ ಆರಾಧನೆಗೆ ಅರ್ಹರಲ್ಲ."**

ಈ ವಾಕ್ಯದಲ್ಲಿ ಮೊಟ್ಟಮೊದಲ ಸೃಷ್ಠಿಕರ್ತನಾದ ಅಲ್ಲಾಹ್, ಎರಡನೆ ಆತ್ಮವಾದ ಅಲ್ಲಾಹ್‌ನ್ನು ಆರಾಧಿಸಲ್ಪಡುವ ದೇವರು ಅಲ್ಲಾಹ್‌ನೇ ಎಂದು ಹೇಳುತ್ತಿದ್ದಾನೆ. ಅಷ್ಟೇ ಅಲ್ಲದೆ ಸೃಷ್ಠಿ ರಹಸ್ಯ ತಿಳಿದ ದೇವದೂತರು ಮತ್ತು ಪ್ರಕೃತಿ ಮೂರು ಆತ್ಮಗಳ ಜ್ಞಾನ ತಿಳಿದ ಜ್ಞಾನ ಸಂಪನ್ನರೂ ಸಹ ಅದೇ ವಿಷಯವನ್ನೇ ಹೇಳುತ್ತಿದ್ದಾರೆ. ಶರೀರದಲ್ಲಿ ಅಧಿಪತಿಯಾಗಿರುವವನು ಮತ್ತು ಶರೀರದಲ್ಲಿ ಬುದ್ಧಿಯೆನ್ನುವ ಅದರಿಂದ ಯೋಚಿಸುವವನಾದ ಆತ್ಮವೇ ಆರಾಧ್ಯ ದೈವ ಎಂದು ಹೇಳಿದಂತೆ ಮೇಲಿನ ವಾಕ್ಯ ಸಾಕ್ಷಿಯಾಗಿ ಇದೆ. ಆತ್ಮಗಳು ಮೂರಾದರೆ ಅದರಲ್ಲಿ ಮೊದಲನೆಯವನು ಜೀವಾತ್ಮ ಆದಾಗ, ಉಳಿದ ಎರಡು ಆತ್ಮಗಳು ಎರಡು ವಿಧಗಳಲ್ಲಿ ಸೃಷ್ಠಿಕರ್ತರಾಗಿದ್ದಾರೆ. ಅದರಲ್ಲಿ 'ಪ್ರಪ್ರಥಮವಾಗಿ ಸೃಷ್ಠಿಸಿದವನು ಪರಮಾತ್ಮ'ಯೆಂದು, ಎರಡನೆ ಸೃಷ್ಠಿಯಾದ 'ಮನುಷ್ಯರನ್ನು ಸೃಷ್ಠಿಸಿದವನು' ಆತ್ಮಯೆಂದು ಹೇಳಿಕೊಂಡಿದ್ದೇವೆ ಅಲ್ಲವೆ! ಆತ್ಮ, ಪರಮಾತ್ಮರನ್ನು ಇಬ್ಬರನ್ನೂ ಅಂತಿಮ ದೈವ ಗ್ರಂಥದಲ್ಲಿ ಒಂದೇ ಹೆಸರಿನೊಂದಿಗೆ ಅಂದರೆ 'ಅಲ್ಲಾಹ್' ಎನ್ನುವ ಹೆಸರಿನಿಂದ ಕರೆಯುವುದು ನಡೆಯುತ್ತಿದೆ. ಅದೇ ಇಂಜೀಲ್ (ಬೈಬಲ್) ಗ್ರಂಥದಲ್ಲಿ ತಂದೆಯೆಂದು ಆತ್ಮನನ್ನು ಪರಿಶುದ್ಧಾತ್ಮಯೆಂದು ಪರಮಾತ್ಮನನ್ನು ಹೇಳಲಾಗಿದೆ. ಆದರೆ ಅಂತಿಮ ದೈವ ಗ್ರಂಥದಲ್ಲಿ ಆತ್ಮನನ್ನು, ಪರಮಾತ್ಮನನ್ನು ಇಬ್ಬರನ್ನೂ ಒಂದೇ ಹೆಸರಿನೊಂದಿಗೆ ಕರೆಯುವುದರಿಂದ ಕೆಲವರು ಆ ವಿಷಯವನ್ನು ಗ್ರಹಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದಾರೆ. ಇಬ್ಬರು ಅಲ್ಲಾಹ್‌ರು ಮಹಿಮೆ ಇರುವವರೇ ಆಗಿರುವುದರಿಂದ ಯಾರು ಆರಾಧ್ಯ

ದೈವ? ಎನ್ನುವ ಪ್ರಶ್ನೆ ಬಾರದಂತೆ ಪರಮಾತ್ಮ ಎನ್ನಲ್ಪಡುವ ಮೂರನೆ ಅಲ್ಲಾಹ್‌ನೇ ಆತ್ಮ ಎನ್ನಲ್ಪಡುವ ಎರಡನೆ ಅಲ್ಲಾಹ್‌ನನ್ನು ಆರಾಧಿಸಬೇಕೆಂದು ಹೇಳುವುದು ನಡೆದಿದೆ. ಅದೇ ವಿಷಯವನ್ನೇ ಖುರಾನ್‌ನಲ್ಲಿ ಸೂರಾ 16, ಆಯತ್ 51ರಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

**(16–51) "ಅಲ್ಲಾಹ್ ಹೀಗೆ ತಿಳಿಸಿದ್ದಾನೆ. ಇಬ್ಬರು ಆರಾಧ್ಯ ದೇವರುಗಳನ್ನು ಕಲ್ಪಿಸಿಕೊಳ್ಳಬೇಡಿ. ಆರಾಧ್ಯ ದೈವ ಆತನು ಒಬ್ಬನೇ ಆದ್ದರಿಂದ ನೀವೆಲ್ಲಾ ನನಗೆ ಭಯಪಡಿ."**

ಈ ವಾಕ್ಯದಲ್ಲಿ ಇಬ್ಬರು ಅಲ್ಲಾಹ್‌ರು ಇದ್ದಾರೆಂದು, ಅವರಲ್ಲಿ ಒಬ್ಬರನ್ನೇ ಆರಾಧಿಸಿರೆಂದು ಮೂರನೆಯವನಾದ ಪರಮಾತ್ಮ ಎನ್ನಲ್ಪಡುವ ಅಲ್ಲಾಹ್ ಹೇಳಿದಂತೆ ಇದೆ. ಇಬ್ಬರ ವಿಷಯ ತಿಳಿದು ಎರಡನೆಯವನನ್ನು ಆರಾಧಿಸಿರೆಂದು, ಆಗ ಆರಾಧ್ಯ ದೈವ ಒಬ್ಬನೇ ಆಗುವನೆಂದು ಮೂರನೆಯವನು ಹೇಳುವುದೇ ಅಲ್ಲದೆ ಆತನನ್ನು ಆರಾಧಿಸಿರಿ, ಎಲ್ಲರಿಗೂ ದೊಡ್ಡವನಾದ ಮತ್ತು ಮೊದಲ ಸೃಷ್ಠಿಕರ್ತನಾದ ನನಗೆ ಭಯಪಡಿ ಎಂದು ಸಹ ಹೇಳಿದ್ದಾನೆ. ಆದ್ದರಿಂದ ಅಲ್ಲಾಹ್ ಆತನೇ ನಿಮ್ಮ ಆರಾಧ್ಯ ದೈವವೆಂದು ಎರಡನೆಯವನನ್ನು ತೋರಿಸಿದಂತೆ ಇದೆ. ಇಬ್ಬರು ಆರಾಧ್ಯ ಯೋಗ್ಯರು ಅಲ್ಲವೆಂದು ಸಹ ಹೇಳಿದ್ದಾನೆ. ಇಬ್ಬರಲ್ಲಿ ಮೊದಲ ಸೃಷ್ಠಿಕರ್ತನಾದ ತಾನು 'ಯಾವ ಅಕ್ಕರೆ ಇಲ್ಲದವನೆಂದು, ಯಾವ ಆರಾಧನೆ ಅವಶ್ಯವಿಲ್ಲದವನೆಂದು' ಅಂತಿಮ ದೈವ ಗ್ರಂಥದಲ್ಲಿ ಸೂರಾ 112 ಆಯತ್ ಎರಡರಲ್ಲಿ ಹೇಳಿದ್ದಾರೆ ನೋಡಿರಿ.

**(112–2) "ಅಲ್ಲಾಹ್ ಯಾವ ಅಕ್ಕರೆ ಇಲ್ಲದವನು"**

ಇಲ್ಲಿ ಹೇಳಿರುವುದು ಮೂರನೆ ಅಲ್ಲಾಹ್‌ಗೆಂದೂ, 3–18ರಲ್ಲಿ ಹೇಳಿರುವುದು ಎರಡನೆಯ ಅಲ್ಲಾಹ್‌ಗೆಂದು ತಿಳಿಯಬೇಕು. ತಿಳಿಯಲಾರದವರು ಸಂಪೂರ್ಣ ಜ್ಞಾನಿಗಳು ಆಗಲಾರರು. ಶರೀರದಲ್ಲಿನ ಯಂತ್ರಾಂಗವೆಲ್ಲವನ್ನೂ ತಿಳಿದವನು, ತಾನು ಜೀವಾತ್ಮನೆಂದು ತಿಳಿಯುವುದೇ ಅಲ್ಲದೇ ಉಳಿದ ಎರಡು

ಆತ್ಮಗಳ ವ್ಯತ್ಯಾಸವನ್ನು ತಿಳಿದಿರುತ್ತಾನೆ. ಹಾಗೆ ತಿಳಿಯುವುದರಿಂದ ಎರಡನೆಯ ಆತ್ಮ ಎಲ್ಲರಿಗೂ ಆರಾಧ್ಯ ದೈವವೆಂದೂ, ಮೂರನೆಯ ಆತ್ಮ ಮೊದಲ ಸೃಷ್ಠಿಕರ್ತನೆಂದೂ, ಮೊದಲ ಸೃಷ್ಠಕರ್ತನೇ ಎರಡನೆಯ ಆತ್ಮನನ್ನು ಸಹ ಸೃಷ್ಠಿಸಿದವನೆಂದೂ, ಎರಡನೆಯವನನ್ನು ಆರಾಧಿಸಿದರೂ, ಮೂರನೆಯವನ ಬಗ್ಗೆ ಭಯ ಹೊಂದಿರಬೇಕೆಂದು ತಿಳಿದಿರುತ್ತದೆ. ಜ್ಞಾನಿಯಾದವನು ಇವೆಲ್ಲಾ ತಿಳಿದಿರಬೇಕೆನ್ನುವ ಉದ್ದೇಶದಿಂದ ದೇವರು ತನ್ನ ಮೊದಲ ಆಜ್ಞೆಯಲ್ಲಿ ಶರೀರದಲ್ಲಿರುವ **'ಪೂರ್ಣ ಹೃದಯ, ಪೂರ್ಣ ಆತ್ಮ, ಪೂರ್ಣ ಮನಸ್ಸಿನೊಂದಿಗೆ'** ಎಂದು ಹೇಳಿದ್ದಾನೆ.

ಈ ದಿನ ದೇವರು ಎಂದರೂ, ದೇವರ ಜ್ಞಾನವೆಂದರೂ ಸೂಕ್ಷ್ಮವಾಗಿ ಇರುವ ವಿಷಯವೆಂದೂ, ಪ್ರಕೃತಿ ಒಂದೇ ಸ್ಥೂಲವಾಗಿರುವುದೆಂದು ತಿಳಿಯದೆ ಬಹಳ ಜನ ತಾವು ಜ್ಞಾನಿಗಳೆಂದು ಅಂದುಕೊಳ್ಳುತ್ತಿದ್ದಾರೆ. ಶರೀರ, ಶರೀರದೊಳಗಿನ ಸೂಕ್ಷ್ಮವಾಗಿರುವ ಹದಿನೈದು ಭಾಗಗಳು ಮತ್ತು ದೇವರೆಂದು ಕರೆಯಲ್ಪಡುವ ಎರಡು ಆತ್ಮಗಳ ವಿಷಯವನ್ನು ಸ್ವಲ್ಪವೂ ತಿಳಿಯದವರು ವಿವರ ತಿಳಿಯದ ಜ್ಞಾನವನ್ನು ಹೊಂದಿದ್ದಾರೆ. ಆದ್ದರಿಂದ ಅವರು ಸಂಪೂರ್ಣ ಜ್ಞಾನಿಗಳು ಅಲ್ಲವೆಂದು ಹೇಳಬಹುದು. ಅಂತಹವರು ಅಲ್ಲಾಹ್ (ದೇವರು) ಒಬ್ಬನೇಯೆಂದು ಹೇಳುತ್ತಿರುತ್ತಾರೆ. ಆದರೆ ಆ ಒಬ್ಬನು ಯಾರು? ಎನ್ನುವ ವಿವರ ತಿಳಿದಿಲ್ಲ. ಪ್ರಾರ್ಥನೆ ಮಾಡಬೇಕೆಂದು ತಿಳಿದಿದೆ ಆದರೆ ಪ್ರಾರ್ಥನೆ ಯಾವುದರೊಂದಿಗೆ, ಯಾರು ಯಾರನ್ನು ಮಾಡಬೇಕೆಂದು ತಿಳಿದಿಲ್ಲ. ಪ್ರತಿ ಮನುಷ್ಯನಿಗು ಅಂತಿಮ ದಿನವಿದೆಯೆಂದು ಹೇಳುತ್ತಾರೆ. ಅಂತಿಮ ದಿನದಂದು ಪ್ರಳಯ ನಡೆಯುತ್ತದೆ ಎನ್ನುತ್ತಾರೆ. ಆದರೆ ಪ್ರಳಯವೊಂದರ ಅಂತಿಮದಿನ ವೊಂದರ ವಾಸ್ತವಿಕತೆ ತಿಳಿದಿಲ್ಲ. ತನಗೆ ತಿಳಿಯದ ಸತ್ಯಗಳು ಎಷ್ಟೋ ಇವೆಯೆಂದು ಮನುಷ್ಯ ಗ್ರಹಿಸದೆ, ಪ್ರತಿಯೊಂದನ್ನು ಸ್ಥೂಲವಾಗಿ ಲೆಕ್ಕಿಸುತ್ತಾ ನಾನು ಸಂಪೂರ್ಣವಾದ ಜ್ಞಾನಿಯೆಂದು ಪ್ರತಿ ಮತದಲ್ಲಿನ ಮನುಷ್ಯ ಅಂದುಕೊಳ್ಳುವುದು ನಡೆಯುತ್ತಿದೆ. ಆದ್ದರಿಂದ ಮನುಷ್ಯ ಯಾವ ಮತದಲ್ಲಿದ್ದರೂ ನೀವು ದೇವರನ್ನು

ಈ ವಿಧವಾಗಿ ಆರಾಧಿಸಬೇಕೆಂದು ತಿಳಿಸುತ್ತಾ ದ್ವಿತೀಯ ದೈವಗ್ರಂಥದಲ್ಲಿ ದೇವರು ಎರಡು ಆಜ್ಞೆಗಳನ್ನು ತಿಳಿಸಿದ್ದಾನೆ. ಹಾಗೆ ಹೇಳಿದರೂ ಹೇಳಿದ ಆಜ್ಞೆಗಳನ್ನು ಕೂಡ ಮನುಷ್ಯ ತಿಳಿಯದಂತೆ ಎರಡನೆ ಆಜ್ಞೆಯಲ್ಲಿನ ಪಕ್ಕದವನನ್ನು ತನ್ನ ಮನೆಯ ಪಕ್ಕದವನಾಗಿ ತಿಳಿದುಕೊಳ್ಳುತ್ತಿದ್ದಾನೆ. ಮೊದಲ ಆಜ್ಞೆಯಲ್ಲಿನ ವಿಷಯ ಏನೊ ತಿಳಿಯದೇನೇ ಎರಡನೆಯ ಆಜ್ಞೆ ತಿಳಿದಿದೆಯೆಂದು ಅಂದುಕೊಳ್ಳುತ್ತಿದ್ದಾರೆ. ಸಂಪೂರ್ಣ ಜ್ಞಾನಿ ಆದವನು ಇಬ್ಬರು ಅಲ್ಲಾಗಳು (ದೇವರುಗಳು) ಇದ್ದಾರೆಂದು, ಆ ಇಬ್ಬರಲ್ಲಿ ಯಾರು ಏನು ಮಾಡುತ್ತಿದ್ದಾರೆಂದು, ಯಾರು ಯಾರಾಗಿ ಇದ್ದಾರೆಂದು ತಿಳಿದಿರುತ್ತಾನೆ.

ದೇವರು ಮೂರು ದೈವಗ್ರಂಥಗಳಲ್ಲಿ ಹೇಳಿದ ಜ್ಞಾನವನ್ನು ಮನುಷ್ಯ ತಿಳಿದವನಾಗಿ ಮೂರು ಗ್ರಂಥಗಳ ಜ್ಞಾನ ಒಂದೇಯೆಂದು ಸಮನ್ವಯ ಜ್ಞಾನವನ್ನು ತಿಳಿದರೆ, ದೇವರು ಎಂದರೆ ಏನೋ ಸ್ವಲ್ಪ ಸ್ವಲ್ಪವಾಗಿ ತಿಳಿಯುವುದಕ್ಕೆ ಆರಂಭಿಸುತ್ತಾನೆ. ಹಾಗಲ್ಲದೆ ಭಗವದ್ಗೀತೆ ಜ್ಞಾನ ಬೈಬಲ್ ಜ್ಞಾನಕ್ಕಿಂತ ಬೇರೆಯಾದುದೆಂದು ಹಿಂದೂಗಳು ಅಂದುಕೊಂಡರೂ, ಬೈಬಲ್ ಜ್ಞಾನ ಖುರ್ಆನ್ ಜ್ಞಾನಕ್ಕಿಂತಲೂ ಬೇರೆಯಾಗಿದೆಯೆಂದು ಕ್ರೈಸ್ಥರು ಅಂದುಕೊಂಡರೂ, ಖುರ್ಆನ್ ಜ್ಞಾನ ಉಳಿದ ಎರಡು ಗ್ರಂಥಗಳ ಜ್ಞಾನಕ್ಕೆ ಬೇರೆಯಾಗಿದೆಯೆಂದು ಮುಸ್ಲಿಮ್‌ರು ಅಂದುಕೊಂಡರೂ ಅವರಿಗೆ ಜ್ಞಾನ ಸಂಪೂರ್ಣವಾಗಿ ತಿಳಿದಿಲ್ಲವೆಂದು ಹೇಳಬಹುದು. ಒಂದು ಗ್ರಂಥವನ್ನು ಸಂಪೂರ್ಣವಾಗಿ ಓದಿದರೂ ಏನೂ ಪ್ರಯೋಜನೆಯಿಲ್ಲ. ಮೂರು ದೈವಗ್ರಂಥಗಳನ್ನು ಓದದಿದ್ದರೇ, ಮೂರು ದೈವ ಗ್ರಂಥಗಳ ಜ್ಞಾನವನ್ನು ತಿಳಿಯದೆ ಹೋದರೆ, ಆತನು ಯಾವ ಧರ್ಮದಲ್ಲಿಯೂ ಇಲ್ಲದಂತೇಯೆಂದು ಕೊನೆಯ ದೈವ ಗ್ರಂಥದಲ್ಲಿ ಸೂರಾ ಐದು, ಆಯತ್ 68 ರಲ್ಲಿ ಹೇಳಿದ್ದಾರೆ ನೋಡಿರಿ.

**(5–68) "ಓ ಗ್ರಂಥವಾಹಕರೇ! ನೀವು ತೌರಾತನ್ನು, ಇಂಜೀಲನ್ನು (ಭಗವದ್ಗೀತೆಯನ್ನು, ಬೈಬಲ್‌ನ್ನು) ಮತ್ತು ನಿಮ್ಮ ಪ್ರಭು ಕಡೆಯಿಂದ ನಿಮ್ಮ**

**ಹತ್ತಿರಕ್ಕೆ ಕಳಿಸಲ್ಪಟ್ಟಿರುವುದನ್ನು (ಖುರ್‌ಆನ್) ನಿಮ್ಮ ಜೀವನದಲ್ಲಿ ನೆಲೆಗೊಳಿಸುವವರೆಗು ನೀವು ಯಾವ ಧರ್ಮದಲ್ಲೂ ಇಲ್ಲದಂತೆಯೇ".**

ಈ ವಾಕ್ಯದಲ್ಲಿ ಮೂರು ದೈವಗ್ರಂಥಗಳನ್ನು ಓದಿ, ಅದರಲ್ಲಿನ ಜ್ಞಾನವನ್ನು ಜೀವನದಲ್ಲಿ ಆಚರಿಸದೆಹೋದರೆ ಅಂತಹವನು ಯಾವ ಮತದಲ್ಲಿದ್ದರೂ, ಒಂದೇ ದೇವರನ್ನು ಆರಾಧಿಸಿದರೂ ಏನೂ ಪ್ರಯೋಜನೆಯಿಲ್ಲ. ಆತನು ಯಾವ ಧರ್ಮದಲ್ಲಿಯೂ ಇಲ್ಲದಂತೆಯೇ ಲೆಕ್ಕಿಸಲಾಗುತ್ತದೆ. ಆದ್ದರಿಂದ ಸಂಪೂರ್ಣ ಜ್ಞಾನವನ್ನು ತಿಳಿಯುವುದಕ್ಕೆ ಪ್ರತಿ ಮನುಷ್ಯ ಮೂರು ದೈವಗ್ರಂಥಗಳನ್ನು ಓದಿ, ಅದರಲ್ಲಿನ ಜ್ಞಾನವನ್ನು ತಿಳಿಯಬೇಕಾಗಿದೆ. ಆದರೆ ಈ ದಿನ ಮನುಷ್ಯರ ಗುಂಪಿನೊಳಗೆ ದೈವಜ್ಞಾನ ಎನ್ನುವ ಹೆಸರಿನಿಂದ 'ಮತ' ಎನ್ನುವುದು ಪ್ರವೇಶಿಸಿದೆ. ಪ್ರಪಂಚದಲ್ಲಿ ಒಟ್ಟು 12 ಮತಗಳಿವೆ. ಆದರೂ ಅದರಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ಥವ ಎನ್ನುವವು ಮೂರು ಮುಖ್ಯವಾದವು. ಮನುಷ್ಯರ ಸಮಾಜದೊಳಗೆ ಪ್ರವೇಶಿಸಿದ ಮತಗಳು ತಮ್ಮೊಂದಿಗೆ ಮತ ಸಾಂಪ್ರದಾಯಗಳನ್ನು ಕೂಡಾ ಪ್ರವೇಶ ಇಟ್ಟಿವೆ. ಒಂದು ಮತದಲ್ಲಿರುವ ಮನುಷ್ಯ ಆ ಮತ ಸಾಂಪ್ರದಾಯಗಳನ್ನು ಆಚರಿಸುತ್ತಾ ನಾನು ನಿಜವಾಗಲೂ ದೈವಜ್ಞಾನವನ್ನೇ ಆಚರಿಸುತ್ತಿದ್ದೇನೆಂದು ಅಂದುಕೊಳ್ಳುವುದು ನಡೆಯುತ್ತಿದೆ. ಹಾಗಿರುವಾಗ ಮನುಷ್ಯ ಮತದಲ್ಲಿ ಮುಳುಗಿಹೋಗುತ್ತಿದ್ದಾನೆ ಹೊರತು, ದೈವಜ್ಞಾನದೊಳಗೆ ಪ್ರವೇಶಿಸಲಿಲ್ಲ. ಮನುಷ್ಯನಿಗೆ ತಿಳಿಯದ ದೊಡ್ಡ ರಹಸ್ಯ ಏನೇಂದರೆ! ಮತ ಸಾಂಪ್ರದಾಯಗಳು ಬೇರೆ, ದೇವರ ಧರ್ಮಗಳು ಬೇರೆಯೆಂದು ತಿಳಿಯದಿರು ವುದು. ಮತ ಸಾಂಪ್ರದಾಯಗಳು ಯಾವ ಮತಕ್ಕೆ ಸಂಬಂಧಿಸಿದ ಯಾವುದೇ ಒಂದಾಗಲಿ ದೈವಗ್ರಂಥಗಳಲ್ಲಿ ಇರುವುದಿಲ್ಲ. ಮೂರು ದೈವಗ್ರಂಥಗಳಲ್ಲಿ ದೇವರ ಧರ್ಮಗಳು, ಮೂರು ಆತ್ಮಗಳ ವಿಧಾನ, ಪ್ರಕೃತಿ ವಿಧಾನ ಹೊರತು ಯಾವ ಸಾಂಪ್ರದಾಯಗಳು ಇರುವುದಿಲ್ಲ. ಈ ದಿನ ಪ್ರತಿ ಮನುಷ್ಯ ಯಾವುದೋ ಒಂದು ಮತ ಸಾಂಪ್ರದಾಯದಲ್ಲಿ ಸಿಲುಕಿಕೊಂಡಿದ್ದಾನೆ. ಆದ್ದರಿಂದ ದೇವರ ಧರ್ಮಕ್ಕೆ ದೂರವಾಗಿರಬೇಕಾಗಿ ಬಂದಿದೆ. ಮತಸಾಂಪ್ರದಾಯಕ್ಕು ದೇವರ

ಧರ್ಮಕ್ಕು ಹೊಂದಿಕೆಯಾಗುವುದಿಲ್ಲ. ಮತಸಾಂಪ್ರದಾಯವಿರುವವನಲ್ಲಿ ದೈವಧರ್ಮ ಇರುವುದಿಲ್ಲ. ದೈವಧರ್ಮ ಇರುವವನಲ್ಲಿ ಮತಸಾಂಪ್ರದಾಯ ಇರುವುದಿಲ್ಲ. ಒಂದು ವೇಳೆ ದೈವಧರ್ಮ ಇರುವವನು ಮತಸಾಂಪ್ರದಾಯ ದಲ್ಲಿರುವಂತೆ ನಟಿಸಬಹುದು ಆದರೆ, ಮತಸಾಂಪ್ರದಾಯದಲ್ಲಿ ಇರುವವನು ದೈವಧರ್ಮದಲ್ಲಿರುವಂತೆ ನಟಿಸಲಾರನು. ಅಂತಹವನಿಗೆ ಮತಸಾಂಪ್ರದಾಯ ದೊಡ್ಡದಾಗಿ ಕಾಣಿಸುತ್ತದೆ. ಅದೇ ದೈವಜ್ಞಾನವಾಗಿ ತಿಳಿಯುತ್ತದೆ. ಆದ್ದರಿಂದ ಮತದಲ್ಲಿ ಮುಳುಗಿರುವವನಿಗೆ ದೈವಧರ್ಮಗಳು ತಿಳಿಯುವುದಿಲ್ಲ. ಯಾರಾದರೂ ಹೇಳಿದರೂ ಅವು ರುಚಿಸುವುದಿಲ್ಲ. ಯಾವ ಮನುಷ್ಯನಾದರೂ ದೈವಧರ್ಮಗಳು ತಿಳಿಯದೆ ದೇವರ ಮಾರ್ಗದಲ್ಲಿ ಪ್ರಯಾಣಿಸಲಾರನು. ದೇವರ ಮಾರ್ಗದಲ್ಲಿ ಪಯಣಿಸುವುದಕ್ಕೆ ಮೂರು ದೈವಗ್ರಂಥಗಳನ್ನು ಓದಿ ಅದರಲ್ಲಿನ ಜ್ಞಾನವನ್ನು ಗ್ರಹಿಸಿದರೆ ದೈವಧರ್ಮಗಳು ಪೂರ್ತಿಯಾಗಿ ತಿಳಿಯುತ್ತವೆ. ಆಗ ಸಕ್ರಮವಾಗಿ ದೈವಮಾರ್ಗವನ್ನು ಅನುಸರಿಸಬಹುದು.

ಭೂಮಿ ಮೇಲೆ ಹುಟ್ಟಿದ ಯಾವ ಮನುಷ್ಯನಾದರೂ ಜ್ಞಾನಿಯಾಗಿಯೋ, ಅಜ್ಞಾನಿಯಾಗಿಯೋ ಬದುಕುತ್ತಿರುತ್ತಾನೆ. ಜೀವನವನ್ನು ಸಾಗಿಸುವ ಯಾವ ಮನುಷ್ಯನಲ್ಲಾದರೂ ಎಲ್ಲರಲ್ಲಿರುವಂತೆ ಪ್ರಕೃತಿ ತತ್ತ್ವ, ಪುರುಷ ತತ್ತ್ವ ಎರಡೂ ಇರುತ್ತವೆ. ಪುರುಷ ತತ್ತ್ವದಲ್ಲಿ ಮೂರು ಆತ್ಮಗಳು ಶರೀರದಲ್ಲಿವೆ. ಅದರಲ್ಲಿ ಒಂದು ಜೀವಾತ್ಮ. ಜೀವಾತ್ಮ ತಾನು ಸಂಪಾದಿಸಿಕೊಂಡ ಕರ್ಮಪ್ರಕಾರ ಶರೀರದಲ್ಲಿ ಕಷ್ಟ ಸುಖಗಳನ್ನು ಅನುಭವಿಸುತ್ತಿರುತ್ತಾನೆ. ಪ್ರತಿ ಮನುಷ್ಯನಲ್ಲಿ ಪ್ರಕೃತಿ ಸಂಬಂಧವಾದವು ಒಟ್ಟು 24 ಶರೀರಭಾಗಗಳಿವೆ. ಅಷ್ಟೇ ಅಲ್ಲದೆ ಪ್ರಕೃತಿ ಜನಿತಗಳಾದ 108 ಗುಣಗಳು ಮೂರು ಗುಣಭಾಗಗಳಲ್ಲಿವೆ. ಸಾತ್ವಿಕ, ರಾಜಸ, ತಾಮಸ ಗುಣಭಾಗಗಳಲ್ಲಿ ಒಂದೊಂದರಲ್ಲಿ 108 ಗುಣಗಳಿವೆ. 108 ಗುಣಗಳು ಪೂರ್ತಿಯಾಗಿ ಪ್ರಕೃತಿಗೆ ಸಂಬಂಧಿಸಿರುವವಾಗಿದ್ದು, ಮನುಷ್ಯ ಮರಣಿಸಿದರೂ ಗುಣಗಳು ಮಾತ್ರ ಮರಣಿಸದೆ ಜೀವಿಯ ಹಿಂದೆ ಬರುವವಾಗಿವೆ. ಶರೀರ ಭಾಗಗಳೆಲ್ಲವೂ ಮರಣದಲ್ಲಿ ಶಿಥಿಲವಾಗಿ ಹೋದರೂ, ಗುಣಗಳು ಮಾತ್ರ


ಶಿಥಿಲವಾಗದೆ ಶರೀರೊಂದಿಗೆ ಜೀವಿಯನ್ನು ಬಿಟ್ಟುಹೋಗದೆ ಮರುಜನ್ಮಕ್ಕೆ ಬರುತ್ತಿರುತ್ತವೆ. ಅಂತಹ ಗುಣಗಳನ್ನು ಆಧಾರ ಮಾಡಿಕೊಂಡು ಜೀವಿಯ ಕರ್ಮವನ್ನನುಸರಿಸಿ ಶರೀರದಲ್ಲಿ ಎರಡನೆಯ ಆತ್ಮ ಕಾರ್ಯಗಳನ್ನು ಮಾಡುತ್ತಿರುವಾಗ, ಆ ಕಾರ್ಯಗಳಲ್ಲಿ ಬರುವ ಕಷ್ಟ ಸುಖಗಳನ್ನು ಜೀವಾತ್ಮ (ಜೀವಿ) ಅನುಭವಿಸುತ್ತಿದ್ದಾನೆ. ಜೀವಿಯು ಗುಣಗಳ ಮಧ್ಯೆ ನಿವಾಸವಿರುತ್ತಿದ್ದಾನೆ. ಆದ್ದರಿಂದ ಗುಣಗಳಿಂದ ಉಂಟಾಗುವ ಕಾರ್ಯಗಳ ಅನುಭವಗಳನ್ನು ಅನುಭವಿಸುತ್ತಿದ್ದಾನೆ.

ಶರೀರದಲ್ಲಿ ಆತ್ಮ ಅಧಿಪತಿಯಾಗಿ (ಈಶ್ವರನಾಗಿ)ದ್ದು, ಸರ್ವ ಕಾರ್ಯಗಳನ್ನು ಕರ್ಮಪ್ರಕಾರ ಮಾಡುತ್ತಿರುವಾಗ, ಆ ಕಾರ್ಯಗಳ ಫಲಿತಗಳನ್ನು ಅನುಭವಿಸುವುದು ಜೀವಾತ್ಮ ಧರ್ಮವಾಗಿದೆ. ಮನುಷ್ಯನಲ್ಲಿನ ಕರ್ಮಪ್ರಕಾರ ಗುಣಪ್ರೇರೇಪಣೆ ಮಾಡಿ, ಅಂದರೇ ಗುಣಗಳನ್ನು ಬಳಸಿಕೊಂಡು ಗುಣಗಳ ಪ್ರಕಾರ ಆತ್ಮ ಕೆಲಸ ಮಾಡುತ್ತಿರುತ್ತದೆ. ಆತ್ಮ ಮನುಷ್ಯನ ಶರೀರದಲ್ಲಿ ಒಂದು ಕ್ಷಣಕೂಡ ಸುಮ್ಮನಿರದೆ ಶರೀರ ಅಂತರ್ಗತ, ಶರೀರ ಬಹಿರ್ಗತ ಕಾರ್ಯಗಳನ್ನು ಮಾಡುತ್ತಿದೆ. ಆತ್ಮಕ್ಕೆ ಆಯಾಸವಿಲ್ಲ. ಆದ್ದರಿಂದ ಯಾವಾಗಲೂ, ಎಲ್ಲಾ ವೇಳೆಯಲ್ಲಿ ಶರೀರದಲ್ಲಿ ಆತ್ಮ ಕೆಲಸ ಮಾಡುತ್ತಿದೆ. ಜೀವಾತ್ಮವಾದರೆ ಎಚ್ಚರದಲ್ಲಿರುವಾಗ ಮಾತ್ರ ಪಾಪ ಪುಣ್ಯ ಫಲಿತಗಳಾದ ಕಷ್ಟ ಸುಖ ಅನುಭವಗಳನ್ನು ಹೊಂದುತ್ತಿರುತ್ತಾನೆ. ನಿದ್ರೆಯಲ್ಲಿ ಯಾವ ಅನುಭವಗಳಿಲ್ಲದಂತೆ ವಿಶ್ರಾಂತಿ ಹೊಂದಿರುತ್ತಾನೆ. ಆದರೆ ಆತ್ಮಗೆ ಅಂತಹ ಸೌಕರ್ಯವಿಲ್ಲ. ಯಾವಾಗಲೂ ಎಲ್ಲಾ ಕಾಲಗಳಲ್ಲಿ ಕೆಲಸ ಮಾಡಬೇಕಾಗಿರುತ್ತದೆ. ಇನ್ನು ಮೂರನೆಯ ಆತ್ಮವಾದ ಪರಮಾತ್ಮ ಯಾವುದರೊಂದಿಗೆ ಸಂಬಂಧವಿಲ್ಲದೆ ಶರೀರದಲ್ಲಿ ನಡೆಯುವ ಕಾರ್ಯಗಳನ್ನು ಜೀವಿಯು ಅನುಭವಿಸುವ ಅನುಭವಗಳನ್ನು ನೋಡುತ್ತಾ ಸಾಕ್ಷಿಯಾಗಿದ್ದಾನೆ. ಆದ್ದರಿಂದ ಇದೇ ವಿಷಯವನ್ನೇ ಅಂತಿಮ ದೈವಗ್ರಂಥದಲ್ಲಿ ಸೂರಾ 50, ಆಯತ್ 21ರಲ್ಲಿ ಮೂರು ಆತ್ಮಗಳ ವಿಧಾನವನ್ನು ಹೀಗೆ ಹೇಳಿದ್ದಾರೆ ನೋಡಿರಿ.

## (50–21) “ಪ್ರತಿ ಮನುಷ್ಯ ಒಬ್ಬ ನಡೆಸುವವನೊಂದಿಗೆ, ಒಬ್ಬ ಸಾಕ್ಷಿಯಾಗಿರುವವನೊಂದಿಗೂ ಸೇರಿ ಬರುತ್ತಿದ್ದಾನೆ.”

ಈ ವಾಕ್ಯದಲ್ಲಿ ‘ನಡೆಸಲ್ಪಡುವವನು ಜೀವಾತ್ಮ, ನಡೆಸುವವನು ಆತ್ಮ, ನೋಡುವವನು ಪರಮಾತ್ಮ’ ಎಂದು ತಿಳಿಯುವಂತೆ ಹೇಳಿದ್ದಾರೆ. ಈ ವಚನವನ್ನು ಓದಿದರೂ ಮೂರು ಆತ್ಮಗಳನ್ನು ಗುರುತಿಸದೆ ಉಳಿದ ಎರಡು ಆತ್ಮಗಳನ್ನು ಮನುಷ್ಯನ ಹಿಂದೆ ಅಂತಿಮ ದಿನದಂದು ಬರುವ ದೇವದೂತರಾಗಿ ಅರ್ಥ ಮಾಡಿಕೊಂಡಿದ್ದಾರೆ ಅದೇ ವಿಷಯವನ್ನೇ ಇತರರಿಗು ಕೂಡಾ ಹೇಳಿ ವಾಸ್ತವ ಜ್ಞಾನಕ್ಕೆ ತಾವು ದೂರವಾಗಿ ಹೋಗುವುದೇ ಅಲ್ಲದೆ ಇತರರನ್ನು ಕೂಡ ದೂರವಾಗಿ ಕಳಿಸುತ್ತಿದ್ದಾರೆ. ಮುಖ್ಯವಾಗಿ ಪ್ರತಿ ಮತದಲ್ಲಿಯೂ ಮತ ಹಿರಿಯರಾಗಿಯೋ, ಮತ ಬೋಧಕರಾಗಿಯೋ ಕೆಲವರಿರುವುದು ನಡೆಯುತ್ತಿದೆ. ಅಂತಹ ಬೋಧಕರು ತಾವು ದೈವ ಗ್ರಂಥದಿಂದ ತಪ್ಪು ಭಾವನೆಯನ್ನು ಗ್ರಹಿಸಿಕೊಂಡು, ಅದೇ ಸತ್ಯವೆಂದು ನಂಬಿ ಇತರರಿಗು ಕೂಡಾ ತಾನು ತಿಳಿದಿರುವುದನ್ನೇ ಹೇಳುವುದರಿಂದ ಅವರ ಮಾತುಗಳು ಕೇಳಿದವರೆಲ್ಲರೂ ತಪ್ಪುದಾರಿ ಹಿಡಿದು ಅಜ್ಞಾನಿಗಳಾಗಿ ಬದಲಾಗುತ್ತಿದ್ದಾರೆ. ಆದರೂ ಅವರು ತಮ್ಮನ್ನು ತಾವು ಜ್ಞಾನಿಗಳಾಗಿ ಹೇಳಿಕೊಳ್ಳುತ್ತಿದ್ದಾರೆ.

ಮನುಷ್ಯನ ಶರೀರದಲ್ಲಿ ಪ್ರಕೃತಿ ಮತ್ತು ಮೂರು ಆತ್ಮಗಳಿವೆಯೆಂದು ತಿಳಿದುಕೊಂಡಿದ್ದೇವೆ. ಅಷ್ಟೇ ಅಲ್ಲದೆ ಶರೀರದಲ್ಲಿ ಲೆಕ್ಕಿಸಲ್ಪಡುವ 24 ಪ್ರಕೃತಿ ಭಾಗಗಳಲ್ಲದೆ, ಮೂರು ಆತ್ಮಗಳಲ್ಲದೆ, ಸೂಕ್ಷ್ಮದಲ್ಲಿ ಅತೀ ಸೂಕ್ಷ್ಮವಾದ ಪ್ರಕೃತಿಯಲ್ಲಿ ಹುಟ್ಟಿದ ಗುಣಗಳು ಮತ್ತು ಆತ್ಮ ಜನಿತವಾದ ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳು ಮನುಷ್ಯನ ತಲೆಯಲ್ಲಿ ಏರ್ಪಾಟು ಮಾಡಲ್ಪಟ್ಟಿವೆ. ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳ ಆಕಾರವನ್ನು ಕೆಳಗಿನ ಚಿತ್ರದಲ್ಲಿ ನೋಡಬಹುದು. ಇದು ಭಗವದ್ಗೀತೆ ಯಲ್ಲಿ ಅಕ್ಷರ ಪರಬ್ರಹ್ಮಯೋಗವನ್ನು ಅನುಸರಿಸಿ ಮತ್ತು ಪುರುಷೋತ್ತಮಪ್ರಾಪ್ತಿ ಯೋಗ, ಗುಣತ್ರಯ ವಿಭಾಗ ಯೋಗಗಳನ್ನು ಅನುಸರಿಸಿ ಶಾಸ್ತ್ರಬದ್ಧವಾಗಿ ಹೇಳುವುದೇ ಅಲ್ಲದೆ ಚಿತ್ರವಾಗಿ ಗೀಚಿ ತೋರಿಸುವುದಾಗಿದೆ.




**ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳ ಚಿತ್ರವು**

ಕೆಳಗಿನ ಚಿತ್ರ ಒಬ್ಬ ಮಾನವನ ತಲೆಯಲ್ಲಿಯೇ ಅಲ್ಲದೆ ಕರ್ಮದಿಂದ ಹುಟ್ಟಿದ ಪ್ರತಿ ಜೀವರಾಶಿ ಶರೀರದಲ್ಲಿಯೂ ಇದೆಯೆಂದು ತಿಳಿಯಬೇಕು. ಈಗ ನಾವು ಗೀಚಿ ತೋರಿಸಿದ ನಾಲ್ಕು ಚಕ್ರಗಳ ಗುರುತು ಹಿಂದೂಮತದವರಿಗೇ ಅಲ್ಲದೆ ಉಳಿದ ಮತದವರಿಗೂ ಕೂಡಾ ಹೊಸದಾಗಿ ಕಾಣಿಸುತ್ತಿರುತ್ತದೆ. ಪ್ರಥಮ ದೈವ ಗ್ರಂಥದಲ್ಲಿ ಈ ಚಿತ್ರಕ್ಕೆ ಹೆಸರು ಇಲ್ಲದಿದ್ದರೂ ದ್ವಿತೀಯ ಮತ್ತು ಅಂತಿಮ ದೈವ ಗ್ರಂಥಗಳಲ್ಲಿ ಪ್ರತ್ಯೇಕವಾದ ಹೆಸರು ಇಡಲಾಗಿದೆ. ದ್ವಿತೀಯ ದೈವಗ್ರಂಥವಾದ ಇಂಜೀಲು (ಬೈಬಲ್) ನಲ್ಲಿ **'ದೇವರ ಮುದ್ರೆ'** ಯೆಂದು, ತೃತೀಯ ದೈವ ಗ್ರಂಥವಾದ ಖುರ್‌ಆನ್‌ನಲ್ಲಿ **"ದೇವರ ಚಿಹ್ನೆ"** ಎಂದು ಹೇಳಿದ್ದಾರೆ. ದೇವರ ಚಿಹ್ನೆ ಎಂದರೂ, ದೇವರ ಮುದ್ರೆ ಎಂದರೂ ಎರಡೂ ಒಂದೇ ಅರ್ಥ. ಖುರ್‌ಆನ್ ಗ್ರಂಥದಲ್ಲಿ ದೇವರ ಚಿಹ್ನೆಯನ್ನು ಗೌರವಿಸಬೇಕೆಂದು ಸೂರಾ 22 ಆಯತ್ 32ರಲ್ಲಿ ಹೇಳಿದ್ದಾರೆ. ಅದನ್ನು ಈಗ ನೋಡೋಣ.

**(22–32) "ಅಲ್ಲಾಹ್ ಚಿಹ್ನೆಗಳನ್ನು ಯಾರಾದರೂ ಗೌರವಿಸುತ್ತಿದ್ದಾರೆಂದರೇ ಅದು ಅವರ ಹೃದಯಗಳಲ್ಲಿನ ಭಕ್ತಿ ಭಾವನೆಯಿಂದಲೇ"**

ಈ ವಾಕ್ಯವನ್ನು ಬಹಳಜನ ತಪ್ಪಾಗಿ ಅರ್ಥ ಮಾಡಿಕೊಂಡು ಪ್ರಕೃತಿ ವಸ್ತುಗಳನ್ನು, ಪ್ರಕೃತಿ ಆಕಾರಗಳನ್ನು (ಜೀವಿಗಳನ್ನು) ದೇವರ ಚಿಹ್ನೆಗಳಾಗಿ ಹೇಳಿಕೊಳ್ಳುತ್ತಿದ್ದಾರೆ. ಸೃಷ್ಠಿ ಆದಿಯಲ್ಲಿ ದೇವರ ನಾಲ್ಕು ಭಾಗಗಳಿಗೆ ಗುರುತಾಗಿ ನಾಲ್ಕು ಚಕ್ರಗಳು ಒಂದೇ ಅಚ್ಚಿಗೆ (ಇರಸು) ತಗಲಿಸಲ್ಪಟ್ಟಿವೆಯೆಂದು, ನಾಲ್ಕು ಚಕ್ರಗಳು ದೇವರ ಚಿಹ್ನೆಗಳಾಗಿ ಇವೆಯೆಂದು ತಿಳಿಯಲಾರದೆ ಹೋಗಿದ್ದಾರೆ. ಬೈಬಲ್ ಗ್ರಂಥದಲ್ಲಿ ಯೋಹಾನ್ ಪ್ರಕಟಣೆಗಳು ಅನ್ನುವುದರಲ್ಲಿ 9ನೇ ಅಧ್ಯಾಯ 4ನೇ ವಚನದಲ್ಲಿ 'ದೇವರ ಮುದ್ರೆ' ಯೆಂದು ಬರೆದಿದ್ದಾರೆ ನೋಡಿರಿ.

**ಯೋಹಾನ್ ಪ್ರಕಟಣೆಗಳು (9–4) "ಹಣೆಯಲ್ಲಿ ದೇವರ ಮುದ್ರೆಯಿಲ್ಲದ ಮನುಷ್ಯರಿಗೇ ಹೊರತು ಭೂಮಿಮೇಲಿರುವ ಹುಲ್ಲಿಗಾದರೂ, ಯಾವ ಸಸಿಗಳಿಗಾದರೂ, ಮತ್ತು ಯಾವ ವೃಕ್ಷಕ್ಕಾದರೂ ಹಾನಿ ಉಂಟುಮಾಡ ಬಾರದೆಂದು ಅವುಗಳಿಗೆ ಆಜ್ಞೆ ಕೊಡಲಾಗಿದೆ."**

ಈ ವಾಕ್ಯದಲ್ಲಿ ಹಣೆಯ ಮೇಲೆ ಧರಿಸುವ ದೇವರ ಮುದ್ರೆಯೆಂದು ಹೇಳುವುದರಿಂದ ಅದು ಪ್ರತ್ಯೇಕವಾದ ಅರ್ಥದಿಂದ ಕೂಡಿಕೊಂಡಿರುವ ಗುರುತೆಂದು ಅರ್ಥವಾಗುತ್ತಿದೆ. ಆ ಗುರುತು ಹೇಗಿರುತ್ತದೋ ದ್ವಿತೀಯ, ತೃತೀಯ ದೈವ ಗ್ರಂಥಗಳಲ್ಲಿ ಹೇಳದಿದ್ದರೂ ಪ್ರಥಮ ದೈವ ಗ್ರಂಥ ಭಗವದ್ಗೀತೆಯಲ್ಲಿ ಪೂರ್ತಿ ಸಮಾಚಾರ ಇರುವುದರಿಂದ ದೇವರ ಮುದ್ರೆ ಚಿತ್ರವನ್ನು ಸುಲಭವಾಗಿ ಗೀಚಿ ತೋರಿಸಿದ್ದೇವೆ. ಇದನ್ನು ಜೀವಿಯಾದ ನಾನು ತೋರಿಸುತ್ತಿಲ್ಲ. ಶರೀರದಲ್ಲಿ ಅಧಿಪತಿಯಾಗಿರುವ ಆತ್ಮ ಪ್ರೇರಣೆಯಿಂದ ಗೀಚಲ್ಪಟ್ಟಿದೆಯೆಂದು ತಿಳಿಯಿರಿ. ಈ ಗುರುತನ್ನು ಗೀಚಿ ತೋರಿಸುವುದರಿಂದ ಶರೀರದಲ್ಲಿ ಜೀವಾತ್ಮ ಕೆಳಗಿನ ಚಕ್ರದಲ್ಲಿರುವ ಮೂರು ಗುಣ ಭಾಗಗಳಲ್ಲಿ ಯಾವುದೋ ಒಂದು ಭಾಗದಲ್ಲಿ ಇದ್ದಾನೆಂದು ತಿಳಿಯುತ್ತಿದೆ. ಅಷ್ಟೇ ಅಲ್ಲದೆ

ಮನುಷ್ಯ ಸಂಪಾದಿಸಿದ ಕರ್ಮ ಎಲ್ಲಿ ನೆಲೆ ಇರುವುದು ಕೂಡಾ ತಿಳಿದು ಹೋಗುತ್ತಿದೆ. ದ್ವಿತೀಯ ದೈವ ಗ್ರಂಥದಲ್ಲಿ **'ಪೂರ್ಣ ಹೃದಯದೊಂದಿಗೆ'** ಎಂದಾಗ ಅದರಲ್ಲಿ ನಾಲ್ಕು ಚಕ್ರಗಳ ಮುದ್ರೆ ಕೂಡ ಸೇರಿಹೋಗುತ್ತಿದೆ. ದೇವರ ಮೊದಲ ಆಜ್ಞೆ ಪ್ರಕಾರ ಜೀವಿಯು ನಿವಾಸಿಸುವ ವಿಧಾನ ಕೂಡಾ ತಿಳಿದು, ದೇವರನ್ನು ಪ್ರಾರ್ಥಿಸಬೇಕು ಎನ್ನುವ ಮಾತು ಅರ್ಥವಾಗುತ್ತಿದೆ. ಇದೆಲ್ಲವೂ ತಿಳಿದ ನಂತರ ಪ್ರತಿ ಮನುಷ್ಯನೊಳಗಿನ ವಿಧಾನವೆಲ್ಲವೂ ತಿಳಿಯುತ್ತಿದೆ. ಮನುಷ್ಯ ಎನ್ನುವವನು ಜ್ಞಾನಿಯಾಗಬಹುದು, ಅಜ್ಞಾನಿ ಆಗಬಹುದು ಆತನು ಯಾರಾಗಲಿ ಶರೀರದೊಳಗಿನ ವಿಧಾನವೆಲ್ಲಾ ಇಷ್ಟೇಯೆಂದು ತಿಳಿಯುವುದೇ ಮೊದಲ ಜ್ಞಾನ. ಅದನ್ನೇ ದೇವರು ಮೊದಲ ಆಜ್ಞೆಯಾಗಿ ಹೇಳಿದ್ದಾನೆ. ದೇವರು ಹೇಳಿದ ಮೊದಲ ಆಜ್ಞೆ ಪ್ರಕಾರ ಪ್ರತಿ ಮನುಷ್ಯ ತನ್ನ ಶರೀರದಲ್ಲಿ ತಾನು ಎಲ್ಲಿದ್ದಾನೋ ತಿಳಿಯಬೇಕು.

ನಿಮಗೆ ಬಹಳ ಜನರಿಗೆ ತಿಳಿಯದ ವಿವರವನ್ನು ಹೇಳಿದ ನಾನು ಶರೀರದಲ್ಲಿ ನೀವು ಹೇಗಿದ್ದೀರೋ. ನಾನು ಕೂಡಾ ಹಾಗೆಯೇ ಇದ್ದೇನೆಂದು ಹೇಳುತ್ತಿದ್ದೇನೆ. ಎಷ್ಟು ಜ್ಞಾನಿ ಆದರೂ, ಎಷ್ಟು ಅಜ್ಞಾನಿ ಆದರೂ ಶರೀರ ಧರಿಸಿ ಇರುವುದು ಸಹಜ. ಹಾಗೆಯೇ ಎಲ್ಲರೂ ಅಂತರ್ಗತದಲ್ಲಿ ಹೇಗಿದ್ದಾರೋ ಹಾಗೆಯೇ ಇರುವುದು ಸಹಜ. ಶರೀರ ವಿಧಾನದಲ್ಲಿ ಯಾರಿಗೆ ಅಂದರೇ, ಯಾವ ಮನುಷ್ಯನಿಗೂ ಬದಲಾವಣೆ ಇರುವುದಿಲ್ಲ. ಭೂಮಿಮೇಲೆ ಹುಟ್ಟಿದ ಪ್ರತಿ ಮನುಷ್ಯ ಒಂದೇ ಕೋನದಲ್ಲಿ ಇರುವಾಗ ಮನುಷ್ಯರಿಗೆ ದೇವರಾದವನು ಮನುಷ್ಯನಿಗೆ ಅಂದರೇ ಜೀವಿಗೆ ಭಿನ್ನವಾದ ಎರಡನೆಯ ಕೋನದಲ್ಲಿದ್ದಾನೆ. ಒಂದು ಕೋನದಲ್ಲಿರುವ ಮನುಷ್ಯ ಎರಡನೆ ಕೋನದಲ್ಲಿರುವ ದೇವರನ್ನು ತಿಳಿಯುವುದಕ್ಕೆ ಒಂದು ವಿದ್ಯೆಯನ್ನು ಕಲಿಯಬೇಕಾಗಿರುತ್ತದೆ. ಅದನ್ನೇ ಬ್ರಹ್ಮವಿದ್ಯೆ ಎಂದು ಕರೆಯುತ್ತಾರೆ. ಬ್ರಹ್ಮ ಎಂದರೇ ದೊಡ್ಡವ ಎಂದು ಅರ್ಥ. ಬ್ರಹ್ಮವಿದ್ಯೆ ಎಂದರೆ ದೊಡ್ಡ ವಿದ್ಯೆಯೆಂದು ಅರ್ಥ. ಅದನ್ನೇ ಆಧ್ಯಾತ್ಮಿಕ ವಿದ್ಯೆಯೆಂದು ಕರೆಯುತ್ತಾರೆ. ಬ್ರಹ್ಮವಿದ್ಯೆಯನ್ನು ಕಲಿತವನಿಗೆ ದೈವ ಗ್ರಂಥದಲ್ಲಿ ದೇವರು

ಮನುಷ್ಯರಿಗೆ ಹೇಳಿದ ಮುಖ್ಯವಾದ ಎರಡು ಆಜ್ಞೆಗಳು ಏನೋ ಸುಲಭವಾಗಿ ತಿಳಿಯುತ್ತದೆ. ಎರಡು ಆಜ್ಞೆಗಳು ತಿಳಿದವನಿಗೆ ಶರೀರದಲ್ಲಿರುವ ಯಂತ್ರಾಂಗ ವೆಲ್ಲವೂ ಸುಲಭವಾಗಿ ಅರ್ಥವಾಗಿರುತ್ತದೆ. ಹಾಗೆ ಅರ್ಥವಾದವನು ಮನುಷ್ಯ ಯಾವ ಕೋನದಲ್ಲಿದ್ದಾನೋ, ದೇವರು ಯಾವ ಕೋನದಲ್ಲಿದ್ದಾನೋ ತಿಳಿಯಬಲ್ಲನು. ಆಗ ಮನುಷ್ಯ ಜೀವಿಯ ಕೋನವು ಬೇರೆ, ದೇವರ ಕೋನವು ಬೇರೆಯೆಂದು ತಿಳಿಯಬಲ್ಲನು. ದ್ವಿತೀಯ ದೈವಗ್ರಂಥ ಮತ್ತಾಯ ಸುವಾರ್ತೆ 22ನೇ ಅಧ್ಯಾಯ 39,40 ವಚನಗಳಲ್ಲಿ ಹೀಗೆ ಬರೆದಿದ್ದಾರೆ ನೋಡಿರಿ.

**ಮತ್ತಾಯ (22–39,40) "ನಿನ್ನಂತೆ ನಿನ್ನ ಪಕ್ಕದವನನ್ನು ಪ್ರೀತಿಸಬೇಕೆನ್ನುವ ಎರಡನೆಯ ಆಜ್ಞೆಯು ಅದರಂಥಾದ್ದೇ. ಈ ಎರಡು ಆಜ್ಞೆಗಳು ಧರ್ಮಶಾಸ್ತ್ರ ಕ್ಕೆಲ್ಲದಕ್ಕೂ, ಪ್ರವಕ್ತರಿಗು ಆಧಾರವಾಗಿವೆಯೆಂದು ಆತನೊಂದಿಗೆ ಹೇಳಿದ್ದಾನೆ."**

ಎರಡು ಆಜ್ಞೆಗಳು ಧರ್ಮಶಾಸ್ತ್ರಕ್ಕು ಪ್ರವಕ್ತರಿಗು ಆಧಾರವಾಗಿವೆಯೆಂದು ಹೇಳುವುದರಿಂದ ಈ ಎರಡು ವಾಕ್ಯಗಳನ್ನು ಜಾಗ್ರತೆಯಾಗಿ ಅವಲೋಕನ ಮಾಡಿಕೊಳ್ಳಬೇಕಾಗಿದೆ. ಮೊದಲ ಆಜ್ಞೆಯನ್ನು ಇಲ್ಲಿಯವರೆಗು ಹೇಳಿ ಕೊಂಡಿದ್ದೇವೆ. ಈಗ ಎರಡನೆ ಆಜ್ಞೆಯಲ್ಲಿನ ಮುಖ್ಯವಾಗಿ **'ನಿನ್ನಂತೆ ನಿನ್ನ ಪಕ್ಕದವನನ್ನು'** ಎಂದು ಇದೆ. ಇದರಲ್ಲಿ **ನೀನು ಯಾರು**? **ನಿನ್ನ ಪಕ್ಕದವನು ಯಾರು**? ಎನ್ನುವ ಎರಡೇ ಮುಖ್ಯವಾಗಿವೆ. ನೀನು ಜೀವಾತ್ಮನೆಂದು, ನಿನ್ನ ಪಕ್ಕದವನು ಆತ್ಮಯೆಂದು ತಿಳಿದು, ಪಕ್ಕದವನಾದ ಆತ್ಮವೇ ಹಿಂದೂಗಳ ದೇವರು, ಮುಸ್ಲಿಮ್‌ರಿಗೆ ಆರಾಧಿಸಲ್ಪಡುವ ಅಲ್ಲಾಹ್ ಎಂದು ತಿಳಿಯುವುದು ಮುಖ್ಯ. ಹಾಗೆ ನಿನ್ನನ್ನು ನಿನ್ನ ಹಿಂದೆ ಆತ್ಮನಾಗಿರುವ ಆತ್ಮವನ್ನು ತಿಳಿಯುವುದೇ ನಿಜವಾದ ದೈವಜ್ಞಾನ. ಆದ್ದರಿಂದಲೇ ದೇವರು ಹೇಳಿದ ಎರಡು ಆಜ್ಞೆಗಳು ಧರ್ಮಶಾಸ್ತ್ರಕ್ಕು ಮತ್ತು ಪ್ರವಕ್ತರಿಗು ಆಧಾರವಾದ ವಾಕ್ಯಗಳೆಂದು ಹೇಳಿದ್ದಾರೆ. ಇದೇ ವಿಷಯವನ್ನೇ ನಾನು ಗ್ರಂಥ ಪ್ರಾರಂಭದಿಂದಲೂ ಹೇಳುತ್ತಿದ್ದೇನೆ. ಈ ಎರಡು ಆಜ್ಞೆಗಳು

ಶರೀರದೊಳಗೆ ಮಿಳಿತವಾಗಿವೆ. ಶರೀರಯಂತ್ರಾಂಗವನ್ನು ತಿಳಿದವನು ಎರಡು ಆಜ್ಞೆಗಳ ಸಾರಾಂಶವನ್ನು ತಿಳಿಯಬಲ್ಲನು. ಎರಡು ಆಜ್ಞೆಗಳನ್ನು ತಿಳಿದವನು ತನ್ನ ಕೋನವನ್ನು, ದೇವರ ಕೋನವನ್ನು ತಿಳಿಯಬಲ್ಲನು.

ಇಲ್ಲಿಯವರೆಗು ಮನುಷ್ಯನಲ್ಲಿ ಎರಡು ಕೋನಗಳು ಇವೆಯೆಂದು ಒಂದು ಕೋನದಲ್ಲಿ ಜೀವಾತ್ಮ ಇರುವಾಗ, ಮತ್ತೊಂದು ಕೋನದಲ್ಲಿ ಆತ್ಮ ಮನುಷ್ಯನಿಗೆ ಆರಾಧಿಸಲ್ಪಡುವವನಾಗಿ ಇದ್ದಾನೆಂದು ತಿಳಿದುಕೊಂಡಿದ್ದೇವೆ. ಶರೀರದಲ್ಲಿನ ಎರಡು ಕೋನಗಳು ತಿಳಿದು ಎರಡನೆ ಕೋನದಲ್ಲಿರುವ ದೇವರನ್ನು (ಆತ್ಮವನ್ನು) ಆರಾಧಿಸುವುದೇ ಧರ್ಮಶಾಸ್ತ್ರದಲ್ಲಿ ಹೇಳಿದ ಮುಖ್ಯವಾದ ಜ್ಞಾನವೆಂದು ತಿಳಿದಿದೆ. ಆದರೆ ಮನುಷ್ಯರಾಗಿರುವವರು ಶರೀರದ ಹೊರಗಿನ ಧ್ಯಾಸದಿಂದ, ಶರೀರದ ಹೊರಗಿನ ಜ್ಞಾನವನ್ನೇ ತಿಳಿದು, ಶರೀರದ ಹೊರಗಿನ ಆರಾಧನೆಗಳನ್ನೇ ಮಾಡುತ್ತಾ, ಶರೀರದ ಹೊರಗಿನ ಪ್ರಾರ್ಥನೆಗಳನ್ನೇ ಮಾಡುತ್ತಿದ್ದಾರೆ. ಶರೀರದ ಒಳಗಿನ ವಿಧಾನ ತಿಳಿಯದೆ ಹೊರಗೆ ಮಾಡುವ ಆರಾಧನೆಗಳು, ಪ್ರಾರ್ಥನೆಗಳು ದೇವರ ಲೆಕ್ಕದಲ್ಲಿ ಸರಿಯಾದವುಗಳಲ್ಲವೆಂದು, ಅದು ಧರ್ಮ ಶಾಸ್ತ್ರದಲ್ಲಿ ಧರ್ಮಅಲ್ಲವೆಂದು, ಪ್ರವಕ್ತರು ಹೇಳುವ ಜ್ಞಾನ ಕೂಡಾ ಅಲ್ಲವೆಂದು ದ್ವಿತೀಯ ದೈವಗ್ರಂಥದಲ್ಲಿ ಹೇಳಿದ ಎರಡು ಆಜ್ಞೆಗಳನ್ನು ನೋಡಿದ್ದೇವೆ. ಮನುಷ್ಯ ಯಾವ ಮತದಲ್ಲಿ ಇದ್ದರೂ ಎರಡು ಆಜ್ಞೆಗಳ ಪ್ರಕಾರ ತಪ್ಪದೆ ನಡೆಯಬೇಕಾಗಿರುತ್ತದೆ. ಆದರೆ ಈ ದಿನ ದೈವ ಗ್ರಂಥದಲ್ಲಿನ 'ದೇವರು ಒಬ್ಬನೇ' ಎನ್ನುವ ಮಾತನ್ನು ಮಾತ್ರ ಹಿಡಿದುಕೊಂಡು ನಾವು ಒಂದೇ ದೇವರನ್ನು ಆರಾಧಿಸುತ್ತಿದ್ದೇವೆ. ದೇವರನ್ನು ವಿನಹಃ ಯಾರನ್ನು ಆರಾಧಿಸಲಿಲ್ಲ ಎಂದು ಹೇಳಿದರೂ ಅವರು ಎರಡು ಆಜ್ಞೆಗಳಿಗು ಒಳಗಾಗಿ ನಡೆಯಲಿಲ್ಲ, ಆದ್ದರಿಂದ ಅವರು ಮಾಡುವ ಆಚರಣೆಗಳು, ಆರಾಧನೆಗಳು ಎಲ್ಲಾ ಹೊರಗಿನವೇ ಆಗುತ್ತಿವೆ. ಆದ್ದರಿಂದ ಸಾರಾಂಶ ಇಲ್ಲದವುಗಳಾಗಿ ವ್ಯರ್ಥವಾಗಿ ಹೋಗುತ್ತಿವೆ.

ಮನುಷ್ಯ ಗತ ಜನ್ಮಗಳ ಕರ್ಮದಿಂದ ಮತ್ತೆ ಮತ್ತೆ ಹುಟ್ಟುತ್ತಿದ್ದಾನೆ. ದೈವಜ್ಞಾನ ತಿಳಿಯದಿರುವುದರಿಂದ ಹುಟ್ಟಿದ ಪ್ರತಿ ಜನ್ಮದಲ್ಲಿಯೂ ಕರ್ಮವನ್ನು ಸಂಪಾದಿಸಿಕೊಳ್ಳುತ್ತಿದ್ದಾನೆ. ಅದನ್ನು ಅನುಭವಿಸುವುದಕ್ಕೆ ಪುನಃ ಹುಟ್ಟುತ್ತಿದ್ದಾನೆ. ಈ ವಿಧವಾಗಿ ಮನುಷ್ಯನಿಗೆ ಜನನ ಮರಣಗಳು ಸರ್ವಸಾಧಾರಣವಾಗಿ ಇರುತ್ತಿವೆ. ಕರ್ಮದಿಂದ ಹೊರಬಿದ್ದು ಜನ್ಮಗಳಿಗೆ ಹೋಗದಂತೆ ದೇವರೊಳಗೆ ಐಕ್ಯವಾಗುವುದಕ್ಕೆ ತಕ್ಕ ಉಪಾಯವಾಗಿ ದೇವರು ತನ್ನ ಜ್ಞಾನವನ್ನು ಪ್ರಜೆಗಳಿಗೆ ಹೇಳಿದ್ದಾನೆ. ಪ್ರಜೆಗಳು ದೇವರ ಜ್ಞಾನ ತಿಳಿಯುವುದರಿಂದ, ತಿಳಿದು ಆಚರಿಸುವುದರಿಂದ, ಅವರ ಆಚರಣೆಗಳಲ್ಲಿ ಅಂದರೇ ಆರಾಧನೆಗಳಲ್ಲಿ ಜ್ಞಾನಶಕ್ತಿ ಮನುಷ್ಯನಿಗೆ ಲಭಿಸುತ್ತದೆ. ಜ್ಞಾನಶಕ್ತಿಯನ್ನೇ ಭಗವದ್ಗೀತೆಯಲ್ಲಿ 'ಜ್ಞಾನಾಗ್ನಿ' ಎಂದು ಕೂಡಾ ಹೇಳಿದ್ದಾರೆ. ಕರ್ಮಗಳನ್ನು ಕಟ್ಟಿಗೆಗಳಾಗಿ, ಜ್ಞಾನವನ್ನು ಅಗ್ನಿಗೆ ಹೋಲಿಸಿ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಹೇಳುವುದಾಗಿದೆ. ಅದೇ ವಿಷಯವನ್ನೇ ಉಳಿದ ಎರಡು ದೈವ ಗ್ರಂಥಗಳಲ್ಲಿ ಕೂಡಾ ಹೇಳಿದ್ದಾರೆ. ಗೀತೆಯಲ್ಲಿ **'ಕರ್ಮ ದಹನ'** ಎಂದು ಹೇಳಿದ ಮಾತನ್ನೇ ಇತರ ದೈವ ಗ್ರಂಥಗಳಲ್ಲಿ **'ಪಾಪ ಕ್ಷಮಾಪಣೆ'** ಎಂದು ಹೇಳಿದ್ದಾರೆ. ಪಾಪ ಪುಣ್ಯಗಳು ಎರಡೂ ಸೇರಿ ಕರ್ಮವಾಗಿದ್ದು, ಕರ್ಮವನ್ನು ದೇವರ ಜ್ಞಾನ ದಹಿಸಿ ಇಲ್ಲದಂತೆ ಮಾಡುತ್ತಿದೆ. ಈ ವಿಷಯವನ್ನು ಶಾಸ್ತ್ರಬದ್ಧವಾಗಿ ತಿಳಿಯಬೇಕೆಂದರೇ ಭಗವದ್ಗೀತೆ ಜ್ಞಾನಯೋಗದಲ್ಲಿ 37ನೇ ಶ್ಲೋಕದಲ್ಲಿ ಹೇಳಿದ್ದಾರೆ ನೋಡಿರಿ.

***ಶ್ಲೋ॥ 37.*** ***ಯಥೈಧಾಂಸಿ ಸಮಿದ್ಧೋಗ್ನಿ ರ್ಭಸ್ಮಸಾತ್ಕುರುತೇರ್ಜುನ।***
***ಜ್ಞಾನಾಗ್ನಿ ಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ॥***

**ಭಾವಾರ್ಥ:–** ಅಗ್ನಿಯಲ್ಲಿ ಎಷ್ಟು ಕಟ್ಟಿಗೆಗಳಾದರೂ ಸುಟ್ಟು ಬೂದಿಯಾದಂತೆ, ಜ್ಞಾನವೆನ್ನುವ ಅಗ್ನಿಯಿಂದ ಸರ್ವಕರ್ಮಗಳು ಅನುಮಾನವಿಲ್ಲದೆ ಸುಟ್ಟು ಭಸ್ಮವಾಗಿಹೋಗುತ್ತಿವೆ.

ಈ ದಿನ ಮನುಷ್ಯರಾಗಿರುವವರು ಮತಗಳನ್ನನುಸರಿಸಿ, ಕೆಲವು ಮತ ಗುಂಪುಗಳಾಗಿ ವಿಭಜಿಸಲ್ಪಟ್ಟಿದ್ದಾರೆ. ಉದಾಹರಣೆಗೆ ಒಂದು ಪಟ್ಟಣದಲ್ಲಿ

ಲಕ್ಷಮಂದಿ ಜನಸಂಖ್ಯೆ ಇದ್ದರೆ ಅದರಲ್ಲಿ 30 ಸಾವಿರ ಮುಸ್ಲಿಮ್‌ರು, 30 ಸಾವಿರ ಕ್ರೈಸ್ಥರು, 40 ಸಾವಿರ ಹಿಂದೂಗಳು ಇದ್ದಾರೆಂದು ಅಂದುಕೊಳ್ಳಿರಿ. ಆಗ ಅವರು ಮೂರು ಸಮಾಜಗಳಾಗಿ ವಿಭಜಿಸಲ್ಪಟ್ಟಿದ್ದಾರೆ. ಮೂರು ಬೇರೆಬೇರೆ ಸಮಾಜಗಳಾಗಿ ಇರುವುದೇ ಅಲ್ಲದೆ, ಬೇರೆಬೇರೆ ಸಾಂಪ್ರದಾಯಗಳನ್ನು ಹೊಂದಿದ್ದಾರೆ. ಬೇರೆಬೇರೆ ಸಾಂಪ್ರದಾಯಗಳನ್ನೇ ತಮ್ಮತಮ್ಮ ಜ್ಞಾನವಾಗಿ ಹೇಳಿಕೊಳ್ಳುತ್ತಾ ನಾವು ಆರಾಧಿಸುವ ದೇವರು ಬೇರೆ, ನೀವು ಆರಾಧಿಸುವ ದೇವರು ಬೇರೆಯೆಂದು ಹೇಳುತ್ತಿದ್ದಾರೆ. ಅಲ್ಲಿಗೆ ಸುಮ್ಮನಿರದೆ ನಮ್ಮ ದೇವರು ಈ ವಿಧವಾಗಿ ನಮ್ಮ ಗ್ರಂಥದಲ್ಲಿ ಹೇಳಿದ್ದಾನೆ ನಿಮ್ಮ ದೇವರು ಬೇರೆ ವಿಧವಾಗಿ ನಿಮ್ಮ ಗ್ರಂಥದಲ್ಲಿ ಹೇಳಿದ್ದಾನೆ ಎಂದು ದೇವರನ್ನು ಬೇರೆ ಮಾಡುವುದೇ ಅಲ್ಲದೆ ದೈವ ಗ್ರಂಥಗಳನ್ನು, ಅದರಲ್ಲಿನ ಜ್ಞಾನವನ್ನು ಬೇರೆಬೇರೆ ಮಾಡಿ ತೋರಿಸುತ್ತಿದ್ದಾರೆ. ಹಾಗಿರುವಾಗ ಶರೀರಾಂತರ್ಗತ ಜ್ಞಾನವನ್ನು ಬಿಟ್ಟು ಹೊರಗಿನ ಸಾಂಪ್ರದಾಯಗಳಲ್ಲಿಯೂ, ಹೊರಗಿನ ಆರಾಧನೆಗಳಲ್ಲಿಯೂ ಬೇರೆಬೇರೆಯಾಗಿ ಹೋಗುವಂತೆ ಕಾಣಿಸುತ್ತಿದ್ದಾರೆ. ದೈವಜ್ಞಾನವನ್ನು ಶರೀರದಲ್ಲಿ ತಿಳಿಯದೆ, ಶರೀರದಲ್ಲಿ ಎಲ್ಲರಿಗೂ ಒಂದೇ ವಿಧಾನ ಇದೆಯೆಂದು ತಿಳಿಯದಿರುವುದರಿಂದ ಯಾರ ಆರಾಧನೆಯಲ್ಲಿಯೂ ಜ್ಞಾನಶಕ್ತಿ ಇಲ್ಲದಂತೆ ಹೋಗಿದೆ. ಮನುಷ್ಯ ಮಾಡುವ ಆರಾಧನೆಯಲ್ಲಿಯು ಹಾಗೆಯೇ ಮನುಷ್ಯ ತಿಳಿಯುವ ಜ್ಞಾನದಲ್ಲಿಯು ಜ್ಞಾನವೆಂಬ ಅಗ್ನಿ ಇರಬೇಕು. ಆದರೆ ದೇವರ ಆಜ್ಞೆಗಳ ಪ್ರಕಾರವಲ್ಲದೆ ಸ್ವತಃವಾಗಿ ಏರ್ಪಾಟು ಮಾಡಿಕೊಂಡ ವಿಧಾನದ ಪ್ರಕಾರ ಮನುಷ್ಯರು ಪ್ರಾರ್ಥನೆ ಮಾಡುವುದರಿಂದ ಆ ಪ್ರಾರ್ಥನೆಗಳಲ್ಲಿ ಜ್ಞಾನಾಗ್ನಿ ಇಲ್ಲದಂತೆ ಹೋಗಿದೆ. ಜ್ಞಾನಾಗ್ನಿ ಇಲ್ಲದಿರುವುದರಿಂದ ಮನುಷ್ಯ ಮಾಡಿಕೊಂಡ ಕರ್ಮಗಳು ಸುಟ್ಟುಹೋಗುತ್ತಿಲ್ಲ. ಅಂದರೇ ದೇವರಿಂದ ಕ್ಷಮಿಸಲ್ಪಡಲಿಲ್ಲ. ಹಾಗಿರುವಾಗ ಹೊರಗಿನ ಪ್ರಪಂಚದಲ್ಲಿ ಎಂತಹ ದೊಡ್ಡ ಬೋಧಕನಾಗಿ ಆಗಲಿ, ಗುರುವಾಗಾಗಲಿ ಇದ್ದಲ್ಲಿಯೂ ಏನೂ ಪ್ರಯೋಜನೆ ಇರುವುದಿಲ್ಲ. ಕರ್ಮ ಸುಡುವುದಿಲ್ಲ, ಪರಲೋಕ ಪ್ರಾಪ್ತಿ ಲಭಿಸುವುದಿಲ್ಲ. ಹತ್ತುಜನರಿಗೆ ಜ್ಞಾನವನ್ನು ಹೇಳಿದರೂ ಅದು ಅವರನ್ನು ತಪ್ಪುದಾರಿಯಲ್ಲಿ ಹೋಗುವಂತೆ ಮಾಡುತ್ತಿರುವುದರಿಂದ

ಅವರು ಬೋಧಿಸುವುದರಿಂದ ಕೂಡಾ ಪಾಪವನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ. ಪಾಪ ಬರಬಾರದೆಂದರೇ, ದೇವರ ಮಾರ್ಗದಲ್ಲಿ ಸಕ್ರಮವಾಗಿ ಹೋಗಬೇಕೆಂದರೆ ದೇವರು ದ್ವಿತೀಯ ದೈವ ಗ್ರಂಥದಲ್ಲಿ ಹೇಳಿದ ಎರಡು ಆಜ್ಞೆಗಳನ್ನು ತಿಳಿದು ಅದರ ಪ್ರಕಾರ ಆಚರಿಸಬೇಕು. ಎರಡು ಆಜ್ಞೆಗಳು ಧರ್ಮಶಾಸ್ತ್ರಕ್ಕು, ಪ್ರವಕ್ತರಿಗು ಕೂಡಾ ಆಧಾರವಾಗಿರುವುದರಿಂದ ಆ ಎರಡು ಆಜ್ಞೆಗಳ ಪ್ರಕಾರ ನಡೆದಾಗಲೇ ಮನುಷ್ಯನ ಕರ್ಮ ಹೋಗುತ್ತದೆ, ಇಲ್ಲದಿದ್ದರೆ ಹೊರಗಿನ ಪ್ರಪಂಚದಲ್ಲಿ ಬೋಧಿಸುವ ಬೋಧನೆಗಳು, ಮಾಡುವ ಆರಾಧನೆಗಳು ವ್ಯರ್ಥವಾಗುತ್ತವೆ.

**ಪ್ರಶ್ನೆ :– ದ್ವಿತೀಯ ದೈವ ಗ್ರಂಥವಾದ ಬೈಬಲ್‌ನಲ್ಲಿ ಮತ್ತಾಯ ಸುವಾರ್ತೆ 22ನೇ ಅಧ್ಯಾಯದಲ್ಲಿ 37 ರಿಂದ 40ನೇ ವಾಕ್ಯದವರೆಗು ಹೇಳಿರುವುದು ಮನುಷ್ಯನಾಗಿರುವ ಯೇಸು ಎನ್ನುವ ವ್ಯಕ್ತಿ ಅಲ್ಲವೆ! ಅಲ್ಲಿಯವರೆಗು ದೇವರು ಹೇಳದ ಆ ಎರಡು ವಾಕ್ಯಗಳನ್ನು ಎರಡು ಆಜ್ಞೆಗಳಾಗಿ ಹೇಳಿ ಇವು ದೇವರ ಆಜ್ಞೆಗಳು ಅವುಗಳ ಪ್ರಕಾರ ದೇವರನ್ನು ಆರಾಧಿಸಿರೆಂದು ಹೇಳಿದ್ದಾನೆ ಅಲ್ಲವೆ! ಹೇಳಿರುವುದು ಕಾಣಿಸುವ ಮನುಷ್ಯ, ಹೇಳಿದ ಆಜ್ಞೆಗಳು ಎರಡೂ ಧರ್ಮಶಾಸ್ತ್ರಕ್ಕು, ಪ್ರವಕ್ತರಿಗು ಆಧಾರ ವಾದವೆಂದು ಹೇಳಿದ್ದಾನೆ. ದೇವರು ಹೇಳಿರುವ ಮಾತುಗಳು ಪ್ರವಕ್ತರಿಗೂ, ಧರ್ಮಶಾಸ್ತ್ರಕ್ಕೂ ಆಧಾರವಾಗಬಹುದು ಆದರೇ ಮನುಷ್ಯ ಹೇಳಿರುವ ಮಾತುಗಳು ಹೇಗೆ ಧರ್ಮಶಾಸ್ತ್ರವನ್ನು ಶಾಶಿಸಬಲ್ಲವು. ಹೇಗೆ ಪ್ರವಕ್ತರಿಗೆ ಆಧಾರ ಆಗುತ್ತವೆ. ಇವು ದೇವರು ಹೇಳಿದ ಮಾತುಗಳು ಅಲ್ಲವೆಂದು ಯೇಸು ಎನ್ನುವ ಒಬ್ಬ ಬೋಧಕನು ಹೇಳಿದ ಮಾತುಗಳೆಂದು ತಿಳಿದಾಗ ಆ ಮಾತುಗಳನ್ನು ದೇವರ ಆಜ್ಞೆಗಳೆಂದು ಹೇಗೆ ನಂಬಬೇಕು? ಇದಕ್ಕೆ ನೀವು ನಮಗೆ ಅರ್ಥವಾಗುವಂತೆ ಸಮಾಧಾನ ಹೇಳಿರಿ.**

**ಉತ್ತರ :–** ಸೃಷ್ಠಿ ನಂತರ ದೇವರು ಮೊದಲು ಆಕಾಶದ ಮೂಲಕ ಶಬ್ದರೂಪದಲ್ಲಿ ತನ್ನ ಜ್ಞಾನವನ್ನು ಹೇಳಿದ್ದಾನೆ. ಆಗ ಆಕಾಶದಲ್ಲಿರುವ ಸೂರ್ಯನು ಆಕಾಶ ಶಬ್ದದ ಮೂಲಕ ಬಂದಿರುವ ಜ್ಞಾನವನ್ನು ಗ್ರಹಿಸಿದ್ದಾನೆ. ಆಕಾಶದಿಂದ ಬಂದಿರುವ ಶಬ್ಧವು ಮನುಷ್ಯರಿಗೆ ಕೇಳಿಸಿದರೂ ಅದು ಅವರಿಗೆ ಅರ್ಥವಾಗಲಿಲ್ಲ. ಆಕಾಶದಲ್ಲಿನ

ಮೇಘಗಳು ಗುಡುಗಿನ ರೂಪದಲ್ಲಿ ಹೇಳಿದ ಜ್ಞಾನವನ್ನು ಆ ದಿನ ಸೂರ್ಯನು ಗ್ರಹಿಸಿ ನಂತರ ಸ್ವಲ್ಪಕಾಲಕ್ಕೆ ಭೂಮಿಮೇಲೆ ದಕ್ಷಿಣ ಭಾರತದೇಶದಲ್ಲಿರುವ **'ಮನುವು'** ಎನ್ನುವ ವ್ಯಕ್ತಿಗೆ ತೆಲುಗು ಭಾಷೆಯಲ್ಲಿ ಹೇಳಿದ್ದಾನೆ. ಪ್ರಪಂಚದಲ್ಲಿ ಮೊಟ್ಟಮೊದಲು ಹುಟ್ಟಿದ ಭಾಷೆ ತೆಲುಗು ಭಾಷೆ. ಸೂರ್ಯ ಗ್ರಹ ಭೂಮಿಮೇಲೆ ಇತರ ಮನುಷ್ಯನಲ್ಲಿ ಆವರಿಸಿ ಹೇಳಿದಾಗ, ಮನು ಎಂಬ ವ್ಯಕ್ತಿ ಅದನ್ನು ಪೂರ್ತಿ ತಿಳಿದು ಇತರರಿಗೆ ಹೇಳುವುದು ನಡೆದಿದೆ. ಮೊದಲು ಆಕಾಶದಿಂದ ಶಬ್ದರೂಪದಲ್ಲಿ ಕೇಳಿದ ಜ್ಞಾನವು ಸೂರ್ಯನಿಂದ ಮನುವಿಗೆ, ಮನುವಿನಿಂದ ಇಕ್ಷ್ವಾಕನೆಂಬ ರಾಜನಿಗೆ, ಇಕ್ಷ್ವಾಕನಿಂದ ಇತರ ರಾಜರು, ಋಷಿಗಳು ಮೊದಲಾದವರು ಕೇಳಿ ತಿಳಿದುಕೊಳ್ಳುವುದು ನಡೆದಿದೆ. ಹಾಗೆ ಭೂಮಿಮೇಲೆ ಬಹಳ ಪ್ರಾಂತಗಳಿಗೆ ಹರಡಿದ ಜ್ಞಾನ ಮಾತುಗಳ ರೂಪದಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಹರಡಿದೆ. ಹಾಗೆ ಶಬ್ದರೂಪದಲ್ಲಿ ಮೊದಲು ತಿಳಿದ ಜ್ಞಾನ ಪ್ರಕೃತಿಗಿಂತ ಬೇರೆಯಾಗಿರುವ ದೇವರನ್ನು ಕುರಿತು ಹೇಳಿರುವುದು ಆಗಿರುವು ದರಿಂದ ಮತ್ತು ಹುಟ್ಟಿರುವುದಕ್ಕಿಂತ ಪ್ರತ್ಯೇಕವಾಗಿರುವ ದೇವರ ಜ್ಞಾನವನ್ನು ಹೇಳಿರುವುದರಿಂದ, ಮಾತುಗಳ ರೂಪದಲ್ಲಿರುವ ಜ್ಞಾನಕ್ಕೆ **ಜಪರ** ಎಂಬ ಹೆಸರು ಇಟ್ಟಿದ್ದಾರೆ. **ಜ** ಎಂದರೇ ಹುಟ್ಟುವುದು **ಪರ** ಎಂದರೇ ಬೇರೆಯಾಗಿರುವ ಎಂದು ಅರ್ಥ. ದೇವರು ಹುಟ್ಟದವನು, ಆದ್ದರಿಂದ ಆತನನ್ನು ಕುರಿತು ಹೇಳಿದ ಜ್ಞಾನವನ್ನು ಜಪರ ಜ್ಞಾನ ಎಂದು ಹೇಳುತ್ತಿದ್ದರು. ಜಪರ ಜ್ಞಾನ ದ್ವಾಪರಯುಗದ ಕೊನೆಯಲ್ಲಿ ಕೃಷ್ಣನ ಮೂಲಕ ಅರ್ಜುನನಿಗು, ಅರ್ಜುನನ ಮೂಲಕ ವ್ಯಾಸನಿಗು ತಿಳಿದಿದೆ. ವ್ಯಾಸನು ತನಗೆ ತಿಳಿದ ಜಪರ ಜ್ಞಾನವನ್ನು ಗ್ರಂಥರೂಪದಲ್ಲಿ ಬರೆದಿದ್ದಾನೆ. ಗ್ರಂಥರೂಪವಾದುದ್ದನ್ನು ವ್ಯಾಸನು **'ಭಗವದ್ಗೀತೆ'** ಎಂದು ಹೆಸರು ಇಟ್ಟಿದ್ದಾನೆ. ನಂತರ ಸ್ವಲ್ಪಕಾಲಕ್ಕೆ ಸ್ವತಃವಾಗಿ ಕೃಷ್ಣನೇ ಮೋಷೆ ಪ್ರವಕ್ತಗೆ ಭಗವದ್ಗೀತೆಯನ್ನು ಕೊಟ್ಟು ಅದರ ಹೆಸರು **'ತೌರಾತ್'** ಎಂದು ಹೇಳಿದ್ದಾನೆ. ತೌರಾತ್ ಗ್ರಂಥವನ್ನು ಆ ದಿನಗಳಲ್ಲಿ ಮೋಷೆ ಪ್ರವಕ್ತ ಒಬ್ಬನು ನೋಡಿದ್ದಾನೆ.

ಮೋಷೆ ನಂತರ ಅದನ್ನು ತೌರಾತು ಎಂಬ ಹೆಸರಿನಿಂದ ಯಾರೂ ನೋಡಲಿಲ್ಲ. ಭಗವದ್ಗೀತೆ ಎಂಬ ಗ್ರಂಥದ ಹೆಸರಿನಿಂದ ಜಪರ ಜ್ಞಾನ ತಯಾರಾಗಿದೆ. ದೇವರ ಜ್ಞಾನ ಮೊಟ್ಟಮೊದಲು ಭಗವದ್ಗೀತೆಯೆನ್ನುವ ಗ್ರಂಥರೂಪದಲ್ಲಿ ಬರೆಯಲ್ಪಡುವುದರಿಂದ ಆ ಗ್ರಂಥವನ್ನು ಪ್ರಥಮ ದೈವ ಗ್ರಂಥ ಎಂದು ಹೇಳಿದ್ದಾರೆ. ಈ ವಿಧವಾಗಿ ಮಾತುಗಳ ರೂಪದಲ್ಲಿರುವ ಜಪರ ಜ್ಞಾನ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಾಗಿ ತಯಾರಾಗಿದೆ. ನಂತರ ಶ್ರೀಕೃಷ್ಣನೇ ತನ್ನ ಭಗವದ್ಗೀತೆಗೆ ತೌರಾತ್ ಎಂದು ಹೆಸರಿಟ್ಟಿರುವಾಗ ಆ ಹೆಸರು ಇಂದಿಗೂ ಭೂಮಿಮೇಲೆ ಇದ್ದರೂ ಭಗವದ್ಗೀತೆ ತೌರಾತ್‌ಯೆಂದು ಯಾರಿಗೂ ತಿಳಿದಿಲ್ಲ. ಮೊದಲು ಜಪರ ಎನ್ನುವ ಹೆಸರಿನಿಂದ ಮಾತುಗಳ ರೂಪದಲ್ಲಿರುವ ಜ್ಞಾನ ಭಗವದ್ಗೀತೆಯೆನ್ನುವ ಹೆಸರಿನಿಂದ ತಯಾರಾಗಿದ್ದು, ತೌರಾತು ಎಂಬ ಹೆಸರಿನಿಂದ ಅದೇ ಗ್ರಂಥವೇ ಮೋಷೆಗೆ ಕೊಡಲ್ಪಟ್ಟಿದೆ. ಈ ವಿಧವಾಗಿ ದೇವರು ಹೇಳಿದ ಜ್ಞಾನ ಜಪರ, ಭಗವದ್ಗೀತೆ, ತೌರಾತು ಎನ್ನುವ ಮೂರು ಹೆಸರುಗಳಿಂದ ಹೇಳಲ್ಪಟ್ಟಿದೆ. **ಜಪರ** ಎನ್ನುವ ಮೊದಲ ಹೆಸರು ಸ್ವಲ್ಪ ಬದಲಾವಣೆಹೊಂದಿ **ಜಬುರ** ಎನ್ನುವ ಹೆಸರಿನಿಂದ ಈ ದಿನ ಹೇಳಲ್ಪಡುತ್ತಿದೆ.

ಭಗವದ್ಗೀತೆ ನಂತರ ಕಲಿಯುಗದಲ್ಲಿ ಎರಡುಸಾವಿರ ವರ್ಷಗಳ ಹಿಂದೆ ದೇವರ ಜ್ಞಾನ ಯೇಸು ಮುಖಾಂತರ ಹೇಳಲ್ಪಟ್ಟು **ಇಂಜೀಲ್** ಎಂಬ ಗ್ರಂಥರೂಪದಲ್ಲಿ ತಯಾರಾಗಿದೆ. ಇಂಜೀಲ್ ಗ್ರಂಥವನ್ನೇ ಈ ದಿನ ಬೈಬಲ್ ಎಂಬ ಹೆಸರಿನಿಂದ ಕರೆಯುತ್ತಿದ್ದೇವೆ. ಅದರ ನಂತರ ಜಿಬ್ರಯೇಲ್ ಎನ್ನುವ ಗ್ರಹದ ಮುಖಾಂತರ ಮುಹಮ್ಮದ್ ಪ್ರವಕ್ತರವರಿಗೆ ಹೇಳಿದ ಜ್ಞಾನ ಖುರ್‌ಆನ್ ಗ್ರಂಥವಾಗಿ ತಯಾರಾಗಿದೆ. ದೇವರ ಜ್ಞಾನ ಮೂರು ಗ್ರಂಥಗಳಾಗಿ ತಯಾರಾಗಿರುವಾಗ ಆ ಮೂರು ಗ್ರಂಥಗಳನ್ನು ಕ್ರಮವಾಗಿ ಪ್ರಥಮ, ದ್ವಿತೀಯ, ಅಂತಿಮ ದೈವ ಗ್ರಂಥಗಳೆಂದು ಹೇಳುವುದು ನಡೆದಿದೆ. ಮೂರು ದೈವಗ್ರಂಥಗಳಿಗೆ **ಭಗವದ್ಗೀತೆ, ಬೈಬಲ್, ಖುರಾನ್** ಎನ್ನುವ ಹೆಸರನ್ನು ಮನುಷ್ಯರು ಇಟ್ಟಿರುವಾಗ, ಸ್ವತಃವಾಗಿ ದೇವರು ಎರಡು ಗ್ರಂಥಗಳಿಗೆ ಇಟ್ಟಿರುವ ಹೆಸರುಗಳು **ತೌರಾತು,**

**ಇಂಜೀಲು.** ದೈವಜ್ಞಾನಕ್ಕೆ ಗ್ರಂಥರೂಪದಲ್ಲಿ ಐದು ಹೆಸರುಗಳು, ಗ್ರಂಥ ಅಲ್ಲದಿರುವಾಗ ಜಪರ ಒಂದು ಹೆಸರು ಒಟ್ಟು ಆರು ಹೆಸರುಗಳು ಇರುವುದು ನಡೆದಿದೆ. ಇದರಲ್ಲಿ ಭಗವದ್ಗೀತೆ ಹೆಸರು ತೌರಾತ್ ಯೆಂದು, ಬೈಬಲ್ ಹೆಸರು ಇಂಜೀಲ್ ಯೆಂದು ಹೇಳಲಾಗಿದೆ. ಮೂರು ಗ್ರಂಥಗಳಲ್ಲಿ ಒಂದೇ ದೇವರ ಜ್ಞಾನವಿರುವಂತೆ ಬಹಳಜನ ಮನುಷ್ಯರು ಗ್ರಹಿಸಲಾರದೆಹೋಗಿದ್ದಾರೆ.

ಪ್ರಥಮ, ದ್ವಿತೀಯ ದೈವ ಗ್ರಂಥಗಳಾದ ಭಗವದ್ಗೀತೆ, ಬೈಬಲ್ ಎನ್ನುವ ಎರಡು ಗ್ರಂಥಗಳನ್ನು ಮಾನವ ರೂಪದಲ್ಲಿರುವ ದೇವರೇ ಹೇಳಿದ್ದಾನೆಂದು ಬಹಳ ಜನರಿಗೆ ತಿಳಿದಿಲ್ಲ. ದೇವರು ಮನುಷ್ಯನ ರೂಪದಲ್ಲಿದ್ದು, ಮನುಷ್ಯರ ಭಾಷೆಯಲ್ಲಿ, ಮನುಷ್ಯರಿಗೆ ಬೋಧನೆಯನ್ನು ಹೇಳಿದ್ದಾನೆ. ಅದೇ ಯೇಸು ರೂಪದಲ್ಲಿದ್ದು ತನ್ನ ಜ್ಞಾನವನ್ನು ಹೇಳಿದ್ದಾನೆ ಹೊರತು, ಹೇಳಿದ ಯೇಸು ಸಾಧಾರಣ ಮನುಷ್ಯನಲ್ಲ. ಸಾಧಾರಣ ಮನುಷ್ಯನಾಗಿ ಕಾಣಿಸಿದ ಶ್ರೀಕೃಷ್ಣನು, ಯೇಸು ಸ್ವತಃವಾಗಿ ದೈವಜ್ಞಾನವನ್ನು ಹೇಳಿದ್ದಾರೆ. ಕೃಷ್ಣನು ಒಂದು ಕೋನದಲ್ಲಿ ಮನುಷ್ಯರಿಗೆ ಜ್ಞಾನವನ್ನು ಹೇಳಿದಾಗ, ಯೇಸು ಮತ್ತೊಂದು ಕೋನದಲ್ಲಿ ಮನುಷ್ಯರಿಗೆ ಜ್ಞಾನವನ್ನು ಹೇಳಿದ್ದಾನೆ. ಇಬ್ಬರೂ ಬೇರೆಬೇರೆ ಭಾಷೆಗಳಲ್ಲಿ, ಬೇರೆಬೇರೆ ಕೋನಗಳಲ್ಲಿ ಹೇಳುವುದರಿಂದ ಬೇರೆಬೇರೆ ಜ್ಞಾನವಾಗಿ ಕಾಣಿಸಿರ ಬಹುದು. ಆದರೇ ಇಬ್ಬರು ಹೇಳಿದ ಜ್ಞಾನ ಒಂದೇ, ಒಂದೇ ದೇವರನ್ನು ಕುರಿತು ಹೇಳಿರುವುದು.

**ಪ್ರಶ್ನೆ :– ಕೃಷ್ಣನು, ಯೇಸು ಇಬ್ಬರೂ ಮನುಷ್ಯರೇ ಆದರೂ ಅವರ ರೂಪದಲ್ಲಿ ದೇವರು ಜ್ಞಾನವನ್ನು ಹೇಳಿದ್ದಾನೆ ಎಂದು ಹೇಳಿದ್ದಾರೆ. ದೇವರು ಮನುಷ್ಯನ ರೂಪದಲ್ಲಿ ಭೂಮಿಮೇಲಕ್ಕೆ ಬರುತ್ತಾನಾ? ದೇವರು ಮನುಷ್ಯನಾಗಿ ಬಂದಾಗ ಆತನು ದೇವರೆಂದು ಯಾರೂ ಗುರುತಿಸಲಾರರು ಅಲ್ಲವೆ! ಹಾಗಿರುವಾಗ ಮನುಷ್ಯ ರಾದ ಕೃಷ್ಣನನ್ನು, ಯೇಸುನನ್ನು ದೇವರ ಅವತಾರವೆಂದು ಹೇಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ದೇವರು ಕಾಣಿಸುವವನು ಅಲ್ಲವೆಂದು ದೈವಗ್ರಂಥಗಳಲ್ಲಿ**

**ಹೇಳಲ್ಪಟ್ಟಿದೆ. ದೈವ ಗ್ರಂಥಗಳ ಪ್ರಕಾರ ದೇವರನ್ನು ಯಾರೂ ನೋಡಲಿಲ್ಲವೆಂದು ತಿಳಿಯುತ್ತಿದೆ. ಹಾಗಿರುವಾಗ ದೇವರು ಮನುಷ್ಯನಾಗಿದ್ದರೆ ಎಲ್ಲರಿಗೂ ತಿಳಿಯುತ್ತದೆ ಅಲ್ಲವೆ! ಆಗ ದೈವ ಗ್ರಂಥಗಳಲ್ಲಿ ದೇವರು ಹೇಳಿದ ಮಾತು ಅಸತ್ಯವಾಗುತ್ತದೆ ಅಲ್ಲವೆ! ಹಾಗೆ ದೇವರ ಮಾತು ಅಸತ್ಯವಾಗುವುದಕ್ಕೆ ಅವಕಾಶವಿರುತ್ತದಾ? ದ್ವಿತೀಯ ದೈವ ಗ್ರಂಥ (ಯೋಹಾನ್ 5–37) ರಲ್ಲಿ "ಆತನ ಸ್ವರವನ್ನು ಯಾರೂ ಕೇಳಲಿಲ್ಲ. ಆತನ ರೂಪವನ್ನು ಯಾರೂ ನೋಡಲಿಲ್ಲ" ಎಂದು ಹೇಳಿದ್ದಾರೆ. ಆ ಮಾತನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು?**

**ಉತ್ತರ :–** ಇದು ಕೇಳಬೇಕಾದ ಪ್ರಶ್ನೆಯೇ. ಸಮಯೋಚಿತವಾಗಿ ಈ ಪ್ರಶ್ನೆಯನ್ನು ಕೇಳುವುದರಿಂದ ಉಳಿದವರಿಗೆ ಇರುವ ಸಂಶಯಗಳು ಕೂಡಾ ಇಲ್ಲದಂತೆ ಹೋಗುತ್ತವೆ. ನಿನ್ನ ಪ್ರಶ್ನೆಗೆ ಉತ್ತರ ಬಹಳ ಅನುಮಾನಗಳನ್ನು ಇಲ್ಲದಂತೆ ಮಾಡಬಲ್ಲದು. ಆದ್ದರಿಂದ ನಿಮಗೆ ಅರ್ಥವಾಗುವ ವಿಧವಾಗಿ ಉತ್ತರವನ್ನು ಹೇಳುವುದಕ್ಕೆ ಪ್ರಯತ್ನಿಸುತ್ತೇನೆ. ಒಂದುವೇಳೆ ಎಲ್ಲಿಯಾದರೂ ಅನುಮಾನ ನಿವೃತ್ತಿ ಆಗದೆಹೋದರೆ ಪುನಃ ಪ್ರಶ್ನೆಯನ್ನು ಕೇಳಿರೆಂದು ಹೇಳುತ್ತಿದ್ದೇನೆ. 'ದೇವರು, ಜೀವಿ' ಎನ್ನುವ ಎರಡು ಮಾತುಗಳು ಆಧ್ಯಾತ್ಮಿಕದಲ್ಲಿ ಕೇಳಿಸುತ್ತಿರುತ್ತವೆ. ಜೀವಿ ಎಂದರೇ ಮೊದಲ ಆತ್ಮ ಒಂದೇಯೆಂದು ಹೇಳಿಕೊಂಡಿದ್ದೇವೆ. ದೇವರ ವಿಷಯಕ್ಕೆ ಬಂದರೆ ಎಲ್ಲರೂ ಆರಾಧಿಸಬೇಕಾದವನು ಒಬ್ಬನೇ ಆದರೂ, ಆ ಒಬ್ಬ ದೇವರನ್ನು ಸೃಷ್ಟಿಸಿದವನು ಮತ್ತೊಬ್ಬನಿದ್ದಾನೆಂದು ಮೊದಲೇ ತಿಳಿದು ಕೊಂಡಿದ್ದೇವೆ. ಎಲ್ಲರೂ ಆರಾಧಿಸುವ ದೇವರು ಎರಡನೆ ಆತ್ಮವಾಗಿದ್ದು, ಆತನನ್ನು ಸೃಷ್ಟಿಸಿದವನು ಆತ್ಮಗಿಂತಲೂ ಬೇರೆಯಾಗಿದ್ದಾನೆ. ಆತ್ಮವನ್ನು ಸೃಷ್ಟಿಸಿದವನು ಆತ್ಮಗಿಂತ ಬೇರೆಯಾಗಿ ಇದ್ದಾನೆ ಆದಕಾರಣ ಆತನನ್ನು ಪರಮಾತ್ಮ ಎಂದು ಕರೆಯುತ್ತಿದ್ದೇವೆ. ಪರಮಾತ್ಮ ಮೂರನೆ ಆತ್ಮವಾಗಿದ್ದು, ಜೀವಾತ್ಮ ಮೊದಲನೆ ಯವನಾಗಿದ್ದು, ಆತ್ಮ ಎರಡನೆಯವನೆಂದು ಮೊದಲೇ ತಿಳಿದು ಕೊಂಡಿದ್ದೇವೆ.

ಮೊದಲ ಆತ್ಮ ಜೀವಾತ್ಮಯೆಂದು ಭಗವದ್ಗೀತೆ ಪುರುಷೋತ್ತಮಪ್ರಾಪ್ತಿ ಯೋಗದಲ್ಲಿ ತಿಳಿಯಲ್ಪಟ್ಟಿದೆ. ಪುರುಷೋತ್ತಮಪ್ರಾಪ್ತಿ ಯೋಗ ಎನ್ನುವ ಅಧ್ಯಾಯ

ಹದಿನೈದನೇಯದ್ದು. ಹದಿನೈದನೆಯ (15) ಅಧ್ಯಾಯದವರೆಗು ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ಮೂವರನ್ನು ಆತ್ಮಯೆನ್ನುವ ಒಂದೇ ಹೆಸರಿನ ಮೇಲೆ ಹೇಳುತ್ತಾ ಬಂದಿದ್ದಾರೆ. ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಪುರುಷರು ಮೂವರೆಂದು ಅದರಲ್ಲಿ ಒಬ್ಬನು ನಾಶವಾಗುವ ಜೀವಾತ್ಮಯೆಂದು, ಎರಡನೆ ಯವನು ನಾಶವಾಗದ ಆತ್ಮಯೆಂದು, ಮೂರನೆಯವನು ಜೀವಾತ್ಮ, ಆತ್ಮ ಎನ್ನುವ ಇಬ್ಬರು ಪುರುಷರಿಗಿಂತ ಉತ್ತಮನಾದ ಪುರುಷೋತ್ತಮನೆಂದು, ಪುರುಷೋತ್ತಮನಾದವನನ್ನೇ ಪರಮಾತ್ಮಯೆಂದು ಕರೆಯುತ್ತಿದ್ದಾರೆಂದು ಹೇಳಿದ್ದಾರೆ. ಈ ವಿಷಯವೆಲ್ಲಾ ಭಗವದ್ಗೀತೆ, ಪುರುಷೋತ್ತಮಪ್ರಾಪ್ತಿ ಯೋಗದಲ್ಲಿ 16, 17, 18 ಶ್ಲೋಕಗಳಲ್ಲಿ ಹೇಳಿದ್ದಾರೆ ಕೆಳಗೆ ನೋಡಿರಿ.

***16ನೇ ಶ್ಲೋ॥*** ***ದ್ವಾ ವಿಮೌ ಪುರುಷಾ ಲೋಕೇ ಕ್ಷರಶ್ಚಾಕ್ಷರ ಏವಚ।***
***ಕ್ಷರ ಸ್ಸರ್ವಾಣಿ ಭೂತಾನಿ ಕೂಟಸ್ಥೋ ಕ್ಷರ ಉಚ್ಯತೇ॥***

**ಭಾವಾರ್ಥ :–** ಲೋಕದಲ್ಲಿ ಎರಡು ವಿಧಗಳ ಪುರುಷರು ಇದ್ದಾರೆ. ಒಂದು ವಿಧದ ಪುರುಷನನ್ನು ಕ್ಷರನು ಎಂದು ಕರೆಯುತ್ತಾರೆ. ಇನ್ನೊಂದು ವಿಧವಾದ ಪುರುಷನನ್ನು ಅಕ್ಷರನು ಎಂದು ಕರೆಯುತ್ತಾರೆ. ಸರ್ವಜೀವರಾಶಿಗಳಾಗಿ ಕ್ಷರನು ಇದ್ದಾನೆ. ಜೀವ ಶರೀರಗಳಲ್ಲಿ ಕ್ಷರನೊಂದಿಗೆ ಅಕ್ಷರನು ಕೂಡಾ ಬೆರೆತು ಇದ್ದಾನೆ.

***17ನೇ ಶ್ಲೋ॥*** ***ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇ ತ್ಯುದಾಹೃತಃ।***
***ಯೊ ಲೋಕತ್ರಯ ಮಾವಿಶ್ಯ ಬಿಭರ್ತವ್ಯಯ ಈಶ್ವರಃ ॥***

**ಭಾವಾರ್ಥ :–** ಕ್ಷರನು, ಅಕ್ಷರನು ಎನ್ನುವ ಇಬ್ಬರು ಪುರುಷರಿಗಿಂತ ಉತ್ತಮನಾದ ಪುರುಷನು ಅನ್ಯವಾಗಿ (ಬೇರೆಯಾಗಿ) ಇನ್ನೊಬ್ಬನಿದ್ದಾನೆ. ಆ ಮೂರನೆ ಪುರುಷನನ್ನು ಪರಮಾತ್ಮಯೆಂದು ಕರೆಯುತ್ತಿದ್ದೇವೆ. ಆತನು ಮೂರುಲೋಕ ಗಳನ್ನು ಆವರಿಸಿ ನಾಶವಿಲ್ಲದ ಈಶ್ವರನಾಗಿ (ಅಧಿಪತಿಯಾಗಿ) ಇದ್ದಾನೆ.

***18ನೇ ಶ್ಲೋ॥ ಯಸ್ಮಾತ್ ಕ್ಷರ ಮತೀತೋ ಹ ಮಕ್ಷರಾದಪಿ ಚೋತ್ತಮः।***
***ಅತೋಽಸ್ಮಿಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ॥***

**ಭಾವಾರ್ಥ :-** ಮೂರನೆ ಪುರುಷನು ಅಕ್ಷರನಿಗಿಂತ ಶ್ರೇಷ್ಠನು, ಕ್ಷರನಿಗಿಂತ ಅತೀತನು ಆಗಿರುವುದರಿಂದ ಸರ್ವಜ್ಞಾನಗಳಲ್ಲಿಯೂ ಆತನನ್ನೇ ಪುರುಷೋತ್ತಮನಾಗಿ ಜ್ಞಾನಿಗಳು ಎಲ್ಲರೂ ಹೇಳುತ್ತಿದ್ದಾರೆ.

ಪ್ರಕೃತಿ ಸ್ತ್ರೀತತ್ತ್ವವೆಂದು, ದೇವರು ಪುರುಷತತ್ತ್ವವೆಂದು ನಾನು ಮೊದಲೇ ಹೇಳಿದ್ದೇನೆ. ಪರಮಾತ್ಮ ಮೂವರು ಪುರುಷರಾಗಿ ವಿಭಜಿಸಲ್ಪಟ್ಟಿದ್ದಾನೆಂದು ಕೂಡಾ ಮೊದಲೇ ಹೇಳಿದ್ದೇವೆ. ಮೂವರು ಪುರುಷರನ್ನು ಕುರಿತು ಅವರ ವಿಭಾಗಗಳ ಹೆಸರುಗಳನ್ನು ಕುರಿತು 15ನೇ ಅಧ್ಯಾಯ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಹೇಳಿದ್ದಾರೆ. ಕ್ಷರನು ಎಂದರೇ ನಾಶವಾಗುವವನು, ಅಕ್ಷರನೆಂದರೇ ನಾಶವಾಗದವನು ಎಂದು ಅರ್ಥವಿದೆ. ಜೀವಾತ್ಮ ನಾಶವಾಗುವವನೆಂದು, ಆತ್ಮ ನಾಶವಾಗದವನೆಂದು ಇಬ್ಬರವರೆಗು ಶ್ಲೋಕದಲ್ಲಿ ಹೇಳಿ ಮೂರನೆಯವನಾದ ಪರಮಾತ್ಮ ಮೊದಲ ಇಬ್ಬರು ಪುರುಷರಿಗಿಂತಲೂ ಉತ್ತಮನೆಂದು ಆದ್ದರಿಂದ ಆತ್ಮಗಿಂತ ಬೇರೆಯಾಗಿರುವ ಪರಮಾತ್ಮನನ್ನು ಪುರುಷೋತ್ತಮನೆಂದು ಕರೆಯುತ್ತಿದ್ದೇವೆಂದು ಹೇಳಿದ್ದಾರೆ. ಮೂರನೆ ಪುರುಷನು ಕೂಡಾ ನಾಶ ಇಲ್ಲದವ ನಾದ್ದರಿಂದ ಆತನನ್ನು ಅವ್ಯಯನು ಎಂದು ಕೂಡಾ ಕರೆಯಲಾಗಿದೆ. ಆತ್ಮ, ಪರಮಾತ್ಮ ಇಬ್ಬರೂ ನಾಶ ಇಲ್ಲದವರೇ ಆಗಿರುವುದರಿಂದ ಇಬ್ಬರನ್ನು ಒಂದೇ ಹೆಸರಿನಿಂದ ಕರೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ಇಬ್ಬರನ್ನು ದೇವರೆಂದು ಪ್ರಥಮ ದೈವಗ್ರಂಥದಲ್ಲಿ ಹೇಳಿದಾಗ, ಇಬ್ಬರನ್ನು ಅಲ್ಲಾಹ್‌ಯೆಂದು ಅಂತಿಮ ದೈವಗ್ರಂಥದಲ್ಲಿ ಹೇಳಿದ್ದಾರೆ. ಎರಡು ಹೆಸರುಗಳು ಒಂದೇ ಆಗಿರುವುದರಿಂದ ಆತ್ಮ, ಪರಮಾತ್ಮ ಇಬ್ಬರೂ ಒಂದೇ ಹೆಸರಿನಿಂದ ಕರೆಯಲ್ಪಡುವುದರಿಂದ, ಮನುಷ್ಯರಲ್ಲಿ ಬಹಳಜನರಿಗೆ ಯಾರು ಎರಡನೆಯ ದೇವರು, ಯಾರು ಮೂರನೆಯ ದೇವರು ಎನ್ನುವ ವಿವರ ತಿಳಿಯದೆ, ಇರುವುದು ಒಂದೇ ದೇವರು ಅಲ್ಲವೇ! ಎಂದು ಹೇಳುತ್ತಿದ್ದಾರೆ. ಅಂತಿಮ ದೈವ ಗ್ರಂಥದಲ್ಲಿ ಮೊದಲ

ಸೃಷ್ಠಿಕರ್ತನಾದ ಪರಮಾತ್ಮನನ್ನು ಅಲ್ಲಾಹ್‌ಯೆಂದು ಹೇಳಿದ್ದಾರೆ. ಹಾಗೇ ಎರಡನೆಯ ಸೃಷ್ಠಿಕರ್ತನಾದ ಆತ್ಮನನ್ನು ಕೂಡಾ ಅಲ್ಲಾಹ್‌ಯೆಂದು ಹೇಳಿದ್ದಾರೆ. ಹಾಗೆ ಒಂದೇ ಹೆಸರಿನಿಂದ ಹೇಳಿದರೂ ಒಬ್ಬರು ಕೆಲಸಮಾಡದ ಅಲ್ಲಾಹ್ ಯೆಂದು, ಒಬ್ಬರು ಕೆಲಸ ಮಾಡುವ ಅಲ್ಲಾಹ್‌ಯೆಂದು ಗ್ರಂಥದಲ್ಲಿ ಹೇಳಿದ್ದರೂ, ಆ ಇಬ್ಬರ ತಾರತಮ್ಯ (ಭೇದ) ತಿಳಿಯದೆ ಇರುವುದು ಒಂದೇ ಅಲ್ಲಾಯೆಂದು ಅನ್ನುತ್ತಿದ್ದಾರೆ. ಇಬ್ಬರು ಅಲ್ಲಾಹ್‌ಗಳಲ್ಲಿ ಒಬ್ಬರು ಆರಾಧನೆ ಯೋಗ್ಯನು, ಮತ್ತೊಬ್ಬರು ಆರಾಧನೆ ಅಗತ್ಯವಿಲ್ಲದವನೆಂದು ಹೇಳಿದ್ದರೂ, ಮನುಷ್ಯರು ಗ್ರಹಿಸಲಾರದ ಸ್ಥಿತಿಯಲ್ಲಿದ್ದಾರೆ. ಪ್ರಥಮ ದೈವ ಗ್ರಂಥದಲ್ಲಿ ಕ್ಷರನು, ಅಕ್ಷರನು, ಪುರುಷೋತ್ತಮನು ಎಂದು ಮೂವರ ವಿವರವನ್ನು ಪುರುಷೋತ್ತಮ ಪ್ರಾಪ್ತಿ ಯೋಗ ಎನ್ನುವ ಅಧ್ಯಾಯದಲ್ಲಿ ಹೇಳಿದ್ದಾರೆ. ಆದರೂ ಭಗವದ್ಗೀತೆಯನ್ನು ಬೋಧಿಸುವವರಿಗು ಕೂಡಾ ಮೂವರು ಪುರುಷರ ವಿವರ ತಿಳಿಯದಂತೆ ಹೋಗಿದೆ.

ಸೃಷ್ಠಿ ಆದಿಯಲ್ಲಿ ಭೂಮಿಮೇಲೆ ಮೊದಲು ಜ್ಞಾನ ತಿಳಿದುಕೊಂಡವರು ದಕ್ಷಿಣ ಭಾರತ ದೇಶದವರು. ಮೊಟ್ಟಮೊದಲು ಭೂಮಿಮೇಲೆ ದೈವಜ್ಞಾನವನ್ನು ತಿಳಿದವರು ತೆಲುಗು ಭಾಷೆ ಮಾತನಾಡುವವರು. ಪ್ರಪಂಚದಲ್ಲಿ ಮೊದಲು ತಯಾರಾದ ಭಾಷೆ ತೆಲುಗು ಭಾಷೆ. ತೆಲುಗು ಭಾಷೆಯಲ್ಲಿಯೇ ಮೊದಲು ಭೂಮಿಮೇಲೆ ಸೂರ್ಯನಿಂದ ಜ್ಞಾನ ಹೇಳಲ್ಪಟ್ಟಿದೆ. ಪ್ರಪಂಚದಲ್ಲಿ ಮೊದಲ ಜ್ಞಾನಿಗಳು ಭಾರತದೇಶದವರು. ಭಾರತದೇಶದಲ್ಲಿ ತೆಲುಗಿನವರೇ ಮೊದಲ ಜ್ಞಾನಿಗಳು. ಆ ದಿನ ಎಷ್ಟೋ ಜ್ಞಾನಹೊಂದಿದ ತೆಲುಗಿನವರು ಕೂಡಾ ಈ ದಿನ ಭಗವದ್ಗೀತೆಯಲ್ಲಿ ಹೇಳಿದ ಮೂವರು ಪುರುಷರ ವಿವರವನ್ನು ತಿಳಿಯದೆ ಜೀವಿಯು, ದೇವರು ಎನ್ನುವ ಮಾತನ್ನು ಹೇಳುತ್ತಿದ್ದಾರೆ ಹೊರತು ಮೂರನೆ ಯವನು ಕೂಡಾ ಇದ್ದಾನೆಂದು ಹೇಳಲಿಲ್ಲ. ಅದೇ ವಿಧವಾಗಿ ನಾವು ದೇವರ ಬಗ್ಗೆ ಸಂಪೂರ್ಣ ವಿಶ್ವಾಸಿಗಳು ಎನ್ನುವವರು ಕೂಡಾ ಅಂತಿಮ ದೈವ ಗ್ರಂಥದಲ್ಲಿ ಮೂವರು ಪುರುಷರನ್ನು ಕುರಿತು ಸೂರಾ 50, ಆಯತ್ 21ರಲ್ಲಿ ಹೇಳಿದ್ದರೂ,

ಒಬ್ಬರನ್ನು ಮನುಷ್ಯನಾಗಿ ಹೇಳಿ ಉಳಿದ ಇಬ್ಬರನ್ನು ದೇವದೂತರಾಗಿ ವರ್ಣಿಸಿಕೊಂಡಿದ್ದಾರೆ. ಉಳಿದ ಇಬ್ಬರೇ ಅಲ್ಲಾಹ್‌ಗಳಾಗಿ ಇದ್ದಾರೆಂದು ಗ್ರಹಿಸಿಕೊಳ್ಳದೆ ಹೋಗಿದ್ದಾರೆ. ಆ ಇಬ್ಬರಲ್ಲಿ ಒಬ್ಬರು **'ಸರ್ವರಿಗು ಆರಾಧ್ಯ ದೇವರಾಗಿ ಇದ್ದಾನೆಂದು'**. ಎರಡನೆಯವನು **'ಯಾವ ಅಕ್ಕರೆಯಿಲ್ಲದ, ಯಾವ ಸಂತತಿಯಿಲ್ಲದ ಅಲ್ಲಾಹ್‌ಯೆಂದು'** ತಿಳಿಯಲಾರದೆ ಹೋಗಿದ್ದಾರೆ. ತಾವು ತಿಳಿಯದೇ ಹೋಗುವುದೇ ಅಲ್ಲದೆ ಇತರರು ಹೇಳಿದರೂ ಕೇಳದಂತೆ ಹೇಳುವವನದ್ದೇ ಅಜ್ಞಾನ, ತಮ್ಮದೇ ಜ್ಞಾನ ಎಂದು ಹೇಳುತ್ತಿದ್ದಾರೆ.

ದೇವರು ಎಂದರೇ **'ಹುಡುಕಲ್ಪಡುವವನು'** ಎಂದು ಅರ್ಥ. ದೇವರು ಹುಡುಕಲ್ಪಡುವವನೇ ಹೊರತು ತಿಳಿಯಲ್ಪಡುವವನು ಅಲ್ಲ. ಆದ್ದರಿಂದ ದೇವರೆಂದು ಹೇಳುತ್ತಿದ್ದೇವೆ. ಹಾಗೆ ಅಲ್ಲಾಹ್ ಎಂದರೇ **'ಅಂತ್ಯ ಇಲ್ಲದವನೆಂದು'** ಅರ್ಥವಿದೆ. ಅಲ್ಲಾಹ್ ಎನ್ನುವ ಹೆಸರಿನ ಪ್ರಕಾರ ಯಾರಿಗೂ ಅಂತ್ಯ ಸಿಗದವನೆಂದು ಹೇಳುತ್ತಿದ್ದೇವೆ. ಹೆಸರುಗಳು ಅರ್ಥಗಳು ಎರಡು ಚೆನ್ನಾಗಿವೆ ಆದರೇ ಅಲ್ಲಾಹ್‌ಗಳು ಇಬ್ಬರೆಂದಾಗಲಿ, ದೇವರು ಇಬ್ಬರಾಗಿ ಇದ್ದಾನೆಂದಾಗಲಿ ಖಚಿತವಾಗಿ ಹೇಳಲಾರದೆಹೋಗುತ್ತಿದ್ದಾರೆ. ಮನುಷ್ಯರ ಮೆದುಳಿಗೆ ದೇವರ ಬಗ್ಗೆಯ ಸಮಾಚಾರ ಗ್ರಂಥದಲ್ಲಿ ಇದ್ದರೂ ಅರ್ಥವಾಗದಂತೆ ಹೋಗಿದೆ. ಅಂತಿಮ ದೈವ ಗ್ರಂಥದಲ್ಲಿ ಇಬ್ಬರು ಅಲ್ಲಾಹ್‌ಗಳನ್ನು ಕುರಿತಾದ ವಾಕ್ಯಗಳು ಅನೇಕಗಳಿವೆ. ಆದರೂ ಅಲ್ಲಾಹ್ ಒಬ್ಬನೇ ಎನ್ನುವ ವಿಶ್ವಾಸ ಹೊರತು ದೇವರು ಇಬ್ಬರಾಗಿ ಇದ್ದಾನೆ ಎನ್ನುವ ಜ್ಞಾನ ಪೂರ್ತಿ ಇಲ್ಲದಂತೆ ಹೋಗಿದೆ. ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಆತ್ಮ, ಪರಮಾತ್ಮಯೆಂದು ವಿಭಜಿಸಿ ಇಬ್ಬರು ದೇವರುಗಳನ್ನು ಹೇಳಿದ್ದಾರೆ. ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ 17, 18 ಎರಡು ಶ್ಲೋಕಗಳು ಪೂರ್ತಿ ಪರಮಾತ್ಮನನ್ನು ಕುರಿತು ಹೇಳಿದ್ದಾರೆ. ಹಾಗೆಯೇ ಅಂತಿಮ ದೈವ ಗ್ರಂಥದಲ್ಲಿ 112ನೇ ಸುರಾದಲ್ಲಿ ಒಟ್ಟು ನಾಲ್ಕು ಆಯತ್‌ಗಳಲ್ಲಿ ಮೊದಲ ಸೃಷ್ಠಿಕರ್ತನಾದ ಅಲ್ಲಾಹ್‌ನನ್ನು ಕುರಿತು ಹೇಳಿದ್ದಾರೆ. ಹಾಗೇ 2–117ನೇ ವಾಕ್ಯದಲ್ಲಿ ದೊಡ್ಡ ಅಲ್ಲಾಹ್‌ನನ್ನು ಕುರಿತು ಪ್ರಪ್ರಥಮವಾಗಿ

ಸೃಷ್ಠಿಕರ್ತನೆಂದು ಹೇಳಿದ್ದಾರೆ. ಅದೇ ವಿಧವಾಗಿ 6–102 ರಲ್ಲಿ ಮತ್ತು 2–255 ರಲ್ಲಿ ಚಿಕ್ಕ ಅಲ್ಲಾಹ್‌ನನ್ನು ಕುರಿತು ಹೇಳಿದ್ದಾರೆ. ಅಷ್ಟೇಅಲ್ಲದೆ ಕೆಲಸಮಾಡದ ಅಲ್ಲಾಹ್‌ಯೆಂದು ದೊಡ್ಡ ಅಲ್ಲಾಹ್‌ನನ್ನು, ಕೆಲಸ ಮಾಡುವ ಅಲ್ಲಾಹ್‌ಯೆಂದು ಚಿಕ್ಕ ಅಲ್ಲಾಹ್‌ನನ್ನು ಕುರಿತು ಹೇಳಿದ್ದಾರೆ. ಮನುಷ್ಯರೆಲ್ಲರಿಗೂ 'ಆರಾಧ್ಯ ದೈವ ಈತನು ಒಬ್ಬನೇ'ಯೆಂದು ಮೊದಲ ಸೃಷ್ಠಿಕರ್ತನಾದ ಅಲ್ಲಾಹ್ ಎರಡನೆ ಆತ್ಮನಾಗಿರುವವನನ್ನು ತೋರಿಸಿದ್ದಾನೆ. ಇಷ್ಟು ವಿಧಗಳು ಹೇಳಿದ್ದರೂ ದೇವರು ಎನ್ನುವ ಹೆಸರಿನಲ್ಲಿ ಇಬ್ಬರಿದ್ದಾರೆಂದು ಮನುಷ್ಯರು ತಿಳಿಯಲಾರದೆ ಹೋಗುತ್ತಿದ್ದಾರೆ. ನಂತರ ಕಾಲದಲ್ಲಿ ಮೂವರು ಪುರುಷರ ಜ್ಞಾನ ಸ್ವಲ್ಪಜನರಿಗೆ ತಿಳಿದರೂ, ಬಹಳಜನರಿಗೆ ತಿಳಿಯದೆ ಹೋಗಬಹುದು.

ಈಗ ಅಸಲು ವಿಷಯಕ್ಕೆ ಬರೋಣ. ಮೊದಲ ದೇವರು 'ನನ್ನನ್ನು ಮುಗಿಯಬೇಡಿ, ನಿಮ್ಮ ಆರಾಧನೆಗಳೆಲ್ಲ ಎರಡನೆ ದೇವರಾದವನಿಗೇ ಮಾಡಿ ರೆಂದು' ಹೇಳಿದ್ದಾರೆ. ಮೂರನೆ ದೇವರ ವಿಷಯಕ್ಕೆ ಬಂದರೆ 'ಆತನು ಯಾರೊಂದಿಗೂ ನೇರವಾಗಿ ಮಾತನಾಡುವುದಿಲ್ಲ' ಎಂದು 42ನೇ ಸೂರಾ 51ನೇ ಆಯತ್‌ನಲ್ಲಿ ಅಂತಿಮ ದೈವಗ್ರಂಥದಲ್ಲಿ ಕೂಡಾ ಹೇಳಿದ್ದಾರೆ. ಮೂರನೆ ಆತ್ಮನಾದ ದೊಡ್ಡ ದೇವರು ಯಾರೊಂದಿಗೂ ಮಾತನಾಡುವುದಿಲ್ಲ. ಯಾರಿಗೂ ಕಾಣಿಸುವುದಿಲ್ಲ. ಅಷ್ಟೇಅಲ್ಲದೆ ಯಾವ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಆತನನ್ನು (ದೊಡ್ಡ ದೇವರನ್ನು) ರೂಪ, ನಾಮ, ಕ್ರಿಯೆಗಳು ಇಲ್ಲದವನೆಂದು ಜ್ಞಾನಿಗಳಾದವರು ಹೇಳಿದ್ದಾರೆ. ದೇವರಿಗೆ ಅಂದರೇ ಪರಮಾತ್ಮನಾದ ಮೂರನೆಯ ವನಿಗೆ ಹೆಸರು ಇಲ್ಲ, ರೂಪವಿಲ್ಲ. ಹೆಸರು ಆಕಾರ ಎರಡೂ ಇಲ್ಲದ ದೇವರು ಯಾವ ಕಾರ್ಯಗಳನ್ನು ಕೂಡಾ ಮಾಡುವುದಿಲ್ಲ. ಇಷ್ಟು ದೊಡ್ಡ ಪ್ರಪಂಚದಲ್ಲಿ ಮನುಷ್ಯರನ್ನು ಹುಟ್ಟಿಸುವುದು, ಸಾಯಿಸುವುದು, ಪುನಃ ಜನ್ಮಕ್ಕೆ ಕಳಿಸುವುದು, ಮನುಷ್ಯರು ಮಾಡಿಕೊಂಡ ಪಾಪಪುಣ್ಯಗಳಿಗೆ ತೀರ್ಪುಕೊಟ್ಟು ಕಷ್ಟಸುಖಗಳನ್ನು ನಿರ್ಣಯಿಸುವುದು ಮೊದಲಾದ ಕಾರ್ಯಗಳನ್ನು ಮಾಡುವವನು ಎರಡನೆ ಆತ್ಮನಾದ ದೇವರು. ದೇವರು ಎಂಬ ಹೆಸರು ಒಂದೇ ಎರಡನೆ ಆತ್ಮಗು,

ಮೂರನೆ ಆತ್ಮಗು ಇದ್ದರೂ ಮೂರನೆಯವನು ಏನು ಮಾಡುವುದಿಲ್ಲ, ಎರಡನೆಯವನು ಎಲ್ಲಾ ಮಾಡುತ್ತಿದ್ದಾನೆ. ಆದ್ದರಿಂದ ಮೂರನೆ ಆತ್ಮವಾದ ಮೊದಲ ದೇವರನ್ನು ಕುರಿತು ದ್ವಿತೀಯ ದೈವಗ್ರಂಥವಾದ ಬೈಬಲ್‌ನಲ್ಲಿ ಯೋಹಾನ್ ಸುವಾರ್ತೆಯಲ್ಲಿ ಐದನೆ ಅಧ್ಯಾಯದಲ್ಲಿ 37, 38 ವಾಕ್ಯಗಳಲ್ಲಿ ದೊಡ್ಡ ದೇವರಾದ ಮೊದಲ ಸೃಷ್ಠಿಕರ್ತನನ್ನು ಕುರಿತು ಹೀಗೆ ಹೇಳಿದ್ದಾರೆ ನೋಡಿರಿ.

**(ಯೋಹಾನ್ 5–37, 38) "ನೀವು ಯಾವ ಕಾಲದಲ್ಲಾದರೂ ಆತನ ಸ್ವರವನ್ನು ಕೇಳಲಿಲ್ಲ. ಆತನ ಸ್ವರೂಪವನ್ನು ನೋಡಲಿಲ್ಲ. ಆತನು ಯಾರನ್ನು ಕಳಿಸಿದ್ದಾನೋ ಆತನನ್ನು ನೀವು ನಂಬಲಿಲ್ಲ. ಆದ್ದರಿಂದ ಆತನ ವಾಕ್ಯವು ನಿಮ್ಮಲ್ಲಿ ನಿಲ್ಲಲಿಲ್ಲ."**

ಈ ವಾಕ್ಯ ಕ್ರೈಸ್ಥರಾಗಿರುವ ಪ್ರಜೆಗಳಿಗೆ ಎಷ್ಟರಮಟ್ಟಿಗೆ ಅರ್ಥವಾಗಿ ದೆಯೋ ಹೇಳಲಾರೆವು. ಬಹುಶಃ ನನ್ನ ಅಂದಾಜಿನ ಪ್ರಕಾರ ಯಾರಿಗೂ ಸರಿಯಾದ ಭಾವನೆಯಲ್ಲಿ ಅರ್ಥವಾಗಿರುವುದಿಲ್ಲ. ಅವರ ದೃಷ್ಠಿ ದೇವರವರೆಗು ಹೋದರೂ ಅದರಲ್ಲಿ ಯಾವ ದೇವರು ಎನ್ನುವ ಗಮನ ಇರುವುದಿಲ್ಲ. ಎಲ್ಲಾರ ದೃಷ್ಠಿಯಲ್ಲಿ ಒಂದೇ ದೇವರು ಎನ್ನುವ ಧ್ಯಾಸ ಹೊರತು ಇಬ್ಬರು ದೇವರುಗಳಿದ್ದಾರೆಂದು ತಿಳಿದಿಲ್ಲ. ಈಗ ಹೇಳಿದ ಮೇಲಿನ ವಾಕ್ಯ ಸರ್ವ ಪ್ರಪಂಚವನ್ನು ಮೊಟ್ಟಮೊದಲು ಸೃಷ್ಠಿಸಿದ ಮೊದಲ ಸೃಷ್ಠಿಕರ್ತನಾದ ಮೊದಲ ದೇವರನ್ನು ಕುರಿತು ಹೇಳಿದ್ದಾರೆ. ದೇವರು ಎನ್ನುವ ಇಬ್ಬರಲ್ಲಿ ದೊಡ್ಡವನಾದ ದೇವರು ಯಾರಿಗೂ ಕಾಣಿಸುವವನಲ್ಲ. ಏಕೆಂದರೇ! ಆತನಿಗೆ ಆಕಾರವಿಲ್ಲ. ಆಕಾರ ಇಲ್ಲದವನನ್ನು ನೋಡಲಾರೆವು. ಆತನು ಮಾತನಾಡುವುದಿಲ್ಲ ಆದ್ದರಿಂದ ಆತನ ಸ್ವರವನ್ನು ಯಾರೂ ಕೇಳಲಿಲ್ಲ. ಅದೇ ಎರಡನೇ ದೇವರ ವಿಷಯವಾದರೇ ಆತನನ್ನು ನೋಡಬಹುದು, ಆತನ ಮಾತುಗಳನ್ನು ಕೇಳಬಹುದು. ಎರಡನೆ ದೇವರು ಮನುಷ್ಯರ ಶರೀರದಲ್ಲಿ ಪೂರ್ತಿ ವ್ಯಾಪಿಸಿದ್ದಾನೆ. ಮನುಷ್ಯನ ಶರೀರದಲ್ಲಿ ಮಾತನಾಡುತ್ತಿದ್ದಾನೆ. ಆದ್ದರಿಂದ ಎರಡನೆ ದೇವರಾದವನ ಸ್ವರವನ್ನು

ಕೇಳಬಹುದು. ಹಾಗೆಯೇ ಆತನನ್ನು ನೋಡಬಹುದು. ಈ ವಿಧವಾಗಿ ಮೊದಲ ದೇವರು ಎರಡನೆ ದೇವರು ವ್ಯತ್ಯಾಸಗಳು ಹೊಂದಿದ್ದಾರೆ.

ಮೂರು ಆತ್ಮಗಳಲ್ಲಿ ಒಂದು ಜೀವಾತ್ಮವಾಗಿ ಇದ್ದುಹೋಗಿದೆ. ಜೀವಾತ್ಮ ಎಂದರೇ! ಕಷ್ಟಸುಖಗಳನ್ನು ಅನುಭವಿಸುವ ನಾವುಗಳೆಂದು ಹೇಳಬಹುದು. ಮೂರರಲ್ಲಿ ಒಂದು ಜೀವಾತ್ಮವಾಗಿದ್ದು, ಉಳಿದ ಎರಡು ಆತ್ಮಗಳು ದೇವರು ಎಂದು ಹೆಸರು ಹೊಂದಿವೆ. ದೊಡ್ಡ ದೇವರಿಗೆ (ಮೊದಲ ದೇವರಿಗೆ) ರೂಪ, ನಾಮ, ಕ್ರಿಯೆಗಳು ಇಲ್ಲ. ಎರಡನೆ ದೇವರಾದ ಎರಡನೆ ಆತ್ಮ ಶರೀರದಲ್ಲಿ ಜೀವಾತ್ಮದೊಂದಿಗೆ ಜೀವಿಗೆ ಜೋಡಿ ಆತ್ಮವಾಗಿ, ಜೀವಿಗೆ ಪಕ್ಕದವನಾಗಿ ಇದ್ದಾನೆ. ಶರೀರದೊಳಗಿನ ಆತ್ಮವನ್ನಾಗಲಿ, ಜೀವಾತ್ಮವನ್ನಾಗಲಿ ಯಾರೂ ನೋಡುವುದಕ್ಕೆ ಸಾಧ್ಯವಿಲ್ಲ. ಆತ್ಮಗೆ ಆತ್ಮಯೆಂದು, ಜೀವಾತ್ಮಗೆ ಜೀವಾತ್ಮಯೆಂದು ಹೆಸರು ಇದ್ದರೂ, ಅವರಲ್ಲಿ ಆತ್ಮ ಕೆಲಸ ಮಾಡುತ್ತಿರುವಾಗ ಜೀವಾತ್ಮ  ನಡೆದ ಕೆಲಸದಲ್ಲಿ ಬಂದಿರುವ ಕಷ್ಟಸುಖಗಳನ್ನು ಅನುಭವಿಸುವ ಕೆಲಸದಲ್ಲಿರುತ್ತಾನೆ. ಹಾಗೆ ಜೀವಾತ್ಮ, ಆತ್ಮಗಳಿಗೆ ಕೆಲಸವಿದ್ದರೂ ಆತ್ಮವಾಗಲಿ, ಜೀವಾತ್ಮವಾಗಲಿ ಎದುರುಗಡೆ ಕಾಣಿಸುವ ವರಲ್ಲ. ಅವರನ್ನು ಸ್ಥೂಲ ಕಣ್ಣುಗಳಿಂದ ಯಾರೂ ನೋಡಲಾರರು. ಅವರನ್ನು ನೋಡುವುದಕ್ಕೆ ಜ್ಞಾನನೇತ್ರ ಎನ್ನುವುದು ಅಗತ್ಯ. ಈ ವಿಷಯವಾಗಿ ಪ್ರಥಮ ದೈವಗ್ರಂಥದಲ್ಲಿ ಪುರುಷೋತ್ತಮಪ್ರಾಪ್ತಿ ಯೋಗದಲ್ಲಿ ಹತ್ತನೆ ಶ್ಲೋಕವನ್ನು ನೋಡಿರಿ.

***10ನೇ ಶ್ಲೋ॥***

***ಉತ್ಕ್ರಾಮನ್ತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್।***

***ವಿಮೂಢಾ ನಾನುಪಶ್ಯನ್ತಿ ಪಶ್ಯನ್ತಿ ಜ್ಞಾನಚಕ್ಷುಷಃ ॥***

**ಭಾವಾರ್ಥ :–** ಜೀವಾತ್ಮ ಗುಣಗಳೊಂದಿಗೆ ಕೂಡಿ ವಿಷಯ ಸುಖಗಳನ್ನು, ಕಷ್ಟಗಳನ್ನು ಅನುಭವಿಸುತ್ತಾ ಶರೀರದ ಒಳಗಿದ್ದಾನೆ. ಅಜ್ಞಾನಿಗಳಾದವರಿಗೆ

ಜೀವಿಯ ವಿಷಯ ತಿಳಿದಿಲ್ಲ. ಜೀವಿಯು ಕಾಣಿಸುವುದಿಲ್ಲ. ಜ್ಞಾನನೇತ್ರರು ಮಾತ್ರ ಜೀವಿಯ ವಿಷಯವನ್ನು ನೋಡಬಲ್ಲರು.

ಈ ಶ್ಲೋಕದಲ್ಲಿ ಜ್ಞಾನನೇತ್ರ ಇರುವವರು ಮಾತ್ರವೇ ಶರೀರದಲ್ಲಿ ಗುಣಗಳ ಮಧ್ಯ ನಿವಾಸಿಸುವ ಜೀವಿಯನ್ನು ನೋಡಬಲ್ಲರೆಂದು ಹೇಳಿದ್ದಾರೆ. ಮನುಷ್ಯರಿಗೆ ನೇತ್ರಗಳು (ಕಣ್ಣುಗಳು) ಎರಡು ಬಲ ಎಡವಾಗಿವೆ. ಆದರೇ ಜ್ಞಾನ ನೇತ್ರವಿದೆಯೆಂದು ಹೇಳಲಾರೆವು. ಜ್ಞಾನನೇತ್ರ ಅಪರೂಪವಾಗಿ ಯಾರಿಗಾದರೂ ಇರಬಹುದು. ಆದರೆ ಇಲ್ಲಿಯವರೆಗು ಯಾರೂ ಅಂತಹವರು ನಮ್ಮ ದೃಷ್ಟಿಯೊಳಗೆ ಬರಲಿಲ್ಲ. ಜ್ಞಾನನೇತ್ರ ಇರುವವನು ಶರೀರದಲ್ಲಿರುವ ಜೀವಾತ್ಮವನ್ನು ನೋಡಬಲ್ಲನು. ಜೀವಾತ್ಮವನ್ನು ನೋಡಿದವನಿಗೆ ಶರೀರದಲ್ಲಿನ ಯಂತ್ರಾಂಗವೆಲ್ಲವೂ ತಿಳಿಯುತ್ತದೆ. ಆಗ ಮೂರು ಆತ್ಮಗಳಲ್ಲಿ ತಾನು ಜೀವಾತ್ಮಯೆಂದು ತಿಳಿಯುತ್ತದೆ. ತನ್ನ ವಿಷಯ ತಿಳಿದ ನಂತರ ತಾನು ಬೇರೆ, ಉಳಿದ ಎರಡು ಆತ್ಮಗಳು ಬೇರೆಯೆಂದು, ಉಳಿದ ಎರಡು ಆತ್ಮಗಳಲ್ಲಿ ಮೂರನೆ ಆತ್ಮದೊಂದಿಗೆ ಅಲ್ಲದೆ ಎರಡನೆ ಆತ್ಮದೊಂದಿಗೆಯೇ ತನಗೆ ಸಂಬಂಧವಿದೆ ಯೆಂದು, ಎರಡನೆ ಆತ್ಮವೇ ತನಗೆ ದೇವರೆಂದು, ಎರಡನೆ ಆತ್ಮವನ್ನು ತಿಳಿಯುವುದೇ ಆಧ್ಯಾತ್ಮಿಕವೆಂದು, ಎರಡನೆ ಆತ್ಮವನ್ನು ತಿಳಿದರೆ ಎರಡನೆ ಆತ್ಮ ಮುಖಾಂತರ ಮೂರನೆ ಆತ್ಮವಾದ ಪರಮಾತ್ಮವನ್ನು ಸೇರಬಹುದೆಂದು, ಪರಮಾತ್ಮನನ್ನು ಸೇರುವುದೇ ಮೋಕ್ಷವೆಂದು, ಮೋಕ್ಷವನ್ನು ಹೊಂದುವುದೇ ಜೀವಿಗೆ ಧ್ಯೇಯವಾಗಿ (ಗುರಿಯಾಗಿ) ಇರಬೇಕೆಂದು ತಿಳಿಯಬಲ್ಲನು.

ದ್ವಿತೀಯ ದೈವಗ್ರಂಥದಲ್ಲಿ ಎರಡು ಆಜ್ಞೆಗಳು ಹೇಳಿದ ಮನುಷ್ಯನಾದ ಯೇಸು, ಎರಡನೆ ಆತ್ಮವನ್ನು ಅಲ್ಲದೆ ಮೂರನೆ ಆತ್ಮವಾದ ಪರಮಾತ್ಮನನ್ನು ಉದ್ದೇಶಿಸಿ "ಆತನ ಸ್ವರವನ್ನು ಯಾರೂ ಕೇಳಲಿಲ್ಲ. ಆತನ ರೂಪವನ್ನು ಯಾರೂ ನೋಡಲಿಲ್ಲ." ಎಂದಿದ್ದಾನೆ. ಮನುಷ್ಯನಾಗಿರುವ ಯಾರಾಗಲಿ ನಿದ್ರೆಯಲ್ಲಾಗಲಿ, ಎಚ್ಚರದಲ್ಲಾಗಲಿ, ಸ್ವಪ್ನದಲ್ಲಾಗಲಿ ಆತನ ಮಾತು ಕೇಳಲಿಲ್ಲ. ಆತನ ರೂಪವನ್ನು ನೋಡಲಿಲ್ಲ ಎಂದಿದ್ದಾನೆ. ವಾಕ್ಯದಲ್ಲಿ 'ಯಾವ

ಕಾಲದಲ್ಲಾದರೂ' ಎಂದು ಹೇಳಿದಾಗ ಮನುಷ್ಯನಿಗೆ ಇರುವ ನಿದ್ರೆ, ಎಚ್ಚರ, ಸ್ವಪ್ನ ಎನ್ನುವ ಮೂರು ಕಾಲಗಳಲ್ಲಿ ಎಂದು ಅರ್ಥ. ಇಲ್ಲಿಯವರೆಗು ಹೇಳಿದ ಮೂರು ಆತ್ಮಗಳ ವಿಷಯದಲ್ಲಿ ಮೂರನೆ ಆತ್ಮವಾದ ಪರಮಾತ್ಮ ವಿಷಯ ನನಗೆ ತಿಳಿದಮಟ್ಟಿಗೆ ಸಂಪೂರ್ಣವಾಗಿ ಹೇಳಿದ್ದೇನೆ. ಜೀವಾತ್ಮ ವಿಷಯ ಕೂಡಾ ಬಹುಶಃ ಸಂಪೂರ್ಣವಾಗಿ ಹೇಳಿದಂತೇಯೆಂದು ಅಂದುಕೊಳ್ಳುತ್ತಿದ್ದೇನೆ. ಇನ್ನು ಮಧ್ಯ ಆತ್ಮವನ್ನು ಸಂಪೂರ್ಣವಾಗಿ ತಿಳಿಯಬೇಕಾಗಿದೆ. ಇಲ್ಲಿಯವರೆಗೂ ಹೇಳಿರುವುದು ಪೂರ್ತಿ ಆಗಲಿಲ್ಲ. ಎರಡನೆ ಆತ್ಮವನ್ನು ಕುರಿತು ತಿಳಿಯಬೇಕಾಗಿರುವುದು ಅರ್ಥ ಮಾಡಿಕೊಳ್ಳಬೇಕಾಗಿರುವುದು ಎಷ್ಟೋ ಇದೆಯೆಂದು ಅಂದುಕೊಳ್ಳುತ್ತಿದ್ದೇನೆ. ನಮಗೆ ತಿಳಿದಮಟ್ಟಿಗೆ ಮನುಷ್ಯರೆಲ್ಲರಿಗು ದೇವರು ಎರಡನೆ ಆತ್ಮವೇ, ಮನುಷ್ಯರೆಲ್ಲರೂ ಆರಾಧಿಸಲ್ಪಡುವ ದೇವರು ಎರಡನೆಯವನು. ರಹಸ್ಯಗಳಾದ ಜ್ಞಾನಸೂತ್ರಗಳನ್ನು ವಿವರಿಸಿ ಹೇಳುವವನು ಎರಡನೆ ಆತ್ಮವಾದ ದೇವರೇ. ಮೂರನೆ ಆತ್ಮವಾದ ದೇವರು (ಪರಮಾತ್ಮ) ಮನುಷ್ಯರಿಗೆ ಜ್ಞಾನವನ್ನು ಹೇಳುವವನಲ್ಲ. ಆತ್ಮಗಿಂತ ಬೇರೆಯಾಗಿರುವ ಪರಮಾತ್ಮ ಸಾಕ್ಷಿಯಾಗಿ ಎಲ್ಲರನ್ನು, ಎಲ್ಲವನ್ನು ನೋಡುತ್ತಿದ್ದಾನೆ ಆದರೆ ಏನು ಮಾಡದವನಾಗಿ ಇದ್ದಾನೆ. ಮೂರನೆಯವನಾದ ಪರಮಾತ್ಮ ದೇವರೆನ್ನುವ ಹೆಸರಿನಿಂದ ಕರೆಯಲ್ಪಡುತ್ತಿದ್ದರೂ ತನ್ನನ್ನು ಯಾರು ಮುಗಿದರೂ, ಆರಾಧಿಸಿದರೂ, ಪ್ರಾರ್ಥನೆ ಮಾಡಿದರೂ ಸ್ವಲ್ಪವಾದರೂ ಹಿಡಿಸಿಕೊಳ್ಳುವುದಿಲ್ಲ. ಮುಗಿದವನನ್ನು ತನಗೆ ಮುಗಿದಿದ್ದಾನೆಂದಾಗಲಿ, ಮುಗಿಯದವನನ್ನು ತನಗೆ ಮುಗಿಯಲಿಲ್ಲವೆಂದಾಗಲಿ ಅಂದುಕೊಳ್ಳುವುದಿಲ್ಲ. ಯಾರೊಂದಿಗು ಸಂಬಂಧ ಇಲ್ಲದವನು, ಯಾವ ಅಕ್ಕರೆ ಇಲ್ಲದವನೆಂದು ಆತನನ್ನು ಕುರಿತು ದೈವ ಗ್ರಂಥಗಳಲ್ಲಿಯೇ ಹೇಳಿದ್ದಾರೆ. ಆದರೆ ಎರಡನೆ ಪುರುಷನಾದ ದೇವರು ಮೂರನೆ ಪುರುಷನಿಗಿಂತ ಎಲ್ಲಾ ವಿಧಗಳು ಭಿನ್ನವಾಗಿದ್ದಾನೆ.

ಎರಡನೆ ಪುರುಷನು ಅಥವಾ ಎರಡನೆ ಆತ್ಮ ನಾಶ ಇಲ್ಲದವನಾಗಿರುತ್ತಾ ಎಲ್ಲಾ ಕೆಲಸಗಳು ಮಾಡುವ ದೇವರಾಗಿದ್ದಾನೆ. ಎಲ್ಲರ ಪ್ರಾರ್ಥನೆಗಳನ್ನು

ಆಲಿಸುವವನಾಗಿ, ಎಲ್ಲರ ಆರಾಧನೆಗಳನ್ನು ಸ್ವೀಕರಿಸುವವನಾಗಿದ್ದಾನೆ. ಅಷ್ಟೇ ಅಲ್ಲದೆ ಆತನು ಎಲ್ಲರ ಹೃದಯಗಳಲ್ಲಿ ಇರುತ್ತಾ ಎಲ್ಲರನ್ನು ನೋಡುತ್ತಿದ್ದಾನೆ. ಮನುಷ್ಯ ಹುಟ್ಟಿದಾಗಿನಿಂದ ಮರಣದವರೆಗು ಎರಡನೆ ಪುರುಷನೇ ಮನುಷ್ಯನನ್ನು (ಜೀವಿಯನ್ನು) ಕರ್ಮಪ್ರಕಾರ ಜವಾಬ್ಧಾರಿಯಾಗಿ ನಡೆಸುತ್ತಿದ್ದಾನೆ. ಹಾಗೆಯೇ ಸಾವಿನಿಂದ ಪುನಃ ಮನುಷ್ಯನನ್ನು ಹುಟ್ಟಿಸುತ್ತಿದ್ದಾನೆ. ಸಾವಿನಲ್ಲಿ ಜೀವಿಗೆ ಕರ್ಮಪ್ರಕಾರ ತೀರ್ಪುಕೊಟ್ಟು ಪಾಪಪುಣ್ಯಗಳನ್ನು ಕಷ್ಟಸುಖಗಳಾಗಿ ಬದಲಾಯಿಸಿ ಪುನರ್ಜನ್ಮ ಉಂಟುಮಾಡುತ್ತಿದ್ದಾನೆ. ಈ ವಿಧವಾಗಿ ಶರೀರದೊಳಗಿನ ಕಾರ್ಯಗಳನ್ನೇ ಮಾಡುತ್ತಾ ತಾನು ಎಲ್ಲರಿಗೂ ದೇವರಾಗಿ, ಎಲ್ಲರಿಗೂ ಆರಾಧ್ಯ ದೈವವಾಗಿ ಇದ್ದಾನೆ. ಮೊದಲನೆಯ ಆತ್ಮ ಜೀವಾತ್ಮ ಆಗಿರುವಾಗ ಆತನು ನಾಶವಾಗುವ ಆತ್ಮವಾಗಿ, ಸಾವುಹುಟ್ಟುಗಳು ಹೊಂದುವವನಾಗಿದ್ದಾನೆ. ಎರಡನೆ ಆತ್ಮ ಅಧೀನದಲ್ಲಿದ್ದು, ಆತನು ನಡೆಸಿದಂತೆ ನಡೆಯುತ್ತಾ, ಓಡಿಸಿದಂತೆ ಓಡುತ್ತಾ ತನ್ನಮೇಲೆ ವಿಧಿಸಿರುವುದನ್ನು ಅನುಭವಿಸುತ್ತಾ ಇದ್ದಾನೆ. ಈ ವಿಧವಾಗಿರುವ ಮೊದಲ ಆತ್ಮವಾದ ಜೀವಾತ್ಮವಲ್ಲದೆ, ಎರಡನೆ ಆತ್ಮವಾದ ಆರಾಧ್ಯ ದೈವವಲ್ಲದೆ, ಮೂರನೆ ಆತ್ಮವಾದ ಪರಮಾತ್ಮನು ಅಲ್ಲದೆ, ಎಲ್ಲರಿಗೂ ವಿಭಿನ್ನವಾಗಿ ಇರುವವನು ಆತ್ಮಗು, ಪರಮಾತ್ಮಗು ಮಧ್ಯದಲ್ಲಿ ಹುಟ್ಟುತ್ತಿದ್ದಾನೆ. ಹಾಗೆ ಹುಟ್ಟುವವನು ದೇವರು ಎನ್ನುವ ಹೆಸರಿಗೆ ಸಂಬಂಧ ಇಲ್ಲದವನಾಗಿರುತ್ತಾನೆ.

ಆತ್ಮ ಪರಮಾತ್ಮ ಇಬ್ಬರೂ ನಾಶ ಇಲ್ಲದವರೇ ಆಗಿರುವುದರಿಂದ ಇಬ್ಬರೂ ತಿಳಿಯಲ್ಪಡದವರಾಗಿರುವುದರಿಂದ, ಅವರಿಬ್ಬರನ್ನು 'ದೇವರು' ಎನ್ನುವ ಹೆಸರಿನಿಂದ ಕರೆಯುತ್ತಿದ್ದೇವೆ. ಆದರೆ ಇತ್ತ ಆತ್ಮವಲ್ಲದೆ ಅತ್ತ ಪರಮಾತ್ಮವಲ್ಲದೆ ಮಧ್ಯದಲ್ಲಿ ದೇವರು ಎನ್ನುವ ಹೆಸರು ಇಲ್ಲದೆ ಹುಟ್ಟುವ ಪುರುಷನು ಮತ್ತೊಬ್ಬನು ಇದ್ದಾನೆ. ಹಾಗೆ ಹುಟ್ಟುವವನು ಕೆಲವು ಸಾವಿರ ವರ್ಷಗಳಿಗೋ, ಕೆಲವು ಲಕ್ಷಗಳ ವರ್ಷಗಳಿಗೋ ಬಂದು ಹುಟ್ಟುತ್ತಿರುತ್ತಾನೆ. ಆತನು ಮನುಷ್ಯರಂತೆ ಮನುಷ್ಯನ ಶರೀರವನ್ನು ಧರಿಸಿ ಒಂದು ಜೀವಿತ ಕಾಲವಿದ್ದು ನಂತರ ಇಲ್ಲದಂತೆ ಹೋಗುತ್ತಾನೆ. ಹಾಗೆ ಮನುಷ್ಯನಂತೆ ಯಾವಾಗಲೋ ಒಂದುಸಲ ಹುಟ್ಟುವವನು

ಮರಣಿಸಿದರೆ ಪುನಃ ಹುಟ್ಟುವುದಿಲ್ಲ. ಆತನು ಮನುಷ್ಯನಂತೆ ಕೆಲಸ ಮಾಡಿದರೂ ಆತನಿಗೆ ಪಾಪಪುಣ್ಯ ಕರ್ಮಗಳು ಅಂಟುವುದಿಲ್ಲ. ಈಕಡೆ ದೇವರೂ ಅಲ್ಲದೆ ಆಕಡೆ ಮನುಷ್ಯನೂ ಅಲ್ಲದೆ ಮನುಷ್ಯನಂತೆ ಕಾಣಿಸುತ್ತಾ ದೇವರಂತೆ ಪ್ರವರ್ತಿಸುವವನು ಮತ್ತೊಬ್ಬನಿದ್ದಾನೆನ್ನುವ ವಿಷಯ ಬಹುಶಃ ಯಾರಿಗೂ ತಿಳಿದಿಲ್ಲವೆಂದೇ ಹೇಳಬೇಕು. ಅಂತಹವನು ಹುಟ್ಟುತ್ತಾನೆಂದು ದೈವ ಗ್ರಂಥಗಳಲ್ಲಿ ಇದ್ದರೂ ಮನುಷ್ಯರು ಅದನ್ನು ಗ್ರಹಿಸದೇ ಇದ್ದಾರೆ. ಅಂತಹವನು ಯಾವಾಗಾದರೂ ಹುಟ್ಟಿದರೂ ಆತನನ್ನು ಮನುಷ್ಯನಂತೆ ಲೆಕ್ಕಿಸಿ, ಸಾಧಾರಣ ಮನುಷ್ಯನ ಬಳಿ ಪ್ರವರ್ತಿಸಿದಂತೆ ಪ್ರವರ್ತಿಸಿ, ಆತನನ್ನು ಕೂಡಾ ಬಾಧಿಸುವುದು, ವೇಧಿಸುವುದು ಮಾಡುತ್ತಿರುತ್ತಾರೆ. ಈ ವಿಷಯವಾಗಿ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ರಾಜವಿದ್ಯಾ ರಾಜಗುಹ್ಯ ಯೋಗವೆನ್ನುವ ಅಧ್ಯಾಯದಲ್ಲಿನ ಹನ್ನೊಂದನೆಯ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

***11ನೇ ಶ್ಲೋ॥ ಅವಜಾನನ್ತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್।***
***ಪರಂ ಭಾವ ಮಜಾನನ್ತೋ ಮಮ ಭೂತ ಮಹೇಶ್ವರಮ್॥***

**ಭಾವಾರ್ಥ :–** "ಸರ್ವ ಜೀವರಾಶಿಗಳಿಗು ಈಶ್ವರನು (ದೇವರು) ಆಗಿದ್ದರೂ ಮಾನವ ಶರೀರವನ್ನು ಧರಿಸಿರುವ ನನ್ನನ್ನು ನೋಡಿ, ನನ್ನಲ್ಲಿನ ಶ್ರೇಷ್ಠತ್ವವನ್ನು ತಿಳಿಯದ ಮನುಷ್ಯರು ಮೂಢಜನರಾಗಿ ಅವರ ಅಜ್ಞಾನದಿಂದ, ಅಹಂಕಾರದಿಂದ ನನ್ನನ್ನು ಅವಮಾನಿಸುತ್ತಿದ್ದಾರೆ."

ಈ ಶ್ಲೋಕದಲ್ಲಿ ನಾನು ಮಾನವ ಶರೀರವನ್ನು ಧರಿಸಿದ ಈಶ್ವರನು (ದೇವರು) ಎಂದು ಹೇಳಿದ್ದಾರೆ. ಹಾಗೆ ಯಾವಾಗಲೋ ಒಂದುಸಲ ಬಂದಿರುವ ಮಾನವ ದೇವರನ್ನು ಅಥವಾ ದೇವ ಮಾನವನನ್ನು ಉಳಿದ ಅಜ್ಞಾನ ಪ್ರಜೆಗಳು ಸಾಧಾರಣ ಮನುಷ್ಯನನ್ನು ನೋಡಿದಂತೆ ನೋಡುತ್ತಾ, ಆತನಲ್ಲಿನ ದೈವತ್ವವನ್ನು ತಿಳಿಯದ ಮೂರ್ಖರಾಗಿ, ಮನುಷ್ಯನಾಗಿ ಬಂದಿರುವ ದೇವರನ್ನು ಕೂಡಾ ಅವಮಾನಿಸುತ್ತಿದ್ದಾರೆ ಎಂದು ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಬರೆದಿದೆ.

ಅದೇ ವಿಷಯ ಉಳಿದ ಎರಡು ದೈವ ಗ್ರಂಥಗಳಲ್ಲಿ ಕೂಡಾ ಇದೆ. ಉಳಿದ ದೈವ ಗ್ರಂಥಗಳಲ್ಲಿ ಮತ್ತೊಂದು ವಿಧವಾಗಿ ಹೇಳಿದರೂ ಅರ್ಥ ಮಾತ್ರ ಒಂದೇ. ಆತ್ಮ, ಪರಮಾತ್ಮ ಮಧ್ಯದಲ್ಲಿ ಮನುಷ್ಯನಾಗಿ ಬಂದವನು (ದೇವರು) ಯಾವಾಗಲೂ ಇರುವವನಲ್ಲ ಆದ್ದರಿಂದ ಆತನ ವಿಷಯ ಮೂವರು ಪುರುಷರಲ್ಲಿ ಹೇಳಲಿಲ್ಲ. ಹಾಗೆ ಹೇಳದೇ ಹೋದರೂ ಭಗವದ್ಗೀತೆಯಲ್ಲಿ ಹೇಳಿದ ಶ್ಲೋಕವನ್ನನುಸರಿಸಿ "ನಾನು ದೇವರಾಗಿದ್ದು ಮನುಷ್ಯನಾಗಿ ಹುಟ್ಟಿಬಂದರೆ ನನ್ನ ಶ್ರೇಷ್ಠತ್ವವನ್ನು (ದೈವತ್ವವನ್ನು) ತಿಳಿಯದವರು ನನ್ನನ್ನು ಅವಮಾನಿಸುತ್ತಿದ್ದಾರೆ ಎಂದಾಗ ಮನುಷ್ಯನಾಗಿ ಬಂದವನು ದೇವರೇಯೆಂದು ತಿಳಿಯುತ್ತಿದೆ. ಆದರೆ ಮನುಷ್ಯನಾಗಿ ಬಂದಿರುವ ದೇವರು ಸಹಜವಾಗಿ ಇರುವ ಇಬ್ಬರು ದೇವರುಗಳಲ್ಲಿ ಯಾರು? ಎನ್ನುವ ಪ್ರಶ್ನೆಗೆ ಉತ್ತರವನ್ನು ನೋಡಿಕೊಳ್ಳಬೇಕು. ದೈವ ಗ್ರಂಥಗಳಲ್ಲಿ ಶಾಸ್ತ್ರಾಧಾರವಾಗಿ ಏನು ಹೇಳಿದ್ದಾರೆಂದು, ಇಬ್ಬರಲ್ಲಿ ಯಾವ ದೇವರೆಂದು ಹುಡುಕಿ ನೋಡಿದರೆ, ಪ್ರಥಮ ದೈವ ಗ್ರಂಥದಲ್ಲಿ ಜ್ಞಾನಯೋಗವೆಂಬ ಅಧ್ಯಾಯದಲ್ಲಿ ಆರನೆ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

***6ನೇ ಶ್ಲೋ॥ ಅಜೋೀಪಿಸನ್ನವ್ಯ ಯಾತ್ಮಾ ಭೂತಾನಾ ಮೀಶ್ವರೋೀಪಿಸನ್।***
***ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮ ಮಾಯಯಾ ॥***

**ಭಾವಾರ್ಥ :-** "ನಾಶವಿಲ್ಲದವನಾಗಿ ಹುಟ್ಟುವಿಕೆ ಇಲ್ಲದವನಾಗಿ, ಸಕಲ ಜೀವರಾಶಿಗಳಿಗು ಈಶ್ವರನಾಗಿ (ದೇವರಾಗಿ) ನಾನು ನನ್ನ ಪ್ರಕೃತಿಯನ್ನು ಸೇರಿ ಶರೀರವನ್ನು ತಯಾರು ಮಾಡಿಕೊಂಡು ಮಾಯೆಯೊಂದಿಗೆ ಕೂಡಿಕೊಂಡವನಾಗಿ ನನ್ನ ಆತ್ಮ ಹುಟ್ಟುತ್ತಿದೆ."

ಈ ಶ್ಲೋಕ ಭಾವನೆಯನ್ನು ನೋಡಿದರೆ ಎರಡನೆ ಆತ್ಮಗೆ ಸಂಬಂಧ ವಿಲ್ಲದೆ ಮೂರನೆ ಆತ್ಮವಾದ ಪರಮಾತ್ಮನೇ ತನ್ನ ಪ್ರಕೃತಿಯಿಂದ ಶರೀರವನ್ನು ತಯಾರು ಮಾಡಿ, ಅದರಲ್ಲಿ ತನ್ನ ಆತ್ಮವನ್ನೇ ತುಂಬಿ ಭೂಮಿಮೇಲಕ್ಕೆ ಕಳಿಸಿದ್ದಾನೆ ಎಂದು ತಿಳಿಯುತ್ತಿದೆ. ಆದರೆ ಇಲ್ಲಿ ಗಮನಿಸಬೇಕಾದ ವಿಷಯ ಏನೆಂದರೇ!

ಮೂರನೆ ಆತ್ಮವಾದ ಪುರುಷೋತ್ತಮನು ಎಲ್ಲಾಕಡೆ ವ್ಯಾಪಿಸಿದ್ದೂ ಅವಶ್ಯಕತೆ ಬಂದಾಗ ತನ್ನ ಆತ್ಮವನ್ನೇ (ಮೂರನೆ ಆತ್ಮವನ್ನೇ) ಪ್ರಕೃತಿಯಿಂದ ತಯಾರು ಮಾಡಲ್ಪಟ್ಟ ಶರೀರದಲ್ಲಿ ತುಂಬಿ ಕಳುಹಿಸುತ್ತಿದ್ದಾನೆ. ಹಾಗೆ ಹುಟ್ಟಿದವನು ಮೂರನೆ ಆತ್ಮದಲ್ಲಿ ಅಂದರೇ ಪರಮಾತ್ಮನಲ್ಲಿನ ಭಾಗವೇ ಆಗಿರುವುದರಿಂದ ಆತನನ್ನು ಕೂಡಾ ದೇವರು ಎಂದು ಕರೆಯಬಹುದು. ಮೂರನೆ ಆತ್ಮದಿಂದ ಹುಟ್ಟಿಸಲ್ಪಟ್ಟವನು ಆಗಿರುವುದರಿಂದ ಮೂರನೆ ಆತ್ಮಗೆ ಸ್ವಲ್ಪ ಕಡಿಮೆಯಾಗಿ, ಎರಡನೆ ಆತ್ಮಗೆ ಸ್ವಲ್ಪ ಹೆಚ್ಚಾಗಿದ್ದಾನೆ. ಆದ್ದರಿಂದ ಮನುಷ್ಯನಾಗಿ ಹುಟ್ಟಿದವನನ್ನು ದೇವರು ಎಂದು ಹೇಳದೆ, ಹಾಗೆಂದು ಮನುಷ್ಯನೆಂದು ಹೇಳದೆ, ಪ್ರತ್ಯೇಕವಾದ ಹೆಸರನ್ನು ಇಡುವುದು ನಡೆದಿದೆ, ಆತನೇ **ಭಗವಂತನು**.

ಇತ್ತ ಆತ್ಮಗು ಅತ್ತ ಪರಮಾತ್ಮಗು ಮಧ್ಯದಲ್ಲಿರುವವನಾದ್ದರಿಂದ ಮನುಷ್ಯನಾಗಿ ಬಂದಿರುವ ಭಗವಂತನು ಇತ್ತ ಆತ್ಮ ವಿಷಯಗಳನ್ನು, ಅತ್ತ ಪರಮಾತ್ಮ ವಿಷಯಗಳನ್ನು ತಿಳಿದವನಾಗಿದ್ದು, ಯಾವಾಗ ಯಾವ ಜ್ಞಾನ ಅಗತ್ಯವೋ ಆಗ ಆ ಜ್ಞಾನವನ್ನು ಹೇಳುತ್ತಾನೆ. ಶರೀರದಲ್ಲಿ ಶರೀರಕ್ಕೆ ಅಧಿಪತಿಯಾಗಿರುವ ಆತ್ಮ ಕೂಡಾ ಮೂರನೆ ಆತ್ಮವನ್ನು ತಿಳಿದಿರುವುದಾಗಿದ್ದರೂ ಮನುಷ್ಯನ ಕರ್ಮವನ್ನು ಅನುಸರಿಸಿ ಪ್ರವರ್ತಿಸುತ್ತಿರುತ್ತಾನೆ. ಆದ್ದರಿಂದ ತನಗೆ ಎರಡನೆ ಆತ್ಮವಾದ ತನ್ನ ವಿಷಯವನ್ನು, ಮೂರನೆ ಆತ್ಮವಾದ ಪರಮಾತ್ಮ ವಿಷಯವನ್ನು ತಿಳಿದಿದ್ದರೂ ಹೇಳುವ ಅವಕಾಶ ಇರುವುದಿಲ್ಲ. ಅಷ್ಟೇಅಲ್ಲದೆ ಮನುಷ್ಯ ಮಾಡಿಕೊಂಡ ಕರ್ಮವನ್ನನುಸರಿಸಿ ಮನುಷ್ಯನನ್ನು ಅಜ್ಞಾನಮಾರ್ಗದಲ್ಲಿ, ಅಧರ್ಮ ಮಾರ್ಗದಲ್ಲಿ ನಡೆಸುತ್ತಿರುತ್ತಾನೆ. ಸ್ವತಃವಾಗಿ ದೇವರೆಂದು ಅನಿಸಿಕೊಂಡ ಎರಡನೆ ಆತ್ಮ ತನಗೆ ಪರಮಾತ್ಮ ಜ್ಞಾನ ದೈವ ಧರ್ಮಗಳು ತಿಳಿದು ಕೂಡಾ ಮನುಷ್ಯನನ್ನು ಅಧರ್ಮ ಮಾರ್ಗದಲ್ಲಿ, ಅಜ್ಞಾನದಿಂದ ನಡೆಯುವಂತೆ ಮಾಡುವುದರಿಂದ ಭೂಮಿಮೇಲೆ ಮನುಷ್ಯರಲ್ಲಿ ಅಧರ್ಮಗಳು ಕೂಡಾ ಅಭಿವೃದ್ಧಿಯಾಗುತ್ತಿವೆ. ಆತ್ಮದಿಂದ ಭೂಮಿಮೇಲೆ ಅಧರ್ಮಗಳ ಪ್ರವರ್ತನೆ ನಡೆಯುವುದರಿಂದ ಅಧರ್ಮಗಳು ನಿಧಾನವಾಗಿ ಆಕ್ರಮಿಸಿಕೊಂಡು ಬಲವಾಗಿ

ತಯಾರಾಗಿ, ಧರ್ಮಗಳು ತಮ್ಮ ಇರುವಿಕೆಯನ್ನು ಮನುಷ್ಯರಲ್ಲಿ ಕಳೆದುಕೊಂಡು ಬಲಹೀನವಾಗಿ ಯಾರಿಗೂ ತಿಳಿಯದ ಸ್ಥಿತಿ ಏರ್ಪಡುತ್ತಿದೆ. ಹಾಗಿರುವಾಗ ಧರ್ಮಗಳಿಗೆ ಹಾನಿ ಏರ್ಪಡದಂತೆ ಧರ್ಮಗಳು ಪುನಃ ಅಭಿವೃದ್ಧಿಯಾಗುವಂತೆ ಮಾಡುವುದಕ್ಕೆ ಪರಮಾತ್ಮ ತನ್ನ ಹತ್ತಿರದಿಂದ ಪ್ರತ್ಯೇಕವಾದ ಮನುಷ್ಯನನ್ನು ಕಳಿಸುತ್ತಾನೆ. ಆ ಮನುಷ್ಯನಲ್ಲಿ ಮೂರನೆ ಆತ್ಮನಾದ ಪರಮಾತ್ಮ ಇರುವಾಗ, ತಾನು ದೇವರಾಗಿದ್ದು ಮನುಷ್ಯನಾಗಿ ಹುಟ್ಟಿ ಬಲಹೀನವಾದ ಧರ್ಮಗಳನ್ನು, ಗ್ಲಾನಿ ಏರ್ಪಟ್ಟ ಧರ್ಮಗಳನ್ನು ಪುನಃ ನೆಲೆಗೊಳಿಸುವುದಕ್ಕೆ ಸಜ್ಜಾಗುತ್ತಾನೆ. ಅದೇ ವಿಷಯವನ್ನೇ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಜ್ಞಾನ ಯೋಗದಲ್ಲಿ 7, 8 ಶ್ಲೋಕಗಳಲ್ಲಿ ಹೇಳಿದ್ದಾರೆ ನೋಡಿರಿ.

*7ನೇ ಶ್ಲೋ॥ ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।*
*ಅಭ್ಯುತ್ಥಾನಮಧರ್ಮಸ್ಯ ತದಾ ತ್ಮಾನಂ ಸೃಜಾಮ್ಯಹಮ್॥*

**ಭಾವಾರ್ಥ :–** "ಯಾವಾಗ ಧರ್ಮಗಳಿಗೆ ಗ್ಲಾನಿ ಏರ್ಪಟ್ಟು ಭೂಮಿಮೇಲೆ ಅಧರ್ಮಗಳು ಹೆಚ್ಚಾಗುತ್ತವೊ ಆಗ ನನ್ನನ್ನು ನಾನು ಸೃಷ್ಟಿಸಿಕೊಂಡು ಮನುಷ್ಯನ ಅವತಾರದಲ್ಲಿ ಬರುತ್ತಿದ್ದೇನೆ."

*8ನೇ ಶ್ಲೋ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್।*
*ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥*

**ಭಾವಾರ್ಥ :–** "ಒಳ್ಳೆಯವರನ್ನು ವೃದ್ಧಿ ಮಾಡುವುದಕ್ಕೆ ಅಂದರೇ ಮನುಷ್ಯರಲ್ಲಿ ಜ್ಞಾನವನ್ನು ಬೆಳೆಸುವುದಕ್ಕೆ ಅಜ್ಞಾನಿಗಳನ್ನು ಇಲ್ಲದಂತೆ ಮಾಡುವುದಕ್ಕೆ, ಸಕಲ ದೈವ ಧರ್ಮಗಳನ್ನು ಸಂಸ್ಥಾಪನೆ ಮಾಡುವುದಕ್ಕೆ ಎಲ್ಲಾ ಯುಗಗಳಲ್ಲಿ ಮನುಷ್ಯನಂತೆ ಹುಟ್ಟುತ್ತಿದ್ದೇನೆ."

ಈ ಎರಡು ಶ್ಲೋಕಗಳ ಭಾವನೆಗಳನ್ನು ನೋಡಿದ ನಂತರ ಎರಡನೆ ಆತ್ಮ ಅಭಿವೃದ್ಧಿ ಮಾಡಿದ ಅಧರ್ಮಗಳನ್ನು ಇಲ್ಲದಂತೆ ಮಾಡುವುದಕ್ಕೆ ಪ್ರಜೆಗಳಲ್ಲಿ

ದೈವಧರ್ಮಗಳನ್ನು ನೆಲೆಗೊಳಿಸುವುದಕ್ಕೆ ಮೂರನೆ ಆತ್ಮವಾದ ಪರಮಾತ್ಮನೇ ಸ್ವತಃವಾಗಿ ಮಾನವ ಅವತಾರದಲ್ಲಿ ಬರುತ್ತಿದ್ದಾನೆಂದು ತಿಳಿಯುತ್ತಿದೆ. ಸ್ವತಃವಾಗಿ ಪರಮಾತ್ಮನಿಂದ ಬಂದಿರುವ ಮನುಷ್ಯನೇ ಭಗವಂತನು. ಭಗವಂತನಾಗಿ ಬಂದಿರುವ ಮನುಷ್ಯರು ಗತದಲ್ಲಿ ಕೆಲವರಿದ್ದಾರೆ. ಆದರೇ ಅವರು ಭೂಮಿಮೇಲೆ ಸ್ವತಃವಾಗಿ ಮನುಷ್ಯನಾಗಿ ಬಂದಾಗ, ಉಳಿದ ಪ್ರಜೆಗಳಿಗೆ ದೈವ ಧರ್ಮಗಳನ್ನು ತಿಳಿಸಿಹೇಳಿ ಜ್ಞಾನಿಗಳನ್ನಾಗಿ ಮಾಡುವುದಕ್ಕೆ ಬಂದಾಗ, ಅವರನ್ನು ಸಾಧಾರಣ ಮನುಷ್ಯರಿಗಿಂತ ಹೀನವಾಗಿ ನೋಡಿದವರು ಇದ್ದಾರೆ. ಅವರನ್ನು ಅನೇಕ ತೊಂದರೆಗಳಿಗೀಡು ಮಾಡಿ ಅವಮಾನಿಸಿದ ಮೂರ್ಖರು ಕೂಡಾ ಇದ್ದಾರೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ ರಾಜವಿದ್ಯಾ ರಾಜಗುಹ್ಯ ಯೋಗದಲ್ಲಿ ಹನ್ನೊಂದನೆ (11) ಶ್ಲೋಕದಲ್ಲಿ ತಾನು ದೇವರಾದರೂ ಮನುಷ್ಯನಾಗಿ ಬಂದರೆ ನನ್ನ ಶ್ರೇಷ್ಠತ್ವ, ನನ್ನ ದೈವತ್ವ ತಿಳಿಯದವರು ನನ್ನನ್ನು ಅವಮಾನಿಸುತ್ತಿದ್ದಾರೆ ಎಂದು ಹೇಳಿದ್ದಾನೆ. ದೇವರು ಯಾವಾಗ ಮನುಷ್ಯನಾಗಿ ಬಂದರೂ ಅಜ್ಞಾನ ಪ್ರಜೆಗಳಿಂದ ತೊಂದರೆಗಳು, ಅವಮಾನಗಳು ಉಂಟಾಗುತ್ತಿರುವುದು ವಾಸ್ತವವೇ. ಹಾಗೆ ಮನುಷ್ಯನಾಗಿ ಬಂದವನು (ದೇವರು) ಅವಕಾಶ ಬಂದಾಗ ದೈವ ಜ್ಞಾನವನ್ನು ಹೇಳಿದರೂ ಅದನ್ನು ಮನುಷ್ಯರು ವಿಶ್ವಾಸಿಸುವುದಿಲ್ಲ. ಇದೇ ವಿಷಯವನ್ನೇ ಎಡನೇ ದೈವಗ್ರಂಥದಲ್ಲಿ (ಬೈಬಲ್‌ನಲ್ಲಿ) ಯೋಹಾನ್ ಸುವಾರ್ತೆ ಐದನೆ ಅಧ್ಯಾಯ 38ನೇ ವಾಕ್ಯದಲ್ಲಿದೆ ನೋಡಿರಿ.

**(ಯೋಹಾನ್ 5–38) "ಆತನು ಯಾರನ್ನು ಕಳಿಸಿದ್ದಾನೋ ಆತನನ್ನು ನೀವು ನಂಬಲಿಲ್ಲ. ಆದ್ದರಿಂದ ನಿಮ್ಮಲ್ಲಿ ಆತನ ವಾಕ್ಯ ನಿಲ್ಲಲಿಲ್ಲ,"**

ಈ ವಾಕ್ಯದಲ್ಲಿ ಪರಮಾತ್ಮನಾದ ಮೂರನೆ ಪುರುಷನು ಯೇಸುನನ್ನು ಕಳಿಸಿದಾಗ, ಆತನು ದೇವರ ಹತ್ತಿರದಿಂದ ಬಂದಿರುವ ದೇವರೆಂದು ನಂಬದಿರುವುದರಿಂದ, ಆತನನ್ನು (ಯೇಸುನನ್ನು) ಸಾಧಾರಣ ಮನುಷ್ಯನಾಗಿ ಲೆಕ್ಕಿಸುವುದರಿಂದ, ಆತನ(ಪರಮಾತ್ಮ) ವಾಕ್ಯಗಳು ಮನುಷ್ಯರಲ್ಲಿ ಅರ್ಥವಾಗದಂತೆ ಹೋಗಿವೆ. ಪರಮಾತ್ಮ ಕಳಿಸಿದವನು ಅಥವಾ ಪರಮಾತ್ಮನಿಂದ ಬಂದವನಾದ

ಯೇಸು ಕೆಲವು ಸಂದರ್ಭಗಳಲ್ಲಿ 'ತಾನೇ ದೇವರಾಗಿ' ಹೇಳಿದ ವಾಕ್ಯಗಳು ಕೂಡಾ ಇವೆ. ಇದನ್ನನುಸರಿಸಿ ಮೂರನೆ ಆತ್ಮನಿಂದ ಬಂದವನು ಒಂದೊಂದು ಸಲ ಮೂರನೆ ಆತ್ಮವಾಗಿ, ಅಂದರೇ ಪರಮಾತ್ಮನಾಗಿ ಮಾತನಾಡಿದ ಸಂದರ್ಭಗಳು ಇವೆ. ಮನುಷ್ಯನಾಗಿ ಬಂದಿರುವ ಭಗವಂತನು ಮೂರನೆ ಪುರುಷನಿಂದ ಬಂದವನಾದರೂ ಎರಡನೆ ಪುರುಷನನ್ನು (ಆತ್ಮನನ್ನು), ಮೂರನೆ ಆತ್ಮವನ್ನು ಸಂಪೂರ್ಣವಾಗಿ ತಿಳಿದವನಾಗಿದ್ದಾನೆ. ಅಷ್ಟೇಅಲ್ಲದೆ ತನ್ನನ್ನು ಸಂದರ್ಭಾನುಸಾರ ದೇವರೆಂದು ಹೇಳಿಕೊಂಡಿದ್ದಾನೆ. ಈ ವಿಷಯ ಯೋಹಾನ್ ಸುವಾರ್ತೆ 14ನೇ ಅಧ್ಯಾಯದಲ್ಲಿ 8, 9, 10 ವಾಕ್ಯಗಳನ್ನು ನೋಡಿದರೆ ಯೇಸು ಮನುಷ್ಯನಾಗಿ ಇದ್ದರೂ ಆತನು ವಾಸ್ತವವಾಗಿ ಯಾರೋ ತಿಳಿಯುತ್ತದೆ.

**(ಯೋಹಾನ್ 14–8, 9, 10) ಆಗ ಫಿಲಿಪ್ಪು "ಪ್ರಭುವಾ ತಂದೆಯನ್ನು (ದೇವರನ್ನು) ನಮಗೆ ಕಾಣಿಸುವಂತೆ ಮಾಡು, ನಮಗೆ ಅಷ್ಟೇ ಸಾಕು'** ಎಂದು ಆತನೊಂದಿಗೆ ಹೇಳಿದಾಗ! ಯೇಸು **"ಫಿಲಿಪ್ಪು ನಾನು ಇಷ್ಟುಕಾಲ ನಿಮ್ಮ ಹತ್ತಿರ ಇದ್ದರೂ ನೀನು ನನ್ನನ್ನು ತಿಳಿಯಲಿಲ್ಲವಾ? ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. ಆದ್ದರಿಂದ ತಂದೆಯನ್ನು ನಮಗೆ ಕಾಣಿಸುವಂತೆ ಮಾಡೆಂದು ಹೇಗೆ ಕೇಳುತ್ತಿದ್ದೀಯಾ? ತಂದೆಯಲ್ಲಿ ನಾನೂ, ನನ್ನಲ್ಲಿ ತಂದೆಯು ಇದ್ದೇವೆಂದು ನೀನು ನಂಬುತ್ತಿಲ್ಲವಾ!"**

ಈ ಮೂರು ವಾಕ್ಯಗಳು ಹೇಳಿದವನು ಮನುಷ್ಯನಾಗಿರುವ ಯೇಸು ಅಂದರೇ ಒಬ್ಬ ವ್ಯಕ್ತಿ. ಆ ವ್ಯಕ್ತಿಯನ್ನು 'ದೇವರನ್ನು ನಮಗೆ ತೋರಿಸು' ಎಂದು ಫಿಲಿಪ್ಪು ಎನ್ನುವ ಮತ್ತೊಬ್ಬ ವ್ಯಕ್ತಿ ಕೇಳಿದಾಗ "ನೀನು ಈಗ ನನ್ನನ್ನು ನೋಡುತ್ತಿದ್ದೀಯಾ ಅಲ್ಲವೆ! "ನನ್ನನ್ನು ನೋಡಿದವನು ತಂದೆಯನ್ನು ನೋಡಿದವನಾಗಿ ಇದ್ದಾನೆ" ಎಂದು ಹೇಳಿದ್ದಾನೆ. ಆ ಮಾತಿಗೆ ಅರ್ಥ ತಂದೆಯಾದ ದೇವರು ನಾನೇಯೆಂದು ಹೇಳಿದಂತೆ ಆಗುತ್ತದೆ. ಇದನ್ನನುಸರಿಸಿ ಮನುಷ್ಯನಾಗಿರುವ ಯೇಸು ನಾನೇ ಮೂರನೆ ಪುರುಷನು, ನನ್ನನ್ನು ನೀನು ನೋಡುತ್ತಿದ್ದೀಯಾ ಅಲ್ಲವೆ! ಅದರಿಂದ ದೇವರಾದ ತಂದೆಯನ್ನು ನೀನು

ನೋಡಿದಂತೆಯೇ ಎಂದು ಹೇಳಿದ್ದಾನೆ. ನಂತರ ಆತನಿಗೆ (ಫಿಲಿಪ್ಪುಗೆ) ಪ್ರಶ್ನೆ ಬಾರದಂತೆ ತಂದೆ ನಾನು ಒಂದೇಯೆಂದು ತಂದೆಯಲ್ಲಿ ನಾನು, ನನ್ನಲ್ಲಿ ತಂದೆ ಇದ್ದೇವೆಂದು ನೀನು ನಂಬುತ್ತಿಲ್ಲವಾ? ಎಂದು ಕೇಳಿದನು. ಈ ಮಾತುಗಳನ್ನು ಅನುಸರಿಸಿ ಮೂರನೆ ಪುರುಷನಿಂದ ಹುಟ್ಟಿದವನು ಮನುಷ್ಯನಾದ ಭಗವಂತನು. ಭಗವಂತನಾಗಿರುವ ಮನುಷ್ಯನಿಗೆ ಪರಮಾತ್ಮ ತಂದೆಯಾಗಿದ್ದಾನೆ. ಪರಮಾತ್ಮ ಭಗವಂತನ ರೂಪದಲ್ಲಿ ಭೂಮಿಮೇಲಕ್ಕೆ ತನ್ನ ಜ್ಞಾನವನ್ನು ಹೇಳುವುದಕ್ಕೆ ಬಂದಿದ್ದಾನೆ ಆದ್ದರಿಂದ ಪರಮಾತ್ಮನಾದ ತಂದೆ, ಕುಮಾರನಾದ ಭಗವಂತನು ಇಬ್ಬರೂ ಬೆರೆತಿದ್ದಾರೆ. ಅದರಿಂದ ಭಗವಂತನ ರೂಪದಲ್ಲಿರುವ ಪರಮಾತ್ಮ ಯೆಂದು ದೇವರ ಹತ್ತಿರದಿಂದ ಬಂದಿರುವ ಮನುಷ್ಯನನ್ನು ಹೇಳಬಹುದು. ಪರಮಾತ್ಮ ಭಗವಂತ ಸೇರಿ ಇರುವುದರಿಂದ ಮೇಲ್ನೋಟಕ್ಕೆ ಕಾಣಿಸುವ ಭಗವಂತನಾಗಿ ಇದ್ದರೂ ಒಳಗೆ ಪರಮಾತ್ಮನೇ ಇದ್ದಾನೆ. ಆದ್ದರಿಂದ **"ನನ್ನನ್ನು ನೋಡಿದರೆ ನನ್ನ ತಂದೆಯನ್ನು ನೋಡಿದಂತೆಯೇ"** ಎಂದು ಯೇಸು ಹೇಳಿದ್ದಾನೆ. ಮನುಷ್ಯನಾಗಿ ಬಂದಿರುವ ಭಗವಂತನು ಆತ್ಮನನ್ನು, ಪರಮಾತ್ಮನನ್ನು ಇಬ್ಬರನ್ನು ತಿಳಿದವನಾಗಿ ಇದ್ದಾನೆ. ಈ ವಿಷಯವೆಲ್ಲವೂ ಮನುಷ್ಯರು ಚೆನ್ನಾಗಿ ಯೋಚಿಸಿದರೆ ಹೊರತು ಅರ್ಥವಾಗುವುದಿಲ್ಲ. ಆದ್ದರಿಂದ ಜಾಗ್ರತೆಯಾಗಿ ಓದಿರಿ (ತಿನ್ನಿರಿ), ಜಾಗ್ರತೆಯಾಗಿ ಗ್ರಹಿಸಿರಿ (ಕುಡಿಯಿರಿ).

ಮೊದಲ ಆತ್ಮವಾದ ಜೀವಾತ್ಮಗೆ ತಂದೆಯಾಗಿ ಆತ್ಮ ಇದ್ದಾನೆ. ಹಾಗೆಯೇ ಆತ್ಮಗೆ ತಂದೆಯಾಗಿ ಪರಮಾತ್ಮ ಇದ್ದಾನೆ. ಜೀವಾತ್ಮಗೆ ಪರಮಾತ್ಮ 'ತಾತ ದೇವರು' ಆಗಿ, ಆತ್ಮಗೆ ಪರಮಾತ್ಮ 'ತಂದೆ ದೇವರಾಗಿ' ಇದ್ದಾನೆ. ಜೀವಾತ್ಮಗೆ ಆತ್ಮ 'ತಂದೆ ದೇವರಾಗಿ' ಇದ್ದಾನೆ. ಈ ವಾವಿ ವರಸೆಗಳೆಲ್ಲ ಮೊದಲೇ ತಿಳಿದುಕೊಂಡಿದ್ದೇವೆ. ಶರೀರದಲ್ಲಿನ ಎರಡನೆ ಆತ್ಮ ಶರೀರ ಪರಿಧಿಯಲ್ಲಿಯೇ ಕೆಲಸ ಮಾಡುತ್ತಿದೆ. ಅಷ್ಟೇ ಅಲ್ಲದೆ ಜೀವಾತ್ಮ ಕರ್ಮವನ್ನು ಅನುಸರಿಸುವ ಎರಡನೆ ಆತ್ಮ ಕೆಲಸ ಮಾಡುವುದರಿಂದ ಆತ್ಮ ಅವಶ್ಯಕತೆಯನ್ನು ಅನುಸರಿಸಿ ಒಂದುಸಲ ಜ್ಞಾನಿಯಾಗಿ, ಒಂದುಸಲ ಅಜ್ಞಾನಿಯಾಗಿ ಪ್ರವರ್ತಿಸಬೇಕಾಗಿರುತ್ತದೆ.

ಮನುಷ್ಯರು ಹೆಚ್ಚಾಗಿ ಪಾಪವನ್ನೇ ಸಂಪಾದಿಸಿಕೊಳ್ಳುವುದರಿಂದ, ಅಜ್ಞಾನ ಮಾರ್ಗದಲ್ಲಿಯೇ ಹೆಚ್ಚಾಗಿ ನಡೆಯಬೇಕಾಗಿರುವುದರಿಂದ, ಜೀವಿಯನ್ನು ನಡೆಸುವವನು ಆತ್ಮವೇ ಆಗಿರುವುದರಿಂದ, ಆತ್ಮ ಜೀವಿಯನ್ನು ಅನುಸರಿಸಿ ಅಜ್ಞಾನವನ್ನೇ ಹೊರಗೆ ಹೇಳಬೇಕಾಗಿರುತ್ತದೆ. ಆತ್ಮದಿಂದಲೇ ಅಧರ್ಮಗಳು ಅಭಿವೃದ್ಧಿ ಆಗುತ್ತಿವೆಯೆಂದು ಹೇಳಿಕೊಂಡಿದ್ದೇವೆ. ಇನ್ನು ಮೂರನೆ ಆತ್ಮನಾದ ಪರಮಾತ್ಮ ಕದಲುವವನು ಅಲ್ಲ, ಚಲಿಸುವವನು ಅಲ್ಲ. ಆತನು ಏನೂ ಹಿಡಿಸಿಕೊಳ್ಳದ ಸಾಕ್ಷಿಭೂತನಾಗಿ ಇದ್ದಾನೆ. ಹಾಗಿರುವಾಗ ಭೂಮಿಮೇಲೆ ದೈವ ಧರ್ಮಗಳನ್ನು ತಿಳಿಸಿ, ಮನುಷ್ಯರಿಗೆ ಜ್ಞಾನಮಾರ್ಗವನ್ನು ತೋರಿಸಿ, ಪರಮಾತ್ಮನಲ್ಲಿ ಐಕ್ಯ ಮಾಡುವುದಕ್ಕೆ ಸಾಧ್ಯವಾದವನು ಒಬ್ಬ ಭಗವಂತನು ಹೊರತು ಯಾರೂ ಇಲ್ಲ. ಭಗವಂತನಾಗಿ ಬಂದವನೇ ಮನುಷ್ಯನಿಗೆ ಜ್ಞಾನವನ್ನು ಹೇಳಿ ಸತ್ಯವಾದ ದೈವಮಾರ್ಗದಲ್ಲಿ ಕಳುಹಿಸಿ, ಕೊನೆಗೆ ದೇವರಲ್ಲಿ ಸೇರಿಸಬೇಕು. ಮನುಷ್ಯ ಜ್ಞಾನವನ್ನು ತಿಳಿದು, ಯೋಗಮಾರ್ಗವನ್ನು ಅನುಸರಿಸಿ ಕೊನೆಗೆ ಮೋಕ್ಷವನ್ನು ಹೊಂದಬೇಕಾಗಿರುತ್ತದೆ. ಇವೆಲ್ಲವೂ ಭಗವಂತನಿಂದಲೇ ಸಾಧ್ಯವಾಗುತ್ತದೆ ಆದ್ದರಿಂದ ಮಧ್ಯ ದೈವ ಗ್ರಂಥವಾದ ಇಂಜೀಲಿನಲ್ಲಿ ಅಂದರೇ ಬೈಬಲ್ ಗ್ರಂಥದಲ್ಲಿ ಯೋಹಾನ್ 14ನೇ ಅಧ್ಯಾಯದಲ್ಲಿ ಆರನೆ ವಾಕ್ಯದಲ್ಲಿ ಭಗವಂತನಾಗಿ ಬಂದವನು ಮನುಷ್ಯರ ಕಡೆ ಹೇಗೆ ಇದ್ದಾನೋ ಹೇಳುತ್ತಿದ್ದಾರೆ ಗಮನಿಸಿರಿ.

**(ಯೋಹಾನ್ 14–6) "ಯೇಸು ನಾನೇ ಮಾರ್ಗವು, ಸತ್ಯವು, ಜೀವವು. ನನ್ನ ಮುಖಾಂತರವೇ ಹೊರತು ಯಾರೂ ತಂದೆ ಹತ್ತಿರಕ್ಕೆ ಬರುವುದಿಲ್ಲ."**

ಈ ವಾಕ್ಯವನ್ನು ಗಮನಿಸಿದರೆ ಇದರಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಪದಗಳು ಹೀಗೆ ಇವೆ. 'ನಾನೇ ಮಾರ್ಗ' ಅಂದರೇ ದೇವರ ಹತ್ತಿರಕ್ಕೆ ಹೋಗುವುದಕ್ಕೆ ತಕ್ಕಂತಹ ಜ್ಞಾನವು ನಾನೇಯೆಂದು ಹೇಳುತ್ತಿದ್ದಾನೆ. ಅಂದರೇ ಭಗವಂತನು ಹೇಳಿದ ಜ್ಞಾನವೇ ಮೋಕ್ಷದಾಯಕವಾದ ಪರಮಾತ್ಮನನ್ನು ಸೇರುವ ಮಾರ್ಗವೆಂದು ತಿಳಿಯುತ್ತಿದೆ. ನಂತರ ಎರಡನೆ ಪದ 'ನಾನೇ ಸತ್ಯವು' ಎಂದು ಇದೆ. ಜ್ಞಾನ ತಿಳಿದ ನಂತರ ಅದನ್ನು ಆಚರಿಸುವ ಆಚರಣೆಯನ್ನು ಯೋಗ

ಎಂದು ಕರೆಯುತ್ತೇವೆ. ಯೋಗ ಸತ್ಯದಿಂದ ಕೂಡಿಕೊಂಡಿದೆಯೆಂದು ಹೇಳುತ್ತಾ 'ನಾನೇ ಸತ್ಯ' ಎಂದು ಹೇಳಿದ್ದಾನೆ. ಭಗವಂತನ ಮುಖಾಂತರವೇ ಆಚರಿಸುವ ಯೋಗವನ್ನು ತಿಳಿಯಬೇಕಾಗಿದೆ ಆದ್ದರಿಂದ 'ನಾನೇ ಸತ್ಯವು' ಎಂದು ಹೇಳಿದ್ದಾನೆ. ಜ್ಞಾನವನ್ನು ತಿಳಿದು, ಯೋಗವನ್ನು ಆಚರಿಸಿದಾಗ ಮನುಷ್ಯನಿಗೆ ಇರುವ ಕರ್ಮವೆಲ್ಲವೂ ಸುಟ್ಟುಹೋಗಿ ಕೊನೆಗೆ ಜೀವಿಯು ಕರ್ಮರಹಿತನಾಗಿ ಪರಲೋಕ ರಾಜ್ಯವೆನ್ನುವ ಪರಂಧಾಮವನ್ನು ಸೇರುತ್ತಿದ್ದಾನೆ, ಅಂದರೇ ಮೋಕ್ಷವನ್ನು ಹೊಂದಿ ಪರಮಾತ್ಮನಲ್ಲಿ ಶಾಶ್ವತವಾಗಿ ನಿಂತುಹೋಗುತ್ತಿದ್ದಾನೆ. ಜೀವಿಯು ಮನುಷ್ಯನಾಗಿ ಇರುವಾಗ ಮಾತುಮಾತಿಗು ಮರಣವನ್ನು ಹೊಂದುತ್ತಾ ಪುನಃ ಹೊಸ ಜನ್ಮವನ್ನು ಹೊಂದುತ್ತಾ ಜನ್ಮ ಜನ್ಮಕ್ಕೂ ಬಾಲ್ಯ, ಯೌವ್ವನ, ಕೌಮಾರ್ಯ, ವೃದ್ಧಾಪ್ಯವನ್ನು ಹೊಂದುತ್ತಿದ್ದಾನೆ. ಪ್ರತಿ ಜನ್ಮದಲ್ಲಿಯೂ ಮೃತನಾಗಿ ಉಳಿಯುತ್ತಿದ್ದಾನೆ. ಮೋಕ್ಷ ಹೊಂದಿ ಪರಮಾತ್ಮಯೆನ್ನುವ ಮೂರನೆ ಪುರುಷನಲ್ಲಿ ಐಕ್ಯವಾದವನು ಪರಮಾತ್ಮನಂತೆ ಜನನ ಮರಣವನ್ನು ಹೊಂದದೆ, ನಿತ್ಯ ಕರ್ಮಗಳನ್ನು ಅನುಭವಿಸದೆ ಒಂದೇ ಜೀವನವನ್ನು ದೇವರಲ್ಲಿ ಹೊಂದಿರುತ್ತಾನೆ. ಭಗವಂತನಾದ ಅವನ ಮೂಲಕವೇ ಮನುಷ್ಯ ಮೋಕ್ಷವನ್ನು ಹೊಂದುತ್ತಿದ್ದಾನೆ. ಆದ್ದರಿಂದ ವಾಕ್ಯದಲ್ಲಿ 'ನಾನೇ ಜೀವ' ಎಂದು ಹೇಳಿದ್ದಾನೆ. ನಿತ್ಯ ಜೀವ ಎಂದರೇ ಮೋಕ್ಷದಲ್ಲಿ ದೇವರಂತೆ ನಿತ್ಯವೂ ಒಂದೇ ವಿಧವಾಗಿ ಇರುವುದು, ದೇವರಲ್ಲಿ ಬೆರೆತುಹೋಗಿ ದುಃಖರಹಿತ ಜೀವವನ್ನು ಹೊಂದುವುದನ್ನು 'ನಾನೇ ಜೀವವು' ಎಂದು ಹೇಳಿದ್ದಾನೆ. ಮೇಲಿನ ವಾಕ್ಯದ ಪ್ರಕಾರ ಮನುಷ್ಯನಾಗಿ ಬಂದಿರುವ ಭಗವಂತನಿಂದ ಎಷ್ಟು ದೊಡ್ಡ ಪ್ರಯೋಜನವಿದೆಯೋ ತಿಳಿಯುತ್ತಿದೆ. ಆದರೇ ಭೂಮಿಮೇಲೆ ಭಗವಂತನಾಗಿ ಬಂದಿರುವ ಮನುಷ್ಯ ಯಾರು ಎನ್ನುವುದು ಯಾರಿಗೂ ತಿಳಿಯದ ಸಮಸ್ಯೆಯಾಗಿ, ರಹಸ್ಯವಾಗಿ ಉಳಿದುಹೋಗುತ್ತಿದೆ. ಅಪರೂಪವಾಗಿ ದೇವರು ಮನುಷ್ಯನಾಗಿ ಬಂದರೆ ಆತನಲ್ಲಿನ ಜ್ಞಾನವನ್ನು ಗ್ರಹಿಸದ ಮನುಷ್ಯರು ಆತನನ್ನು ತಿಳಿಯಲಾರರು. ಆತನ ಮುಖಾಂತರ ಬರುವ ಮೋಕ್ಷವನ್ನು ಹೊಂದಲಾರರು.

ಮೇಲಿನ ವಾಕ್ಯದಲ್ಲಿ ನನ್ನ ಮುಖಾಂತರ ಹೊರತು ಯಾರೂ ತಂದೆಯ ಹತ್ತಿರಕ್ಕೆ ಬರುವುದಿಲ್ಲ ಎಂದು ಇದೆ ಅಲ್ಲವೆ! ಇದನ್ನು ವಿವರಿಸಿಕೊಂಡು ನೋಡಿದರೆ ಭಗವಂತನಿಗೆ ತಂದೆ ಪರಮಾತ್ಮ ಆಗುತ್ತಾನೆ. ಜೀವಾತ್ಮ ಪರಮಾತ್ಮ ಹತ್ತಿರಕ್ಕೆ ಸೇರಬೇಕೆಂದರೆ ಭಗವಂತನು ಹೇಳಿದ ಜ್ಞಾನದಿಂದಲೇ ಸಾಧ್ಯವಾಗುತ್ತದೆ. ಭಗವಂತನು ಹೊರತು ಆತ್ಮ, ಪರಮಾತ್ಮ ಇಬ್ಬರೂ ಜ್ಞಾನವನ್ನು ಹೇಳುವುದಿಲ್ಲ. ಆತ್ಮ ಶರೀರ ಕಾರ್ಯಗಳನ್ನು ಮಾಡುತ್ತಾ, ಮಾಡಿಸುತ್ತಾ ತನ್ನ ಕೆಲಸದಲ್ಲಿ ತಾನು ಇರುತ್ತಾನೆ. ಪರಮಾತ್ಮನಾದವನು ಏನು ಬೋಧಿಸದೆ ಸುಮ್ಮನಿರುವವನು. ಜೀವಾತ್ಮಗೆ ಇತ್ತ ಆತ್ಮವಾಗಲಿ, ಅತ್ತ ಪರಮಾತ್ಮವಾಗಲಿ ಏನು ಬೋಧಿಸುವುದಿಲ್ಲ. ಆದ್ದರಿಂದ ಜೀವಿಯು ಮೋಕ್ಷವನ್ನು ಹೊಂದುವುದಕ್ಕೆ ತಕ್ಕಂತಹ ಜ್ಞಾನವನ್ನು ಆತ್ಮ ಪರಮಾತ್ಮ ಕೊಡದಿರುವಾಗ, ಪರಮಾತ್ಮದಿಂದ ಬಂದಿರುವ ಭಗವಂತನು ಮಾತ್ರವೇ ಜ್ಞಾನವನ್ನು ಕೊಟ್ಟು ಮೋಕ್ಷವನ್ನು ಹೊಂದುವಂತೆ ಮಾಡುತ್ತಿದ್ದಾನೆ. ಆದ್ದರಿಂದ ವಾಕ್ಯದಲ್ಲಿ 'ನನ್ನ ಮುಖಾಂತರ ಹೊರತು ಯಾರೂ ತಂದೆ ಹತ್ತಿರಕ್ಕೆ ಬರುವುದಿಲ್ಲ' ಎಂದು ಇದೆ. ಯೇಸು ಸಾಧಾರಣ ಮನುಷ್ಯನಾಗಿದ್ದರೂ ಆತನು ತಿಳಿಸಿದ ಜ್ಞಾನವನ್ನನುಸರಿಸಿ ಆತನನ್ನು ಭಗವಂತನಾಗಿ ಹೇಳಬಹುದು.

**ಪ್ರಶ್ನೆ :– ಯೇಸು ಆತ್ಮ, ಪರಮಾತ್ಮಯೆನ್ನುವ ಇಬ್ಬರು ದೇವರುಗಳು ಮಾಡದ ಕೆಲಸವನ್ನು ಮಾಡುತ್ತಾ ಧರ್ಮಗಳನ್ನು ಬೋಧಿಸುವುದರಿಂದ ಆತನನ್ನು ಭಗವಂತನು ಎಂದು ಕರೆಯುತ್ತಿದ್ದಾರೆಂದು ಹೇಳಿದ್ದೀರ. 'ದೇವರು' ಎನ್ನುವ ಪದಕ್ಕೆ ಅರ್ಥವಿದೆ. ಹಾಗೆ 'ಪುರುಷೋತ್ತಮ', 'ಪರಮಾತ್ಮ' ಎನ್ನುವ ಪದಗಳಿಗೆ ಅರ್ಥವನ್ನು ನೀವು ಹೇಳಿದ್ದೀರ. ಅದೇ ವಿಧವಾಗಿ 'ಭಗವಂತನು' ಎಂಬ ಪದಕ್ಕು ಕೂಡಾ ಏನಾದರೂ ಅರ್ಥ ಇದೆಯಾ! ಇದ್ದರೆ ವಿವರಿಸಿ ಹೇಳಿರಿ.**

**ಉತ್ತರ :–** ಆತ್ಮ ಎಂದರೇ ಅಡಗಿರುವುದೆಂದು ಅರ್ಥ. ಶರೀರದಲ್ಲಿ ಆತ್ಮ ಅಡಗಿದೆ. ಆದ್ದರಿಂದ ಅದು ಯಾರಿಗೂ ತಿಳಿಯುವುದಿಲ್ಲ. ಜೀವಾತ್ಮ ಅಂದರೇ ಶರೀರದಲ್ಲಿ ಅಡಗಿ ಜೀವನ ಸಾಗಿಸುವುದು. ಪರಮಾತ್ಮಯೆಂದರೇ ಆತ್ಮಗಿಂತಲೂ ಬೇರೆಯಾಗಿ ಇರುವುದೆಂದು ಅರ್ಥವಿದೆ. ಅದೇ ವಿಧವಾಗಿ **'ಭಗವಂತನು**

**ಎಂದರೇ ಭಗದಿಂದ ಹುಟ್ಟಿದವನೆಂದು'** ಅರ್ಥ. ಭಗ ಎಂದರೇ ತಾಯಿ ಗರ್ಭ ಎಂದು ಹೇಳಬಹುದು. ಗರ್ಭದಿಂದ ಹುಟ್ಟಿದವನು ಮನುಷ್ಯ ಆಗುತ್ತಾನೆ. ಭಗದಿಂದ ಹುಟ್ಟಿದವನು ಭಗವಂತನು ಆದರೆ ಭೂಮಿಮೇಲೆ ಮನುಷ್ಯರೆಲ್ಲರೂ ತಾಯಿಯವೊಂದು ಗರ್ಭದಿಂದಲೇ ಹುಟ್ಟಿದ್ದಾರೆ, ಆದ್ದರಿಂದ ಮನುಷ್ಯರೆಲ್ಲರೂ ಭಗವಂತರನ್ನಾಗಿ ಲೆಕ್ಕಿಸಲಾಗುತ್ತದೆ. ಹಾಗಿರುವಾಗ ಭಗವಂತನು ಒಬ್ಬನೇಯೆಂದು ಭಗವಂತನು ಭೂಮಿಮೇಲೆ ಅಪರೂಪವಾಗಿ ಹುಟ್ಟುತ್ತಾನೆಂದು ಹೇಳುವುದು ಸತ್ಯವಾ? ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೆ ಉತ್ತರ ಏನೆಂದರೆ!

ಭೂಮಿಮೇಲೆ ಮನುಷ್ಯರಲ್ಲಿ ಯಾವ ಒಬ್ಬನೂ ಕೂಡಾ ತಾಯಿಗರ್ಭ ದಿಂದ ಹುಟ್ಟಲಿಲ್ಲ. ಆದ್ದರಿಂದ ಯಾರನ್ನೂ ಭಗವಂತನು ಎನ್ನುವುದಕ್ಕೆ ಸಾಧ್ಯವಿಲ್ಲ. ಮನುಷ್ಯನ ಶರೀರ ಅಂದರೇ ಶಿಶುವಾಗಿರುವ ಶರೀರ ತಾಯಿ ಭಗದಿಂದ ಹುಟ್ಟುತ್ತಿದೆ. ಆಗ ಶರೀರದಲ್ಲಿ ಜೀವಿಯಿಲ್ಲ. ಶರೀರ ಹುಟ್ಟಿದ ನಂತರ ಜೀವಿಯು ಶರೀರದಲ್ಲಿ ಸೇರುತ್ತಿದ್ದಾನೆ. ಈ ವಿಷಯ ಎಲ್ಲರಿಗೂ ಹೊಸದಾಗಿದ್ದರೂ ವಾಸ್ತವ ವಿಷಯ ಅಷ್ಟೇ. ಈ ವಿಷಯ ತಿಳಿಯಬೇಕೆಂದರೆ 1980ರಲ್ಲಿ ಬರೆದ ನಮ್ಮ ರಚಗಳಲ್ಲಿನ **"ಜನನ ಮರಣ ಸಿದ್ಧಾಂತ"** ಎನ್ನುವ ಗ್ರಂಥವನ್ನು ಓದಿರಿ. ಜೀವಿಯು ಮರಣಿಸಿದ ತಕ್ಷಣ ಹೊಸ ಶರೀರವನ್ನು ಆಶ್ರಯಿಸುತ್ತಿದ್ದಾನೆ. ಹೊಸ ಶರೀರ ಎಂದರೇ ಅವಯವಗಳೆಲ್ಲ ಪೂರ್ತಿ ಏರ್ಪಟ್ಟ ನಂತರ ಪ್ರಸವಿಸಲ್ಪಟ್ಟು ಜೀವಿಯು ಸೇರುವುದಕ್ಕೆ ಅನುಕೂಲವಾಗಿರುವುದನ್ನು ಹೊಸ ಶರೀರ ಎನ್ನುತ್ತಿದ್ದೇವೆ. ಪ್ರಸವ ನಡೆದ ನಂತರ ಜೀವಿಯು ಬಂದು ಹೊಸ ಶರೀರದಲ್ಲಿ ಸೇರುತ್ತಿದ್ದಾನೆ. ತಾಯಿಗರ್ಭದಿಂದ ಬಂದಿರುವ ಶರೀರದಲ್ಲಿ ಜೀವಿಯು ಇಲ್ಲವಾದ್ದರಿಂದ ಜನ್ಮಿಸಿದ ಪ್ರತಿಯೊಬ್ಬನು ಭಗವಂತನು ಎನ್ನುವುದಕ್ಕೆ ಸಾಧ್ಯವಿಲ್ಲ. ಮನುಷ್ಯನಿಗೆ (ಜೀವಿಗೆ) ಜನನ ಹೊರಗೆ ನಡೆಯುತ್ತಿದೆ ಆದರೆ ತಾಯಿಗರ್ಭದಲ್ಲಿ ಅಲ್ಲ. ಶಾಸ್ತ್ರಬದ್ಧವಾಗಿ ಜೀವಿಯು ಪ್ರಸವಿಸಲ್ಪಟ್ಟ ಹೊಸ ಶರೀರದಲ್ಲಿ ಸೇರುತ್ತಿದ್ದಾನೆ. ಸಜೀವವಾಗಿ ಶಿಶು ಶರೀರದೊಂದಿಗೆ ಯಾರೂ ಹುಟ್ಟುವುದಿಲ್ಲ. ಹಾಗೆ ಹುಟ್ಟುವವನು ಪರಮಾತ್ಮನಿಂದ ಬಂದವನೇಯೆಂದು ಹೇಳಬಹುದು.

ಪರಮಾತ್ಮದಿಂದ ಬಂದಿರುವ ಪರಮಾತ್ಮ ಅಂಶ, ಮರಣಿಸಿ ಬಂದವನು ಹೊಸ ಶರೀರವನ್ನು ಸೇರಿದಂತೆ ಶಿಶುಶರೀರದಲ್ಲಿ ಸೇರುತ್ತಿಲ್ಲ. ದೇವರ ಅಂಶ ತಾಯಿ ಹೊಟ್ಟೆಯಲ್ಲಿನ ಶಿಶುಶರೀರದಲ್ಲಿಯೇ ಮೊದಲಿನಿಂದ ಇದ್ದು ಸಜೀವವಾಗಿ ಹುಟ್ಟುತ್ತಿದ್ದಾನೆ. ದೇವರಾದ ಪರಮಾತ್ಮ ಭೂಮಿಮೇಲೆ ಹುಟ್ಟಿ ಅಧರ್ಮಗಳನ್ನು ಅಡಗಿಸಿ, ಧರ್ಮಗಳನ್ನು ಪುನಃ ಪುನರುದ್ಧರಿಸುವುದಕ್ಕೆ ಸಜ್ಜಾದಾಗ ತಾಯಿಗರ್ಭ ದಲ್ಲಿ ಯಾವಾಗ ತಯಾರಾಗುವುದಕ್ಕೆ ಪ್ರಾರಂಭಿಸುತ್ತಾನೋ ಆ ಸಮಯದಿಂದ ಆ ಶರೀರದಲ್ಲಿ ಇದ್ದಾನೆ. ಆದ್ದರಿಂದ ಶರೀರದೊಂದಿಗೆ ಭಗವಂತನು ಬರುತ್ತಿದ್ದಾನೆ. ಸಾಧಾರಣ ಮನುಷ್ಯನಂತೆ ಭಗವಂತನು ಹುಟ್ಟಲಿಲ್ಲ. ಸಜೀವವಾಗಿ ಶರೀರ ದೊಂದಿಗೆ ತಾಯಿಗರ್ಭದಿಂದ ಬರುತ್ತಿದ್ದಾನೆ. ಆದ್ದರಿಂದ ಭಗದಿಂದ ಹುಟ್ಟಿದವನು ಒಬ್ಬನೇ ಆಗುತ್ತಾನೆ. ಹಾಗೆ ಹುಟ್ಟಿದ ಒಬ್ಬನು ಭಗವಂತನೆಂದು ಕರೆಯಲ್ಪಡುತ್ತಿ ದ್ದಾನೆ. ಸಾಧಾರಣ ಜನರು ಯಾರೂ ತಾಯಿಗರ್ಭದಿಂದ ಸಜೀವವಾಗಿ ಹುಟ್ಟಲಿಲ್ಲ. ಆದ್ದರಿಂದ ಯಾರನ್ನೂ ಭಗವಂತನೆಂದು ಕರೆಯುವುದಕ್ಕೆ ಸಾಧ್ಯವಿಲ್ಲ. ಭಗವಂತನು ಪರಮಾತ್ಮನಾದ ದೇವರೆಂದು ಹೇಳಬಹುದು. ಪರಮಾತ್ಮ ಪ್ರಪಂಚವೆಲ್ಲ ಎಲ್ಲರಲ್ಲಿಯೂ, ಎಲ್ಲರ ಹೊರಗೂ ಇದ್ದರೂ ಪ್ರತ್ಯೇಕಿಸಿ ಭಗವಂತನ ಶರೀರದಲ್ಲಿ ಕೂಡಾ ಇದ್ದಾನೆ. ಸಮುದ್ರದಲ್ಲಿರುವುದು ನೀರು, ಸಮುದ್ರದಿಂದ ಎಗರಿಬಿದ್ದ ನೀರಿನ ಬಿಂದುವಿನಲ್ಲಿ ಕೂಡಾ ನೀರೆ ಇದೆ. ಸಮುದ್ರ ಎಷ್ಟು ದೊಡ್ಡದಾದರೂ ಅದರಲ್ಲಿ ಇರುವುದು ನೀರೆ, ಹಾಗೆ ನೀರಿನ ಬಿಂದು ಎಷ್ಟು ಚಿಕ್ಕದಾದರೂ ಅದರಲ್ಲಿರುವುದು ಕೂಡಾ ನೀರೆಯೆಂದು ಹೇಳಬಹುದು. ಅದೇ ವಿಧವಾಗಿ ಬಾಹ್ಯದಲ್ಲಿ ವ್ಯಾಪಿಸಿರುವುದು ಪರಮಾತ್ಮನೇ ಹಾಗೆ ಭಗವಂತನ ಶರೀರದಲ್ಲಿರುವುದು ಪರಮಾತ್ಮನೇ. ಆದ್ದರಿಂದ ಭಗವಂತನು ಮನುಷ್ಯನಾದರೂ, ಆತನನ್ನು ದೇವರೆಂದು ಕೆಲವು ಸಂದರ್ಭಗಳಲ್ಲಿ ಹೇಳುತ್ತಿದ್ದೇವೆ.

**ಪ್ರಶ್ನೆ :- ಭಗವಂತನು ಒಬ್ಬನೇ ಪ್ರಜೆಗಳಿಗೆ ಜ್ಞಾನವನ್ನು ಹೇಳುತ್ತಾನೆ ಹೊರತು ಶರೀರದಲ್ಲಿನ ಆತ್ಮ ಜ್ಞಾನ ಹೇಳುವುದಿಲ್ಲವೆಂದು ನೀವೇ ಹೇಳಿದ್ದೀರ. ನೀವು ಆಗಾಗ ಮಾತನಾಡುತ್ತಾ ನಾನು ಗ್ರಂಥವನ್ನು ಬರೆಯುತ್ತಿಲ್ಲ. ನನ್ನಲ್ಲಿನ ಆತ್ಮವೇ**

**ನನ್ನಿಂದ ಬರೆಯಿಸುತ್ತಿದೆಯೆಂದು, ನೀವು ಬರೆದ ಜ್ಞಾನಕ್ಕೆ ಕರ್ತ ನೀವು ಅಲ್ಲವೆಂದು ನಿಮ್ಮಲ್ಲಿನ ಆತ್ಮಯೆಂದು ಹೇಳಿದ್ದೀರ. ಆಗ ನಿಮ್ಮ ಶರೀರದಲ್ಲಿನ ಆತ್ಮ ದೈವಜ್ಞಾನವನ್ನು ಒದಗಿಸುತ್ತಿದೆ ಅಲ್ಲವೆ! ನಿಮ್ಮ ಗ್ರಂಥಗಳಲ್ಲಿ ಎಷ್ಟೋ ದೊಡ್ಡ ಜ್ಞಾನವಿದೆ. ಆ ದೊಡ್ಡ ಜ್ಞಾನವನ್ನು ನಿಮ್ಮ ಶರೀರದಲ್ಲಿನ ಆತ್ಮ ಹೇಳಿದಂತೆ ಅಲ್ಲವೆ! ಆತ್ಮಜ್ಞಾನವನ್ನು, ಪರಮಾತ್ಮ ಜ್ಞಾನವನ್ನು ನಿನ್ನ ಶರೀರದಲ್ಲಿನ ಆತ್ಮ ಹೇಳಿದಾಗಲೇ ನೀನು ಗ್ರಂಥ ಬರೆದಂತಾದರೆ ಶಾಸ್ತ್ರಬದ್ಧವಾಗಿ ಆತ್ಮ ಕೂಡಾ ಜ್ಞಾನ ಹೇಳುತ್ತಿದೆಯೆಂದು ತಿಳಿಯುತ್ತಿದೆ. ಹಾಗಿರುವಾಗ ಆತ್ಮ ದೈವ ಧರ್ಮಗಳನ್ನು ಬೋಧಿಸುವುದಿಲ್ಲ ಎನ್ನುವುದು ಅಸತ್ಯವಾಗುತ್ತದೆ ಅಲ್ಲವೆ! ನೀವು ಅಸತ್ಯವನ್ನು ಹೇಳುವುದಿಲ್ಲವೆಂದು ನಾವು ನಂಬುತ್ತಿದ್ದೇವೆ. ಆದರೂ ಈ ವಿಷಯದಲ್ಲಿ ನಾವು ಏನಂದುಕೊಳ್ಳಬೇಕು? ಹೇಗೆ ಅರ್ಥ ಮಾಡಿಕೊಳ್ಳಬೇಕು.**

**ಉತ್ತರ :-** ನಿಮ್ಮನ್ನು ಸತ್ಯವಂತರನ್ನಾಗಿ ಮಾಡಬೇಕೆನ್ನುವ ಉದ್ದೇಶದಿಂದ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಶರೀರದಲ್ಲಿನ ಆತ್ಮ ಭಗವಂತನಂತೆ ಧರ್ಮ ಪ್ರತಿಷ್ಠಾಪನೆ ಮಾಡುವುದಿಲ್ಲ. ಆತ್ಮ ಕರ್ಮಪ್ರಕಾರ ಪ್ರಪಂಚ ವಿಷಯಗಳನ್ನು ನಡೆಸುತ್ತಿರುತ್ತದೆ. ದೇವರ ವಿಷಯಗಳು ಕರ್ಮ ಅಧೀನದಲ್ಲಿರುವುದಿಲ್ಲ. ದೇವರ ಜ್ಞಾನವೆಲ್ಲವೂ ಶ್ರದ್ಧೆಮೇಲೆ ಆಧಾರಪಟ್ಟಿರುತ್ತದೆ, ಕರ್ಮಕ್ಕೆ ಯಾವುದೇ ಸಂಬಂಧ ಇರುವುದಿಲ್ಲ. ಮನುಷ್ಯನ ಶ್ರದ್ಧೆ ದೇವರ ಮೇಲೆ ಇದ್ದಂತಾದರೆ ಮನುಷ್ಯನ ಶ್ರದ್ಧೆಯನ್ನನುಸರಿಸಿ ಆತ್ಮ ಜೀವಿಗೆ ಜ್ಞಾನವನ್ನು ತಿಳಿಸುತ್ತದೆ. ಜೀವಿಯ ಶ್ರದ್ಧೆ ದೇವರ ಮೇಲೆ ಇಲ್ಲದಿರುವಾಗ ಆತನಿಗೆ ಜ್ಞಾನವನ್ನು ತಿಳಿಸುವುದಿಲ್ಲ. ಮನುಷ್ಯನ ಶ್ರದ್ಧೆ ಪ್ರಪಂಚ ವಿಷಯಗಳಲ್ಲಿದ್ದರೆ ಆತನ ಶ್ರದ್ಧೆ ಪ್ರಕಾರ ಅಜ್ಞಾನವನ್ನೇ ತಿಳಿಸುತ್ತದೆ. ಆತ್ಮ ಶರೀರದಲ್ಲಿ ನಿಯಮ ನಿಬದ್ಧತೆಯಿಂದ ಕೆಲಸ ಮಾಡುತ್ತಿರುತ್ತದೆ. ಜೀವಾತ್ಮ ಕರ್ಮವನ್ನನುಸರಿಸಿ ಆತನಿಗೆ ಕಷ್ಟಸುಖಗಳನ್ನು ಒದಗಿಸುತ್ತಿರುತ್ತದೆ. ಹಾಗೆಯೇ ಜೀವಿಯ ಅಭಿರುಚಿಯನ್ನು ಶ್ರದ್ಧೆಯನ್ನನುಸರಿಸಿ ಜ್ಞಾನವನ್ನಾಗಲಿ, ಅಜ್ಞಾನ ವನ್ನಾಗಲಿ ಆತ್ಮ ಒದಗಿಸುತ್ತಿರುತ್ತದೆ. ನನಗೆ ಜ್ಞಾನದ ಮೇಲೆ ಶ್ರದ್ಧೆ ಇರುವುದರಿಂದ, ನನ್ನ ಚಿಂತೆಯೆಲ್ಲವೂ ದೇವರ ಮೇಲೆ ಇರುವುದರಿಂದ ನನ್ನ ಆತ್ಮ ನನಗೆ

ಉತ್ತಮವಾದ ಜ್ಞಾನವನ್ನು ಒದಗಿಸುತ್ತಿದೆ. ಶರೀರದಲ್ಲಿ ಆತ್ಮ ಎಲ್ಲಾ ಕೆಲಸಗಳು ಮಾಡುತ್ತಾ ನನ್ನಿಂದಲೇ ನಿಮಗೆ ಜ್ಞಾನವಾಗಲಿ, ಊಹೆಯಾಗಲಿ, ಅಜ್ಞಾನವಾಗಲಿ, ಬುದ್ಧಿವಂತಿಕೆಯಾಗಲಿ, ಬುದ್ಧಿಹೀನತೆಯಾಗಲಿ ಉಂಟಾಗುತ್ತಿರುತ್ತ ದೆಂದು ಹೇಳುತ್ತಿದೆ. ಈ ವಿಷಯ ಪ್ರಥಮ ದೈವಗ್ರಂಥವಾದ ಭಗವದ್ಗೀತೆ, ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ 15ನೇ ಶ್ಲೋಕದಲ್ಲಿ ಹೀಗಿದೆ ನೋಡಿರಿ.

***15ನೇ ಶ್ಲೋ॥***

***ಸರ್ವಸ್ಯ ಚಾಹಂ ಹೃದಿಸನ್ನಿ ವಿಷ್ಟೋಮತ್ತಃ ಸ್ಮೃತಿ ಜ್ಞಾನ ಮಪೋಹನಂಚ।***
***ವೇದೈಶ್ಚ ಸರ್ವೈರಹ ಮೇವ ವೇದ್ಯೋ ವೇದಾಂತಕೃ ದ್ವೇದವಿ ದೇವ ಚಾಹಮ್ ॥***

**ಭಾವಾರ್ಥ :–** ಸರ್ವ ಜೀವರಾಶಿಗಳ ಹೃದಯಗಳಲ್ಲಿ ನಾನು ಇದ್ದೇನೆ. ನನ್ನಿಂದಲೇ ಮನುಷ್ಯರಿಗೆ ಸ್ಮೃತಿ, ಜ್ಞಾನ, ಊಹೆ ಉಂಟಾಗುತ್ತಿರುತ್ತದೆ. ಗುಣಗಳ ಫಲಿತವನ್ನು ಕೊಡುವವನು ನಾನೇ, ಗುಣಗಳ ಅಂತ್ಯದಲ್ಲಿ ಇರುವವನು ನಾನೇ, ಗುಣಗಳನ್ನು ತಿಳಿದವನು ನಾನೇ.

ಈ ಶ್ಲೋಕದಲ್ಲಿ ಜ್ಞಾನ ಉಂಟಾಗುತ್ತದೆ ಎಂದು ಹೇಳಿದ್ದಾರೆ. ಮನುಷ್ಯನ ಶ್ರದ್ಧೆಯನ್ನನುಸರಿಸಿ ದೈವಜ್ಞಾನವನ್ನು ಒದಗಿಸುವವನು ಆತ್ಮ ಆಗಿರುವುದರಿಂದ ಆ ವಿಧವಾಗಿ ಹೇಳಿದ್ದಾರೆ. ಅಷ್ಟೇಅಲ್ಲದೆ ಪ್ರಪಂಚದಲ್ಲಿ ಕೆಲಸಗಳು ಮಾಡುವುದಕ್ಕೆ ಊಹೆಯನ್ನು ಕೊಡುವವನು ಕೂಡಾ ಆತ್ಮವೇ ಆಗಿರುವುದರಿಂದ ಮನುಷ್ಯನ ಇಷ್ಟವನ್ನನುಸರಿಸಿ ಜ್ಞಾನ ವಿಷಯಗಳಲ್ಲಿ ಆತ್ಮ ಪ್ರವರ್ತಿಸುತ್ತಿದೆಯೆಂದು, ಪ್ರಪಂಚ ವಿಷಯಗಳಲ್ಲಿ ಕರ್ಮವನ್ನನುಸರಿಸಿ ಪ್ರವರ್ತಿಸುತ್ತಿದೆಯೆಂದು ತಿಳಿಯುತ್ತಿದೆ. ನನ್ನ ಶ್ರದ್ಧೆ ಜ್ಞಾನದ ಮೇಲೆ ಇರುವುದರಿಂದ ನನಗೆ ಶರೀರದಲ್ಲಿರುವ ಹೃದಯ (ಮೆದಳಿ) ದಿಂದ ಆತ್ಮ ಅನೇಕ ಜ್ಞಾನ ವಿಷಯಗಳನ್ನು ಒದಗಿಸುವುದರಿಂದ ಅದನ್ನೇ ನಾನು ಗ್ರಂಥರೂಪದಲ್ಲಿ ಬರೆಯುವುದು ನಡೆದಿದೆ. ಸ್ವಲ್ಪವಾದರೂ ಜ್ಞಾನದ ಮೇಲೆ ಗಮನವಿಲ್ಲದೆ ಅಧರ್ಮಗಳಲ್ಲಿ ಮುಳುಗಿ, ಅಧರ್ಮಾಚರಣೆ ಹೊಂದಿದವರಿಗೆ ಆತ್ಮ ಅವರ ಇಷ್ಟವನ್ನು ಅನುಸರಿಸಿ ಅಜ್ಞಾನವನ್ನು,

ಅಧರ್ಮಗಳನ್ನು ಬೋಧಿಸುತ್ತಿರುತ್ತಾನೆ. ಆ ವಿಧವಾಗಿ ಆತ್ಮದಿಂದ ಅಜ್ಞಾನ ಕೂಡಾ ಉಂಟಾಗುತ್ತಿದೆ. ಶರೀರದಲ್ಲಿ ಆತ್ಮ ಒದಗಿಸಿದ ಅಜ್ಞಾನದಿಂದಲೇ ಭೂಮಿಮೇಲೆ ಅಧರ್ಮಗಳು ಬೆಳೆದುಹೋಗಿ, ಅಧರ್ಮಗಳನ್ನು ಅಡಗಿಸಿ ಧರ್ಮಗಳನ್ನು ಪ್ರಚಾರ ಮಾಡುವುದಕ್ಕೆ ಪರಮಾತ್ಮನೇ ಮಾರುವೇಷದಲ್ಲಿ ಭಗವಂತನ ರೂಪದಲ್ಲಿ ಭೂಮಿಮೇಲಕ್ಕೆ ಬರುತ್ತಿದ್ದಾನೆ. ಹಾಗೆ ಮೂರನೆ ಪುರುಷನಾದ ಪರಮಾತ್ಮ ಭೂಮಿಮೇಲೆ ಬಾರದೆ ಹೋದರೆ ಧರ್ಮಗಳನ್ನು ಕುರಿತು ಹೇಳುವವರಿರುವುದಿಲ್ಲ. ಆತ್ಮ ಮನುಷ್ಯನ ಇಷ್ಟವನ್ನು ಅನುಸರಿಸಿ ಹೇಳುವುದರಿಂದ, ಮನುಷ್ಯರೆಲ್ಲರೂ ಅಜ್ಞಾನ ಮಾರ್ಗವನ್ನೇ ಇಷ್ಟಪಡುವುದರಿಂದ ಆತ್ಮ ಕೂಡಾ ಅಧರ್ಮಗಳನ್ನೇ ಬೋಧಿಸುತ್ತಿರುತ್ತದೆ. ಎಲ್ಲಿಯೋ ಅಪರೂಪವಾಗಿ ನನ್ನಂತಹ ಮನುಷ್ಯ ಜ್ಞಾನವನ್ನು ಇಷ್ಟಪಟ್ಟರೂ, ಆತ್ಮ ಧರ್ಮಗಳನ್ನು ನನಗೆ ಬೋಧಿಸಿದರೂ, ನಾನು ಹೇಳುವ ಧರ್ಮಗಳನ್ನು ಕೇಳುವ ಸ್ಥಿತಿಯಲ್ಲಿ ಪ್ರಜೆಗಳು ಇರುವುದಿಲ್ಲ. ಅವರ ಇಷ್ಟವನ್ನನುಸರಿಸಿ ಆತ್ಮ ಅಜ್ಞಾನವನ್ನು ಬೋಧಿಸುವುದರಿಂದ ನಾನು ಹೇಳುವ ಜ್ಞಾನವನ್ನು ಅವರು ಒಪ್ಪಿಕೊಳ್ಳುವುದಿಲ್ಲ. ನಾನು ಹೇಳುವ ಜ್ಞಾನ ಸರಿಯಾದುದಲ್ಲವೆಂದು ಪ್ರಚಾರ ಮಾಡುತ್ತಾರೆ. ಆತ್ಮ ನನ್ನೊಬ್ಬನಿಗೆ ಜ್ಞಾನ ಹೇಳಿ, ಲಕ್ಷಮಂದಿಗೆ ಅಜ್ಞಾನ ಹೇಳುವುದರಿಂದ ಅಜ್ಞಾನದ ಮಾತನ್ನೇ ಎಲ್ಲರೂ ಸಮರ್ಥಿಸುತ್ತಾರೆ. ಜ್ಞಾನದಕಡೆ ಬರುವವರು ಅಪರೂಪವಾಗಿರುತ್ತಾರೆ.

**ಪ್ರಶ್ನೆ :– ದೇವರಾದ ಪರಮಾತ್ಮ ಭೂಮಿಮೇಲೆ ಧರ್ಮಪ್ರತಿಷ್ಠಾಪನೆಗೆ ಭಗವಂತನಾಗಿ ಬರುತ್ತಾನೆಂದು, ಹಾಗೆ ಬಂದಾಗ ಆತನ ಜ್ಞಾನವನ್ನು ಕೇಳದವರು, ತಿಳಿಯದವರು ಭಗವಂತನನ್ನು ಕೂಡಾ ಅವಮಾನಿಸುತ್ತಾರೆಂದು ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಇದೆಯೆಂದು ಹೇಳಿದ್ದೀರ. ಆ ವಿಷಯ ಇತರ ದೈವ ಗ್ರಂಥಗಳಲ್ಲಿ ಎಲ್ಲಿಯಾದರೂ ಹೇಳಿದ್ದಾರಾ? ಎನ್ನುವುದು ನಮ್ಮ ಪ್ರಶ್ನೆ.**

**ಉತ್ತರ :–** ಭಗವದ್ಗೀತೆಯಲ್ಲಿಯೇ ಅಲ್ಲದೇ ಉಳಿದ ಎರಡು ದೈವ ಗ್ರಂಥಗಳಲ್ಲಿ ಕೂಡಾ ಹೇಳಿದ್ದಾರೆ. ದ್ವಿತೀಯ ದೈವಗ್ರಂಥಗಳಲ್ಲಿ ಯೋಹಾನ್ ಸುವಾರ್ತೆಯಲ್ಲಿ

ಐದನೆ ಅಧ್ಯಾಯದಲ್ಲಿ 38ನೇ ವಚನದಲ್ಲಿ ಆ ಮಾತನ್ನು ಗುರುತಿಸಬಹುದು. ಒಂದುಸಲ ಆ ವಾಕ್ಯವನ್ನು ನೋಡೋಣ.

**(ಯೋಹಾನ್ 5–38) "ಆತನು ಯಾರನ್ನು ಕಳಿಸಿದ್ದಾನೊ ನೀವು ಆತನನ್ನು ನಂಬಲಿಲ್ಲ ಆದ್ದರಿಂದ ನಿಮ್ಮಲ್ಲಿ ಆತನ ವಾಕ್ಯ ನಿಲ್ಲಲಿಲ್ಲ."**

ಇದೇ ವಿಷಯವನ್ನು ತಿಳಿಸುವ ಅನೇಕ ವಾಕ್ಯಗಳು ಬೈಬಲ್ ಗ್ರಂಥದಲ್ಲಿ ಇವೆ. ಅಷ್ಟೇಅಲ್ಲದೆ ಅಂತಿಮ ದೈವ ಗ್ರಂಥವಾದ ಖುರ್‌ಆನ್ ಗ್ರಂಥದಲ್ಲಿ ಸುರಾ 15, ಆಯತ್ 28, 29, 30, 31 ವಾಕ್ಯಗಳಲ್ಲಿಯೂ ಮತ್ತು 89ನೇ ಸೂರಾ 22ನೇ ಆಯುತ್‌ನಲ್ಲಿಯುೂ **"ದೇವರು ಮನುಷ್ಯನಾಗಿ ಅವತರಿಸುತ್ತಾನೆಂದು"** ಇದೆ. ಅಲ್ಲಿ ಬರೆದ ವಾಕ್ಯದಲ್ಲಿರುವ ವಿಷಯವನ್ನು ಸ್ವಲ್ಪ ಶ್ರದ್ಧೆಯಿಂದ ನೋಡಿದರೆ ನಮ್ಮ ಬುದ್ಧಿಗೆ ಒಳಗಿರುವ ಆತ್ಮವೇ ಸರಿಯಾದ ಜ್ಞಾನವನ್ನು ಅರ್ಥವಾಗುವಂತೆ ಮಾಡಬಲ್ಲದು. ಈಗ ಖುರ್‌ಆನ್‌ನಲ್ಲಿನ 15ನೇ ಸೂರಾದಲ್ಲಿನ ವಾಕ್ಯಗಳನ್ನು ನೋಡೋಣ.

**(15–28, 29, 30, 31)**

**(28) ಕೊಳೆತು ಚೆನ್ನಾಗಿ ಒಣಗಿಹೋದ ಮಣ್ಣಿನಿಂದ ನಾನು ಒಬ್ಬ ಮಾನವನನ್ನು ಸೃಷ್ಟಿಸುತ್ತಿದ್ದೇನೆ ಎಂದು ನಿನ್ನ ಪ್ರಭುವು ದೂತರೊಂದಿಗೆ ಹೇಳಿದ್ದಾನೆ.**

**(29) ನಾನು ಆತನನ್ನು ಪೂರ್ತಿಯಾಗಿ ತಯಾರು ಮಾಡಿ ಆತನಲ್ಲಿ ನನ್ನ ಆತ್ಮವನ್ನು ಊದಿದಾಗ ನೀವೆಲ್ಲಾ ಆತನ ಮುಂದೆ ಸಾಷ್ಟಾಂಗ ಬೀಳಿರಿ.**

**(30) ದೇವದೂತರೆಲ್ಲರೂ ಸಾಷ್ಟಾಂಗ ಬಿದ್ದಿದ್ದಾರೆ.**

**(31) ಒಂದು ಇಬ್ಲೀಸು ಹೊರತು ಸಾಷ್ಟಾಂಗ ಬೀಳುವವರೊಂದಿಗೆ ಸೇರುವುದಕ್ಕೆ ಅವನು ನಿರಾಕರಿಸಿದ್ದಾನೆ.**

ಈ ನಾಲ್ಕು ವಾಕ್ಯಗಳನ್ನು ಸಾವಧಾನವಾಗಿ ಗ್ರಹಿಸಿದರೆ ಪರಮಾತ್ಮ ಮನುಷ್ಯನಾಗಿ ಹುಟ್ಟುವುದೇ ಅಲ್ಲದೆ, ಅವಮಾನವನ್ನು ಕೂಡಾ ಹೊಂದುತ್ತಿದ್ದಾನೆಂದು ತಿಳಿದಿದೆ.

**"ಒಣಗಿಹೋದ ಮಣ್ಣಿನಿಂದ ನಾನು ಒಬ್ಬ ಮನುಷ್ಯನನ್ನು ಸೃಷ್ಠಿಸುತ್ತಿದ್ದೇನೆ ಎಂದು ನಿನ್ನ ಪ್ರಭು ದೂತರೊಂದಿಗೆ ಹೇಳಿದ್ದಾನೆ"** ಎಂದು ಇದೆ. ಪರಮಾತ್ಮ ತನ್ನಲ್ಲಿ ಸಂಕಲ್ಪಿಸಿಕೊಳ್ಳುತ್ತಲೇ ಅದು ಆತನ ದೂತರಿಗೆ ತಿಳಿದುಹೋಗುತ್ತದೆ. ತಕ್ಷಣ ದೇವರ ಸಂಕಲ್ಪಕ್ಕೆ ಅನುಕೂಲವಾಗಿ ದೇವದೂತರು ನಡೆದುಕೊಳ್ಳುತ್ತಾರೆ. ಪರಮಾತ್ಮ ಏನಾದರೂ ನಡೆಯಬೇಕೆಂದು ಸಂಕಲ್ಪಿಸಿಕೊಂಡರೆ ಅದನ್ನು ಗ್ರಹಿಸಿದ ದೂತರು ತಕ್ಷಣ ಸ್ಪಂದಿಸಿ ಆ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ಮೊದಲ ದೇವರಾದ ಪರಮಾತ್ಮ ಕೆಲಸ ಮಾಡದಿದ್ದರೂ ಆತನು ಅಂದುಕೊಂಡಿರುವುದೇನಾದರೂ ಕೂಡಲೇ ನಡೆದುಹೋಗುತ್ತದೆ. ದೇವರು ಅಂದುಕೊಳ್ಳುವ ಪ್ರತಿ ವಿಷಯ ದೂತರಿಗೆ ತಿಳಿದುಹೋಗುತ್ತಿರುತ್ತದೆ. ಈ ವಿಷಯವಾಗಿ ಅಂತಿಮ ದೈವಗ್ರಂಥದಲ್ಲಿ ಸೂರಾ ಎರಡು ಆಯತ್ 117ರಲ್ಲಿ ಹೀಗಿದೆ.

**(2-117) "ಭೂಮಿ ಆಕಾಶಗಳನ್ನು ಪ್ರಪ್ರಥಮವಾಗಿ ಸೃಷ್ಠಿಸಿದವನು ಆತನೇ. ಆತನು ಯಾವ ಕೆಲಸವನ್ನಾದರೂ ಮಾಡಲು ಸಂಕಲ್ಪಿಸಿಕೊಂಡಾಗ ಅದನ್ನು 'ತಯಾರಾಗು ಎಂದು ಹೇಳಿದರೆ ಸಾಕು ಅದು ತಯಾರಾಗಿಹೋಗುತ್ತದೆ."**

ಈ ವಾಕ್ಯದಲ್ಲಿ ದೇವರ ಸಂಕಲ್ಪವನ್ನು ದೂತರು ತಿಳಿದು ನೇರವೇರಿಸುವಂತೆ ಇದೆ. ಹಾಗೆಯೇ ಪರಮಾತ್ಮನಾದ ದೇವರು (15-28) ರಲ್ಲಿ "ನಾನು ಮಣ್ಣಿ ನಿಂದ ಒಬ್ಬ ಮನುಷ್ಯನನ್ನು ಸೃಷ್ಠಿಸುತ್ತಿದ್ದೇನೆಂದು" ದೂತರೊಂದಿಗೆ ಹೇಳಿದ್ದಾನೆ. ಅಷ್ಟೇ ಅಲ್ಲದೆ ದೇವರು ಮನುಷ್ಯನನ್ನು ತಯಾರು ಮಾಡಿ ಆತನೊಳಗೆ ತನ್ನ ಆತ್ಮವನ್ನೇ ಊದಿದಾಗ ನೀವೆಲ್ಲಾ ಸಾಷ್ಟಾಂಗಬೀಳಿರಿ ಎಂದು ಪರಮಾತ್ಮ ಹೇಳಿದಾಗ, ದೇವದೂತರೆಲ್ಲರೂ ಸಾಷ್ಟಾಂಗ ನಮಸ್ಕಾರ ಮಾಡಿದ್ದಾರೆ. ಆದರೆ ಇಬ್ಲೀಸ್‌ನೊಂದಿಗೆ (ಮಾಯೆಯೊಂದಿಗೆ) ಕೂಡಿಕೊಂಡ ಮನುಷ್ಯರು ಆತನಿಗೆ

ನಮಸ್ಕರಿಸಲಿಲ್ಲ. ನಮಸ್ಕಾರ ಮಾಡದಿರುವುದು ಆತನನ್ನು ಗೌರವಿಸದಂತೆಯೇ ಆಗುತ್ತದೆ. ಹಾಗೆಯೇ ಮಾಯೆಯೊಂದಿಗಿರುವ ಮನುಷ್ಯರು ದೇವರಿಂದ ಬಂದಿರುವ ಭಗವಂತನನ್ನು ದೇವರೆಂದು ತಿಳಿಯದೆ ಸಾಧಾರಣ ಮನುಷ್ಯನಂತೆ ಲೆಕ್ಕಿಸಿ, ಇನ್ನೂ ದೊಡ್ಡ ದೊಡ್ಡ ಅವಮಾನಗಳು ಕೂಡಾ ಮಾಡುತ್ತಾರೆಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ. 15ನೇ ಸೂರಾದಲ್ಲಿನ ನಾಲ್ಕು ವಾಕ್ಯಗಳ ಪ್ರಕಾರ 'ದೇವರ ಆತ್ಮದಿಂದ ಕೂಡಿದ ಮನುಷ್ಯ ಭೂಮಿಮೇಲೆ ಬರುತ್ತಾನೆಂದು' ತಿಳಿಯುತ್ತಿದೆ. ಇದರ ಪ್ರಕಾರ 'ದೇವರು ಭೂಮಿಮೇಲೆ ಅವತರಿಸುತ್ತಾನೆಂದು' ಖುರ್‌ಆನ್ ಗ್ರಂಥದಲ್ಲಿ ಕೂಡಾ ನಿರ್ಧಾರಿಸಲ್ಪಟ್ಟಿದೆ. ಆದರೆ ದೈವ ಗ್ರಂಥದಲ್ಲಿ ಹೇಳಿರುವ ವಿಷಯಗಳು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದೆ, ದೇವರು ಹೇಳಿದ ಜ್ಞಾನವನ್ನು ಬೇರೆ ವಿಧವಾಗಿ ಕೆಲವರು, ವಿರುದ್ಧವಾಗಿ ಕೆಲವರು ಅರ್ಥ ಮಾಡಿಕೊಳ್ಳುತ್ತಿದ್ದಾರೆ. 'ದೇವರು ಅವತರಿಸುತ್ತಾನೆ' ಎನ್ನುವ ದೈವ ಸಂದೇಶವನ್ನು ಕೆಲವರು ಅರ್ಥ ಮಾಡಿಕೊಳ್ಳದೆ ದೇವರು ಅವತರಿಸುವವನು ಅಲ್ಲವೆಂದು, ಅವತರಿಸುತ್ತಾನೆ ಎಂಬಮಾತು ಅಸತ್ಯವೆಂದು ಹೇಳುತ್ತಿದ್ದಾರೆ.

ನನಗೆ ತಿಳಿದಮಟ್ಟಿಗೆ ದೇವರು ಎರಡು ಯುಗಗಳಲ್ಲಿ, ಎರಡು ಅವತಾರಗಳಾಗಿ ಹುಟ್ಟಿದ್ದಾನೆಂದು ಅಂದುಕೊಳ್ಳುತ್ತಿದ್ದೇನೆ. ಇಲ್ಲಿಯವರೆಗು ದ್ವಿತೀಯ ದೈವ ಗ್ರಂಥದಲ್ಲಿ ಜ್ಞಾನವನ್ನು ಬೋಧಿಸಿದ ಯೇಸು ದೇವರ ಅವತಾರವಾಗಿ ಗುರುತಿಸಿದ್ದೇನೆ. ಇದು ಕಲಿಯುಗದಲ್ಲಿನ ಮಾತು. ದ್ವಾಪರಯುಗ ದಲ್ಲಿನ ಸಮಾಚಾರದೊಳಗೆ ಹೋದರೆ ಪ್ರಥಮ ದೈವ ಗ್ರಂಥವನ್ನು ಅರ್ಜುನನಿಗೆ ಬೋಧಿಸಿದ ಕೃಷ್ಣನು ದೇವರ ಅವತಾರವೇಯೆಂದು ಹೇಳುತ್ತಿದ್ದೇನೆ. ಭಗವದ್ಗೀತೆ ಯನ್ನು ಹೇಳಿದ ಕೃಷ್ಣನು ತನ್ನ ಬೋಧನೆಯಲ್ಲಿ **"ನಾನೇ ದೇವರು"** ಎಂದು ಹೇಳುವುದೇ ಅಲ್ಲದೆ ತಾನು ಭೂಮಿಮೇಲಕ್ಕೆ ಧರ್ಮಪ್ರತಿಷ್ಠಾಪನೆಗೆ ಬಂದಿದ್ದೇ ನೆಂದು ಕೂಡಾ ಹೇಳಿದ್ದಾನೆ. ದ್ವಾಪರಯುಗದಲ್ಲಿ ಬಂದಿರುವ ಭಗವಂತನು ಶ್ರೀಕೃಷ್ಣನು. ಹಾಗೆಯೇ ಕಲಿಯುಗದಲ್ಲಿ ಬಂದಿರುವ ಭಗವಂತನು ಯೇಸು ಎಂದು ಸ್ಪಷ್ಟವಾಗಿ ತಿಳಿಯುತ್ತಿದೆ. ಆದರೆ ಮನುಷ್ಯರು ಮತಗಳ ಮಧ್ಯದಲ್ಲಿ

ಸಿಲುಕಿಕೊಂಡು ಹಿಂದೂಗಳಾಗಿ ಇರುವವರು ಯೇಸುನನ್ನು ಒಪ್ಪಿಕೊಳ್ಳುವುದಿಲ್ಲ. ಕ್ರೈಸ್ಥರಾಗಿ ಇರುವವರು ಶ್ರೀಕೃಷ್ಣನನ್ನು ಒಪ್ಪಿಕೊಳ್ಳುವುದಿಲ್ಲ' ಒಬ್ಬರು ಒಪ್ಪಿಕೊಂಡರೂ ಒಪ್ಪಿಕೊಳ್ಳದಿದ್ದರೂ ಸತ್ಯ ಸತ್ಯವಾಗಿಯೇ ಇರುತ್ತದೆ ಆದರೆ ಇತರರು ಒಪ್ಪಿಕೊಳ್ಳಲಿಲ್ಲ ವೆಂದು ಸತ್ಯ ಅಸತ್ಯವಾಗಿ ಬದಲಾಗುವುದಿಲ್ಲ. ಯಾರು ಒಪ್ಪಿಕೊಂಡರೂ ಒಪ್ಪಿಕೊಳ್ಳದಿದ್ದರೂ ಕೃಷ್ಣನು, ಯೇಸು ಇಬ್ಬರೂ ಭಗವಂತನಾಗಿ ಬಂದವರೇ. ಶ್ರೀಕೃಷ್ಣನು ಎನ್ನುವುದು ಮನುಷ್ಯರು ಗುರುತಿಸುವ ಹೆಸರಾಗಿದೆ. ಆದರೆ ಕೃಷ್ಣನು ಎಂಬ ಹೆಸರಿನಿಂದಿರುವ ಶರೀರವು ಸಾಧಾರಣ ಮನುಷ್ಯನದ್ದು ಅಲ್ಲ ಅದು ಭಗವಂತನ ಶರೀರವೆಂದು ತಿಳಿಯಬೇಕು. ಭಗವಂತನದ್ದಾಗಲಿ, ಸಾಧಾರಣ ಮನುಷ್ಯನದ್ದಾಗಲಿ ಶರೀರ ಎರಡೂ ಒಂದೇ ವಿಧವಾಗಿದ್ದು, ಒಂದೇ ವಿಧವಾಗಿ ಮರಣಿಸಿ, ಒಂದೇ ವಿಧವಾಗಿ ನಶಿಸುತ್ತದೆ. ಆದರೆ ಭಗವಂತನ ಶರೀರದಲ್ಲಿರುವುದು ಮೂರನೆಯ ಪುರುಷನಾದ ಪರಮಾತ್ಮನೇಯೆಂದು ತಿಳಿಯಬೇಕು. ಕೃಷ್ಣನ ಶರೀರದಲ್ಲಿ ಪರಮಾತ್ಮನೇ ಇದ್ದಾನೆ. ಹಾಗೆಯೇ ಕಲಿಯುಗದಲ್ಲಿ ಬಂದಿರುವ ಯೇಸು ಶರೀರದಲ್ಲಿ ಕೂಡಾ ಪರಮಾತ್ಮನೇ ಇದ್ದಾನೆ. ಒಂದೇ ಪರಮಾತ್ಮ ಇಬ್ಬರ ಶರೀರಗಳಲ್ಲಿ ಇದ್ದಾನೆ ಆದಕಾರಣ ದ್ವಾಪರಯುಗದಲ್ಲಿ ಕೃಷ್ಣನಾಗಿ ಬಂದವನು, ಕಲಿಯುಗದಲ್ಲಿ ಯೇಸು ಆಗಿ ಬಂದವನು ಇಬ್ಬರೂ ಒಬ್ಬರೇ ಎಂದು ಹೇಳಬಹುದು. ಆದ್ದರಿಂದ ಕೃಷ್ಣನಾಗಿ ಇರುವವನೇ ಕಲಿಯುಗದಲ್ಲಿ ಯೇಸು ಆಗಿ ಬಂದಿದ್ದಾನೆಂದು ಹೇಳಬಹುದು. ನಂತರ ಯಾವಾಗಾದರೂ ದೇವರು ಭಗವಂತನಾಗಿ ಭೂಮಿಮೇಲೆಗೆ ಬಂದರೆ ಮೊದಲ ಕೃಷ್ಣನೇ, ನಂತರ ನಂತರ ಎಷ್ಟು ಬಾರಿಯಾದರೂ ಬರುತ್ತಾನೆ. ಇದನ್ನನುಸರಿಸಿ ಕೃಷ್ಣನಾಗಿ ಬಂದವನೇ ಯೇಸುವಾಗಿ, ಯೇಸುವಾಗಿ ಬಂದವನೇ ನಂತರ ಆದರಣಕರ್ತ ನಾಗಿ ಬರುತ್ತಾನೆಂದು ತಿಳಿಯುತ್ತಿದೆ. ಭಗವಂತನ ರೂಪಗಳು ಎಷ್ಟು ಬದಲಾದರೂ, ಭಗವಂತನ ಹೆಸರುಗಳು ಎಷ್ಟು ಇದ್ದರೂ ಭಗವಂತನಾಗಿ ಬರುವವನು ಒಬ್ಬನೇ.

ಕೃಷ್ಣನಾಗಿ ಬಂದಾಗ ಬೋಧಿಸಿದವನೇ ಯೇಸುವಾಗಿ ಬಂದಾಗ ಕೂಡಾ ಬೋಧಿಸಿದ್ದಾನೆ. ಮೊದಲು ಬೋಧಿಸಿದವನೇ ಎರಡನೇ ಸಲ ಬೋಧಿಸುವುದರಿಂದ ಮೊದಲು ಹೇಳಿದ ಬೋಧನೆಯನ್ನೇ ಎರಡನೇ ಸಲ ಕೂಡಾ ಹೇಳಿದ್ದಾನೆ. ಆದರೆ ಭಾಷೆ ಬದಲಾವಣೆಯಿಂದ, ಬರಹ ವ್ಯತ್ಯಾಸದಿಂದ ಇಬ್ಬರು ಹೇಳಿದ ಬೋಧನೆಯಲ್ಲಿ ಎಲ್ಲಿಯಾದರೂ ಸ್ವಲ್ಪ ವ್ಯತ್ಯಾಸ ಕಾಣಿಸಿದರೂ ಎರಡು ಬೋಧನೆಗಳು ಒಂದಾಗಿಯೇ ಇರುತ್ತವೆ. ಮನುಷ್ಯರಲ್ಲಿರುವ ಮತದಿಂದ ಕೃಷ್ಣನನ್ನು, ಯೇಸುನನ್ನು ಬೇರೆಬೇರೆ ಮತಸ್ಥರಾಗಿ ಕೆಲವರು ನೋಡುತ್ತಿದ್ದಾರೆ. ಹಾಗೆಯೇ ಅವರು ಹೇಳಿದ ಬೋಧನೆಗಳು ಬೇರೆಬೇರೆಯಾಗಿ ಇದ್ದಂತೆ ಭ್ರಮಿಸುತ್ತಿದ್ದಾರೆ. ಮತಗಳನ್ನು ಬಿಟ್ಟು ಜ್ಞಾನ ದೃಷ್ಠಿಯಿಂದ ನೋಡಿದರೆ ಭಗವಂತರು ಇಬ್ಬರೂ ಒಂದೇ, ಇಬ್ಬರ ಬೋಧನೆ ಒಂದೇಯೆಂದು ತಿಳಿಯುತ್ತಿದೆ. ಕೃಷ್ಣನು ಹೇಳಿದ ಪ್ರಥಮ ದೈವಗ್ರಂಥದಲ್ಲಿಯೂ, ಯೇಸು ಹೇಳಿದ ದ್ವಿತೀಯ ದೈವಗ್ರಂಥದಲ್ಲಿಯೂ ಇರುವ ಜ್ಞಾನ ಕೆಲವುಕಡೆ ಒಂದೇ ಹೋಲಿಕೆಯಿಂದ ಕಾಣಿಸುತ್ತಿದೆ. ಅಷ್ಟೇ ಅಲ್ಲದೆ ಕೃಷ್ಣನು ಮರಣಿಸುವಾಗ ತಾನು ಪುನಃ ಸ್ವಲ್ಪ ಕಾಲಕ್ಕೆ ಯೇಸುವಾಗಿ ಬರುತ್ತೇನೆಂದು ಹೇಳಿದಂತೆ **"ಶ್ರೀ ಕೃಷ್ಣನು ದೇವರಾ! ಭಗವಂತನಾ!!"** ಎನ್ನುವ ಗ್ರಂಥದಲ್ಲಿ *'ಶ್ರೀ ಕೃಷ್ಣನ ಮರಣ ಲೋಕಕ್ಕೆ ಕಣ್ತೆರೆಸಿದಂತೆ'* ಎನ್ನುವ ವ್ಯಾಸದಲ್ಲಿ ಶಾಸ್ತ್ರಾಧಾರವಾಗಿ ಆ ದಿನ ನಡೆದ ಸಂಘಟನೆಯನ್ನು ಬರೆದಿಟ್ಟಿದ್ದೇವೆ. ಯಾವುದು ಏನಾದರೂ ಕೃಷ್ಣನು, ಯೇಸು ಇಬ್ಬರೂ ಭಗವಂತರೇಯೆಂದು ನಿಶ್ಚಯವಾಗಿದೆ. (ತೀರ್ಮಾನವಾಗಿದೆ).

ಕೃಷ್ಣನು ಶರೀರ ಧರಿಸಿ ಬಂದಾಗ ಜೀವಾತ್ಮ, ಆತ್ಮ, ಪರಮಾತ್ಮರ ಜ್ಞಾನವನ್ನು ಹೇಳಿದ್ದಾನೆ. ಹಾಗೆಯೇ ಯೇಸು ಭಗವಂತನಾಗಿ ಬಂದಾಗ 'ಕುಮಾರನು, ತಂದೆ, ಪರಿಶುದ್ಧಾತ್ಮ'ಯೆಂದು ಮೂರು ಆತ್ಮಗಳ ಜ್ಞಾನವನ್ನು ಹೇಳಿದ್ದಾನೆ. ಭಗವದ್ಗೀತೆಯಲ್ಲಿರುವ ಮೂಲವಾದ ಬೋಧನೆ ಜೀವಾತ್ಮ, ಆತ್ಮ, ಪರಮಾತ್ಮರ ಸುತ್ತಲೂ ಇದೆ. ಹಾಗೆಯೇ ಇಂಜೀಲು (ಬೈಬಲ್)ನಲ್ಲಿ ಇರುವ ಮೂಲವಾದ ಬೋಧನೆ ಕುಮಾರನು, ತಂದೆ, ಪರಿಶುದ್ಧಾತ್ಮರ ಸುತ್ತಲೂ

ತಿರುಗುತ್ತಿದೆ. ಜ್ಞಾನವೆಲ್ಲವೂ ಮೂವರನ್ನು ಕುರಿತು ಹೇಳಿರುವುದು ಹೊರತು ಬೇರೆಯಿಲ್ಲ. ಮೂರು ದೈವ ಗ್ರಂಥಗಳಲ್ಲಿ ಕೊನೆಗೆ ಮೋಕ್ಷ ಅಥವಾ ಪರಲೋಕ ಎನ್ನುವುದನ್ನು ಕುರಿತು ಹೇಳಿರುವುದೇ ಇದೆ. ಮಾನವರೆಲ್ಲರ ಕೊನೆಯ ಗಮ್ಯ (ಗುರಿ) ಮೋಕ್ಷವೇ ಆಗಿರುವುದರಿಂದ ಎಲ್ಲರಿಗೂ ಮೂರು ದೈವ ಗ್ರಂಥಗಳ ಸಾರಾಂಶ ಅಗತ್ಯ.

**ಪ್ರಶ್ನೆ :– ಭೂಮಿಮೇಲೆ ಭಗವಂತನಾಗಿ ದೇವರೇ ಬಂದಾಗ ದೇವರನ್ನು ಮನುಷ್ಯರು ಅವಮಾನಿಸುತ್ತಾರಾ? ಒಂದುವೇಳೆ ಅವಮಾನಿಸಿದರೂ ದೇವರೇ ಭಗವಂತನಾಗಿ ಇರುವುದರಿಂದ, ಭಗವಂತನು ಮನುಷ್ಯನಾಗಿದ್ದರೂ, ಮನುಷ್ಯನ ಒಳಗಿರುವ ದೇವರು ಅವಮಾನಿಸಿದವರನ್ನು ತಕ್ಷಣ ಶಪಿಸುವುದಾಗಲಿ, ಇನ್ನೂ ಏನಾದರೂ ಅವರು ಅನುಭವಿಸುವಂತೆ ಮಾಡುವುದಾಗಲಿ ಇರುವುದಿಲ್ಲವಾ? ಸಾಧಾರಣ ಮನುಷ್ಯರು ಅವಮಾನಿಸಿದಾಗ ಪ್ರತ್ಯೇಕವಾದ ಮನುಷ್ಯನಾಗಿ ಬಂದಿರುವ ದೇವರು ಏಕೆ ಸುಮ್ಮನಿರಬೇಕು? ಯೇಸುನನ್ನು ಬಹಳಜನ ಅವಮಾನಿಸುವುದೇ ಅಲ್ಲದೆ ಬಾಧಿಸುವುದು, ಕೊನೆಗೆ ಹಿಂಸಿಸಿ ಸಾಯಿಸುವುದು ನಡೆದಿದೆ. ಶ್ರೀಕೃಷ್ಣನಾಗಿ ಬಂದಾಗ ಕೂಡಾ ಅವಮಾನಿಸಲ್ಪಡುವುದೇ ಅಲ್ಲದೆ ಕೊನೆಗೆ ಮಧುರೆಯನ್ನು ಬಿಟ್ಟು ಕಳ್ಳದಾರಿಯಲ್ಲಿ ಉತ್ತರಪ್ರದೇಶ್‌ನಿಂದ ಗುಜರಾತ್‌ಗೆ ಓಡಿಹೋಗುವುದು ನಡೆದಿದೆ. ಗುಜರಾತ್ ರಾಷ್ಟ್ರದಲ್ಲಿ ಸಮುದ್ರ ತೀರದಲ್ಲಿ ದ್ವಾರಕನಗರವನ್ನು ನಿರ್ಮಿಸಿಕೊಳ್ಳುವುದು ನಡೆದಿದೆ. ಇದನ್ನೆಲ್ಲ ನೋಡಿದ ನಂತರ ನೀವು ಹೇಳಿದಂತೆ ಭಗವಂತನ ಶರೀರದಲ್ಲಿ ದೇವರಿದ್ದಾನಾ? ಎಂದು ಅನುಮಾನ ಉಂಟಾಗುತ್ತಿದೆ. ನೀವು ಹೇಳುವುದೆಲ್ಲ ಕೇಳುವುದಕ್ಕೆ ಚೆನ್ನಾಗಿಯೇ ಇದೆ. ಆದರೇ ಯಥಾರ್ಥವಾಗಿ ನಡೆಯುವ ಸಂಘಟನೆ ಗಳನ್ನು ನೋಡಿದ ನಂತರ ನೀವು ಹೇಳುವುದರಲ್ಲಿ ಏನೋ ಲೋಪ ಇರುವಂತೆ ಕಾಣಿಸುತ್ತಿದೆ. ದೇವರಲ್ಲಿ ಪರಮಾತ್ಮನಾದ ದೊಡ್ಡ ದೇವರು ಭಗವಂತನ ಶರೀರದಲ್ಲಿ ಇದ್ದರೆ ಆಪತ್ತು ಬಂದಾಗ ಆತನು ಅಂದುಕೊಂಡರೆ ಏನಾದರೂ ನಡೆಯುತ್ತದೆ ಅಲ್ಲವೆ! ತನ್ನ ದೂತರಿಂದ ಪ್ರಳಯವನ್ನೇ ಸೃಷ್ಟಿಸುವ ಸಾಮರ್ಥ್ಯ ಇರುವ ದೇವರು**

**ತನ್ನನ್ನು ಕಟ್ಟಿಹಾಕಿ, ಮೊಳೆಗಳು ಹೊಡೆದರೆ ಸಹಿಸಿಕೊಳ್ಳಬೇಕಾದ ಅವಶ್ಯಕತೆ ಏನು ಬಂದಿದೆ. ಆತನು ಇನ್ನೂ ಸ್ವಲ್ಪಕಾಲವಿದ್ದು ಪ್ರಜೆಗಳಿಗೆ ಜ್ಞಾನವನ್ನು ಹೇಳಬಹುದು ಅಲ್ಲವೆ! ಮೂರು ವರ್ಷಗಳು ಜ್ಞಾನವನ್ನು ಹೇಳಿದವನು ಅಷ್ಟು ಬೇಗನೆ ಏಕೆ ಮರಣಿಸಬೇಕು? ಇದನ್ನು ನೋಡಿದರೆ ಆತನನ್ನು (ಯೇಸುನನ್ನು) ಶಿಲುಬೆ ಹಾಕಿದಾಗ ಆತನಲ್ಲಿ ದೇವರು ಇಲ್ಲದಂತೆ ಹೋಗಿರುತ್ತಾನೆಂದು ನಾವು ಅಂದುಕೊಳ್ಳುತ್ತಿದ್ದೇವೆ. ಭಗವಂತನ ಶರೀರದಲ್ಲಿ ದೇವರು ಸ್ವಲ್ಪಕಾಲವಿದ್ದು, ಸ್ವಲ್ಪಕಾಲ ಇಲ್ಲದಂತೆ ಹೋಗುತ್ತಾನೆಂದು ನಾವು ಅಂದುಕೊಳ್ಳುತ್ತಿದ್ದೇವೆ. ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ಭಗವಂತನನ್ನು ಕುರಿತು ನಾನು ಹೇಳಿರುವುದಕ್ಕಿಂತ ನೀವು ಪರಿಶೀಲನೆ ಯಾಗಿ ನೋಡಿರುವುದೇ ಹೆಚ್ಚಾಗಿದೆ. ನಿಮ್ಮ ಪ್ರಶ್ನೆಯಲ್ಲಿ ಸತ್ಯವಿದೆಯೆಂದು ಒಪ್ಪಿಕೊಳ್ಳದೆ ತಪ್ಪುವುದಿಲ್ಲ. 'ದೇವರು ಅವಮಾನವನ್ನು ಮನುಷ್ಯರಿಂದ ಪಡೆಯುತ್ತಿದ್ದೇನೆಂದು' ಭಗವದ್ಗೀತೆಯಲ್ಲಿ ರಾಜವಿದ್ಯಾ ರಾಜಗುಹ್ಯವೆಂಬ ಅಧ್ಯಾಯದಲ್ಲಿ 11ನೇ ಶ್ಲೋಕದಲ್ಲಿ ಹೇಳಿದ್ದಾರೆ. **'ಸರ್ವ ಜೀವರಾಶಿಗಳಿಗು ಮಹೇಶ್ವರನಾಗಿ ನನ್ನ ಹಿರಿಮೆಯನ್ನು ತಿಳಿಯದ ಮನುಷ್ಯರು ನನ್ನನ್ನು ಅವಮಾನಿಸುತ್ತಿದ್ದಾರೆಂದು'** ಕೃಷ್ಣನ ರೂಪದಲ್ಲಿ ಹೇಳಿದ್ದಾನೆ. ಹಾಗೆ ಏಕೆ ನಡೆಯುತ್ತಿದೆಯೆಂದು ಯೋಚಿಸಿದರೆ ಆತ್ಮವಾದ ದೇವರು ನನ್ನಲ್ಲಿ ಈ ವಿಧವಾಗಿ ಜ್ಞಾನವನ್ನು ಒದಗಿಸುತ್ತಿದ್ದಾನೆ. ಭಗವಂತನ ಶರೀರದಲ್ಲಿ ಪರಮಾತ್ಮ ಪ್ರವೇಶಿಸಿರುವು ದರಿಂದ ಆತನನ್ನು ದೇವರು ಎನ್ನುವುದರಲ್ಲಿ ಸಂಶಯವಿಲ್ಲ. ಮುಖ್ಯವಾಗಿ ಗಮನಿಸಬೇಕಾಗಿರುವುದು ಏನೆಂದರೇ! ದೇವರು ಮನುಷ್ಯನ ಶರೀರದಲ್ಲಿದ್ದರೂ ಆತನನ್ನು ಯಾರೂ ಗ್ರಹಿಸಬಾರದೆನ್ನುವುದು ದೇವರ ನಿಯಮ.' ಅಷ್ಟೇ ಅಲ್ಲದೆ ಪ್ರಕೃತಿ ನಿಯಮದ ಪ್ರಕಾರ ಒಂದು ಶರೀರ ಕದಲುತ್ತಿದೆಯೆಂದರೇ ಅದರಲ್ಲಿ ಆತ್ಮವಿದ್ದು ಕದಲಿಸುತ್ತಿದೆಯೆಂದು ತಿಳಿಯುತ್ತಿದೆ. ಪರಮಾತ್ಮ ಮೊದಲು ತಾಯಿಗರ್ಭದಲ್ಲಿಯೇ ಶರೀರದಲ್ಲಿ ಇದ್ದಾನೆ. ಪರಮಾತ್ಮ ಧರ್ಮದ ಪ್ರಕಾರ ಯಾವ ಕೆಲಸವನ್ನು ಮಾಡದವನಾಗಿ ಶರೀರದಲ್ಲಿ ಸಾಕ್ಷಿಯಾಗಿದ್ದಾನೆ. ಶರೀರದಲ್ಲಿ

ಒಳಗಿನ ಕೆಲಸ, ಹೊರಗಿನ ಕೆಲಸ ಮಾಡುವುದಕ್ಕೆ ಆತ್ಮ ತಪ್ಪದೆ ಇರಬೇಕು. ಆತ್ಮ ಎಲ್ಲಿರುತ್ತದೊ ಜೋಡಿ ಆತ್ಮವಾಗಿ ಜೀವಿ ಇರಬೇಕು. ಆ ಪದ್ಧತಿ ಪ್ರಕಾರ ದೇವರ ಶರೀರವಾದ ಭಗವಂತನಲ್ಲಿ ಕೂಡಾ ಪರಮಾತ್ಮದೊಂದಿಗೆ ಆತ್ಮ ಜೀವಾತ್ಮ ಇವೆ. ಹಾಗೆ ಮೂರು ಆತ್ಮಗಳಿರುವುದರಿಂದ ಸಾಧಾರಣ ಮನುಷ್ಯನಲ್ಲಿ ಮೂರು ಆತ್ಮಗಳಿರುವಂತೆ ಭಗವಂತನ ಶರೀರದಲ್ಲಿ ಕೂಡಾ ಇದ್ದಾರೆ. ಭಗವಂತನ ಶರೀರದಲ್ಲಿ ಕೂಡಾ ಆತ್ಮದ ಕೆಲಸ ಆತ್ಮ, ಜೀವಾತ್ಮದ ಕೆಲಸ ಜೀವಾತ್ಮ ಮಾಡುತ್ತಿದ್ದಾರೆ.

ಭಗವಂತನ ಶರೀರದಲ್ಲಿ ಮೊದಲು ಪ್ರವೇಶಿಸಿರುವುದು ಪರಮಾತ್ಮ ಅಲ್ಲವೆ! ಹಾಗಿರುವಾಗ ಭಗವಂತನೊಳಗೆ ಆತ್ಮ, ಜೀವಾತ್ಮ ಎಲ್ಲಿಂದ ಬಂದಿದ್ದಾರೆ? ಯಾವುದೋ ಒಂದು ಶರೀರದಲ್ಲಿ ಮರಣಿಸಿದ ಆತ್ಮ, ಜೀವಾತ್ಮಗಳೆನ್ನುವ ಜೋಡಿ ಆತ್ಮಗಳು ಬಂದು ಸೇರಿರಬಹುದು ಅಲ್ಲವೆ! ಎನ್ನುವ ಪ್ರಶ್ನೆ ಬರಬಹುದು? ಅದಕ್ಕೆ ವಾಸ್ತವವಾದ ಉತ್ತರವನ್ನು ನೋಡಿದರೆ ಇತರ ಜೀವಿಯು, ಆತ್ಮ ಬಂದು ಸೇರಿದರೆ ಅದು ಮನುಷ್ಯನ ಜನ್ಮ ಆಗುತ್ತದೆ ಹೊರತು, ಪರಮಾತ್ಮ ಜನ್ಮ ಅಲ್ಲ. ಅಂದರೇ ಭಗವಂತನ ಜನ್ಮ ಅಲ್ಲವೆಂದು ಹೇಳಬಹುದು. ಹಾಗಿರುವಾಗ ಪರಮಾತ್ಮನೇ ತನ್ನಿಂದ ಆತ್ಮವನ್ನು, ಜೀವಾತ್ಮವನ್ನು ಸೃಷ್ಠಿ ಆದಿಯಲ್ಲಿ ಬೇರ್ಪಡಿಸಿದಂತೆ ಬೇರ್ಪಡಿಸಿ, ಭಗವಂತನ ಶರೀರದಲ್ಲಿ ತನ್ನೊಂದಿಗೆ ಇಟ್ಟುಕೊಂಡಿದ್ದಾನೆ. ಆಗ ಬೇರೆ ಶರೀರವನ್ನು ಬಿಟ್ಟು ಬಂದ ಆತ್ಮ, ಜೀವಾತ್ಮವಲ್ಲದೆ ಭಗವಂತನ ಶರೀರದಲ್ಲಿ ಪ್ರತ್ಯೇಕವಾದ ಆತ್ಮ, ಪ್ರತ್ಯೇಕವಾದ ಜೀವಾತ್ಮ ಇರುವುದು ನಡೆಯುತ್ತಿದೆ. ಜೀವಾತ್ಮ ಯಾವಾಗಿದೆಯೋ ಆಗ ಜೀವಾತ್ಮದೊಂದಿಗೆ 24 ಪ್ರಕೃತಿಗೆ ಸಂಬಂಧಿಸಿದ ಶರೀರ ಭಾಗಗಳಿವೆ. ಆದ್ದರಿಂದ ಭಗವಂತನು ಸಾಧಾರಣ ಮನುಷ್ಯನಂತೆ ಕಾಣಿಸುತ್ತಾನೆ. ಯಾವಕಡೆ ನೋಡಿದರೂ ಆತನಲ್ಲಿ ಆತನನ್ನು ಗುರುತಿಸುವುದಕ್ಕೆ ತಕ್ಕ ಯಾವ ಪ್ರತ್ಯೇಕತೆ ಕಾಣಿಸುವುದಿಲ್ಲ. ಸಾಧಾರಣ ಜೀವಿಯು ಜೀವಿಸುವಂತೆ ಕಾಣಿಸುವ ಭಗವಂತನ ಶರೀರದಲ್ಲಿ ಜೀವಿಗೆ ಅನುಬಂಧವಾದ ಮುಖ್ಯವಾದ ಕರ್ಮ ಇರಬೇಕು. ಕರ್ಮ ಇರುವಾಗಲೇ ಆತ್ಮ ಮನುಷ್ಯನನ್ನು

ಕಷ್ಟ ಸುಖಗಳನ್ನು ಅನುಭವಿಸುವಂತೆ ಮಾಡುತ್ತಿರುತ್ತಾನೆ. ಆತ್ಮ ಕರ್ಮಪ್ರಕಾರ ಪ್ರವರ್ತಿಸುವುದಕ್ಕೆ ಭಗವಂತನ ಶರೀರದಲ್ಲಿ ಕರ್ಮವಿಲ್ಲ ಅಲ್ಲವೆ! ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ ಏನೆಂದರೇ!

ಪರಮಾತ್ಮ ಪ್ರತ್ಯೇಕವಾದ ಮನುಷ್ಯನಾಗಿ ಭಗವಂತನನ್ನು ಸೃಷ್ಠಿಸಬೇಕೆಂದು ಕೊಂಡಾಗಲೇ ಒಂದು ಸೂತ್ರವನ್ನು ತಯಾರು ಮಾಡಿಕೊಂಡು, ಅದಕ್ಕೆ ಸರಿಹೋಗುವಂತೆ ಕರ್ಮವನ್ನು ಕೂಡಾ ಸೃಷ್ಠಿಸಿ, ಭಗವಂತನ ಶರೀರದಲ್ಲಿ ಇಡುವುದರಿಂದ ಭಗವಂತನಿಗೆ ಕರ್ಮವನ್ನು ಅನುಸರಿಸಿ ಕಷ್ಟಸುಖಗಳು, ಲಾಭನಷ್ಟಗಳು, ಗೌರವ, ಅವಮಾನಗಳು ಸಂಭವಿಸುತ್ತಿರುತ್ತವೆ. ಕೃಷ್ಣನಾಗಿ ಬಂದಾಗ ಆಗ ಕರ್ಮವನ್ನು ಅನುಸರಿಸಿ ಆತನಿಗೆ ನಡೆದಿರುತ್ತದೆ. ಯೇಸುವಾಗಿ ಬಂದಾಗ ಆತನ ಶರೀರದಲ್ಲಿ ನಿರ್ಮಿಸಿದ ಕರ್ಮವನ್ನನುಸರಿಸಿ ಆತನಿಗೆ ನಡೆದಿದೆ. ಭಗವಂತನು ಯಾವಾಗ ಬಂದರೂ ಒಬ್ಬನಾಗಿಯೇ ಇರುತ್ತಾನೆ. ಆಗ ಒಬ್ಬರು ಈಗ ಒಬ್ಬರು ಇರುವುದಿಲ್ಲ. ಪರಮಾತ್ಮ ಭಗವಂತನಾಗಿ ಎಷ್ಟೋಸಲ ಬಂದಿದ್ದಾನೆ. ಯಾವಾಗ ಬಂದಿರುವುದು, ಹೇಗೆ ಬಂದಿರುವುದು, ಯಾವ ಹೆಸರಿನಿಂದ ಬಂದಿರುವುದು ನಮಗೆ ತಿಳಿದಿಲ್ಲ. ಆದರೆ ಭಗವಂತನಿಗೆ ಎಲ್ಲಾ ಜನ್ಮಗಳ ಜ್ಞಾಪಕ ಇರುತ್ತದೆ. ದ್ವಾಪರ ಯುಗದಲ್ಲಿ ಕೃಷ್ಣನಿಗಿಂತ ಮೊದಲು ಎಷ್ಟೋ ಭಗವಂತನ ಜನ್ಮಗಳು ಉಂಟಾಗಿವೆ. ಎಲ್ಲಾ ಜನ್ಮಗಳು ಭಗವಂತನಿಗೆ ಜ್ಞಾಪಕವಿರುತ್ತವೆ. ಏಕೆಂದರೆ! ಭಗವಂತನ ಶರೀರದಲ್ಲಿ ಒಂದುಸಲ ತಯಾರು ಮಾಡಿಟ್ಟಿರುವ ಜೀವಿ, ಆತ್ಮದಿಂದ ಹಿಡಿದು ಅಂತರಂಗಗಳಾದ ಮನಸ್ಸು, ಬುದ್ಧಿ, ಚಿತ್ತ ಎಲ್ಲಾ ಹಾಗೇ ಇದ್ದು ಭಗವಂತನು ಎಷ್ಟುಸಲ ಭೂಮಿಮೇಲಕ್ಕೆ ಬಂದರೂ ಅದೇ ಜೀವಿ, ಅದೇ ಆತ್ಮ, ಅದೇ ಮನಸ್ಸು ಇರುತ್ತದೆ. ಎಲ್ಲಾ ಭಗವಂತನ ಜನ್ಮಗಳಲ್ಲಿಯೂ ಒಂದೇ ಮನಸ್ಸು ಇರುವುದರಿಂದ ಭಗವಂತನಿಗೆ ಕಳೆದುಹೋದ ಜನ್ಮಗಳೆಲ್ಲ ಜ್ಞಾಪಕವಿರುತ್ತವೆ. ಆದ್ದರಿಂದ ಭಗವದ್ಗೀತೆಯನ್ನು ಅರ್ಜುನನಿಗೆ ಬೋಧಿಸಿದಾಗ ನನಗೆ ಎಷ್ಟೋ ಜನ್ಮಗಳು ಉಂಟಾಗಿವೆ, ನೀನಗೂ ಎಷ್ಟೋ ಜನ್ಮಗಳು ಉಂಟಾಗಿವೆಯೆಂದು ಹೇಳಿದ್ದಾನೆ.

ಈ ವಿಷಯವು ಭಗವದ್ಗೀತೆ ಜ್ಞಾನಯೋಗವೆಂಬ ಅಧ್ಯಾಯದಲ್ಲಿ ಐದನೆ ಶ್ಲೋಕದಲ್ಲಿದೆ ನೋಡಿರಿ.

*5ನೇ ಶ್ಲೋ॥ ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ।*
*ತಾನ್ಯಹಂ ವೇದ ಸರ್ವಾಣಿ ನತ್ವಂ ವೇತ್ಥ ಪರಂತಪ! ॥*

**ಭಾವಾರ್ಥ :–** ಓ ಅರ್ಜುನಾ! ನನಗೆ ಎಷ್ಟೋ ಜನ್ಮಗಳು ಉಂಟಾಗಿವೆ, ಹಾಗೆಯೇ ನಿನಗೂ ಎಷ್ಟೋ ಜನ್ಮಗಳು ಉಂಟಾಗಿವೆ. ನಾನು ಹೊಂದಿದ ಜನ್ಮಗಳೆಲ್ಲ ನನಗೆ ಜ್ಞಾಪಕ ಇವೆ. ನನಗೆ ಉಂಟಾದ ಜನ್ಮಗಳೆಲ್ಲ ಮುಂದಿನ ಹಿಂದಿನ ವರಸೆಕ್ರಮ ಕೂಡಾ ನನಗೆ ತಿಳಿದಿದೆ. ಆದರೆ ನೀನು ಹೊಂದಿದ ಜನ್ಮಗಳು ಒಂದು ಕೂಡಾ ನಿನಗೆ ಜ್ಞಾಪಕವಿಲ್ಲ.

ಈ ಶ್ಲೋಕದಲ್ಲಿ ದೇವರಾದ ಪರಮಾತ್ಮ ಮನುಷ್ಯನ ರೂಪವಾದ ಭಗವಂತನಾಗಿ ಜನ್ಮಿಸಿದಾಗ ಆತನು ಯಾವಾಗ ಯಾವ ಜನ್ಮ ಎತ್ತಿರುವುದು ಎಲ್ಲಾ ಆತನಿಗೆ ತಿಳಿದಿದೆ. ಏಕೆಂದರೇ! ಆತನಿಗೆ ಉಂಟಾದ ಭಗವಂತನ ಜನ್ಮಗಳೆಲ್ಲವುಗಳಲ್ಲಿಯೂ ಒಂದೇ ಮನಸ್ಸು ಇರುವುದರಿಂದ, ಮನಸ್ಸು ಮನನ ಮಾಡುವುದು ಆಗುವುದರಿಂದ, ಎಲ್ಲಾ ಜ್ಞಾಪಕಗಳು ಮನಸ್ಸಿಗೆ ಇರುವುದರಿಂದ, ಯಾವ ಯುಗದಲ್ಲಿ ಎಲ್ಲಿ ಯಾವ ಜನ್ಮವನ್ನು ಎತ್ತಿರುವುದು ಭಗವಂತನಾಗಿ ಬಂದಿರುವ ಶ್ರೀಕೃಷ್ಣನಿಗೆ ಜ್ಞಾಪಕ ಇರುವುದರಿಂದ ಅರ್ಜುನನೊಂದಿಗೆ ನನ್ನ ಜನ್ಮಗಳೆಲ್ಲ ನನಗೆ ಜ್ಞಾಪಕ ಇವೆ, ನೀನು ಎಷ್ಟೋ ಜನ್ಮಗಳು ಎತ್ತಿದರೂ ಒಂದು ಕೂಡಾ ಜ್ಞಾಪಕವಿಲ್ಲ ಎಂದಿದ್ದಾನೆ. ಸಾಧಾರಣ ಮನುಷ್ಯನಿಗೆ ಒಂದು ಜನ್ಮದಲ್ಲಿರುವ ಮನಸ್ಸು ಎರಡನೆ ಜನ್ಮಕ್ಕೆ ಬರುವುದಿಲ್ಲ. ಯಾವ ಜನ್ಮದಲ್ಲಿನ ಮನಸ್ಸು ಆ ಜನ್ಮದಲ್ಲಿಯೇ ನಶಿಸುತ್ತಿದೆ, ಆದ್ದರಿಂದ ಒಂದು ಜನ್ಮದಲ್ಲಿನ ಜ್ಞಾಪಕಗಳು ನಂತರ ಜನ್ಮಕ್ಕೆ ತಿಳಿಯುವುದಿಲ್ಲ. ನಂತರ ಜನ್ಮದಲ್ಲಿ ಹೊಸ ಮನಸ್ಸು ಬಂದಿರುತ್ತದೆ. ಹೀಗೆ ಯಾವ ಜನ್ಮದ್ದು ಆ ಜನ್ಮಕ್ಕೆ ಇರುವುದರಿಂದ ಮನುಷ್ಯನಿಗೆ ಹಿಂದಿನ ಜನ್ಮಗಳ ಜ್ಞಾಪಕ ಇರುವುದಿಲ್ಲ. ಆದ್ದರಿಂದ ನನ್ನ

ಜನ್ಮಗಳು ವರಸೆಯಾಗಿ ನನಗೆ ಜ್ಞಾಪಕ ಇವೆ. ನಿನಗೆ ಹಿಂದಿನ ಜನ್ಮ ಜ್ಞಾಪಕ ಕೂಡಾ ಇಲ್ಲವೆಂದು ಹೇಳಿದ್ದಾನೆ.

ಮೂರನೆ ಪುರುಷನಾದ ಪರಮಾತ್ಮ ಪ್ರತಿ ಯುಗದಲ್ಲಿಯೂ ಧರ್ಮ ಸಂಸ್ಥಾಪನೆಗೆ ಬರುತ್ತೇನೆಂದು ಪ್ರಥಮ ದೈವ ಗ್ರಂಥದಲ್ಲಿ ಜ್ಞಾನಯೋಗದಲ್ಲಿ ಹೇಳಿದ್ದಾನೆ. ಇದನ್ನನುಸರಿಸಿ ಆತನು ಕೃತಯುಗ, ತ್ರೇತಾಯುಗದಲ್ಲಿ ಕೂಡಾ ಬಂದಿರುತ್ತಾನೆ. ಯಾವಾಗ ಬಂದರೂ ಭಗವಂತನನ್ನು ಯಾರೂ ಗುರುತಿಸುವುದಕ್ಕೆ ಸಾಧ್ಯವಿರುವುದಿಲ್ಲ. ಏಕೆಂದರೇ! ಭಗವಂತನು ಸಾಧಾರಣ ಮನುಷ್ಯನಾಗಿರುತ್ತಾ, ಸಾಧಾರಣ ಮನುಷ್ಯ ಬಾಧೆಗಳು, ಕಷ್ಟಗಳು, ಅನುಭವಿಸುವಂತೆ ಅನುಭವಿಸುವುದರಿಂದ ಯಾರೂ ಗುರುತಿಸಲಾರರು. ಪ್ರತಿ ಜನ್ಮ ಬೇರೆಬೇರೆ ಕರ್ಮಗಳಿಂದ ಒಂದು ಜನ್ಮಕ್ಕು ಮತ್ತೊಂದು ಜನ್ಮಕ್ಕು ಹೋಲಿಕೆ ಇಲ್ಲದೆ ಕರ್ಮ ಇರುವುದರಿಂದ ಆತನ ಹಿಂದಿನ ಜನ್ಮಗಳಿಗು, ಮುಂದಿನ ಜನ್ಮಗಳಿಗು ಯಾವುದೇ ಹೋಲಿಕೆ ಇಲ್ಲದಿರುವುದರಿಂದ ಆತನನ್ನು ಈ ಜನ್ಮದಲ್ಲಿ ಇದ್ದಾನೆಂದು ಹೇಳುವುದಕ್ಕೆ ಸಾಧ್ಯಪಡುವುದಿಲ್ಲ. ಪ್ರಪಂಚ ಸಂಬಂಧವಾಗಿ ಭಗವಂತನನ್ನು ಕಂಡುಹಿಡಿಯುವುದು ದುಸ್ಸಾಧ್ಯ. ಆದರೆ ಭಗವಂತನನ್ನು ಗುರುತಿಸುವುದಕ್ಕೆ ಒಂದೇ ಒಂದು ಅವಕಾಶವಿದೆ. ಅದು ಏನೆಂದರೆ! ಭಗವಂತನು ಭೂಮಿಮೇಲೆ ಬರುವುದಕ್ಕೆ ಮುಖ್ಯ ಕಾರಣ **'ಅಡಗಿಹೋದ ಧರ್ಮಗಳನ್ನು ಪುನಃ ನೆಲೆಗೊಳಿಸುವುದಕ್ಕೆ'** ಎಂದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಎಲ್ಲಿಯಾದರೆ ದೈವ ಧರ್ಮಗಳು ಬೋಧಿಸಲ್ಪಡುತ್ತಿವೆಯೋ, ಎಲ್ಲಿಯಾದರೆ ಮನುಷ್ಯನಿಗೆ ತಿಳಿಯದ ಜ್ಞಾನ ರಹಸ್ಯಗಳು ತಿಳಿಯುತ್ತಿವೆಯೋ ಯಾವ ಶರೀರದಿಂದ ಯಾರಿಗೂ ಅರ್ಥವಾಗದ, ಸಂಚಲನವಾದ ಜ್ಞಾನ ಬೋಧಿಸಲ್ಪಡುತ್ತಿದೆಯೋ ಆ ಶರೀರವನ್ನು ಧರಿಸಿದವನೇ ಭಗವಂತನು ಎಂದು ತಿಳಿಯಬಹುದು.

ಭಗವಂತನಾಗಿರುವ ದೇವರು ಪ್ರಪಂಚ ಸಂಬಂಧವಾಗಿ ಆತನೇ ಕಲ್ಪಿಸಿಕೊಂಡು, ಏರ್ಪಡಿಸಿಕೊಂಡು ಬಂದಿರುವ ಕರ್ಮಪ್ರಕಾರ ಹೇಗಾದರೂ

ಪ್ರವರ್ತಿಸುತ್ತಿರಬಹುದು. ಎಷ್ಟು ಕಷ್ಟಗಳಾದರೂ ಅನುಭವಿಸುತ್ತಿರಬಹುದು, ಹಾಗೆಯೇ ಎಷ್ಟು ಭೋಗಭಾಗ್ಯಗಳಾದರೂ ಅನುಭವಿಸುತ್ತಿರಬಹುದು. ದೇವರಾದ ಭಗವಂತನು ತನ್ನನ್ನು ಪ್ರಜೆಗಳು ಗುರುತಿಸದಂತೆ, ತನ್ನ ಕರ್ಮವನ್ನು ಸಿದ್ಧಪಡಿಸಿಕೊಂಡು ಬಂದಿರುತ್ತಾನೆ. ಆದ್ದರಿಂದ ಆತನು ಪ್ರಪಂಚ ಸಂಬಂಧವಾಗಿ ಕೆಟ್ಟವನಾಗಿ ಆದರೂ ಕಾಣಿಸುತ್ತಾನೆ ಅಥವಾ ಒಳ್ಳೆಯವನಾಗಿ ಆದರೂ ಕಾಣಿಸುತ್ತಾನೆ. ಪೂರ್ತಿ ಅಜ್ಞಾನಿಯಾಗಿ ಪ್ರವರ್ತಿಸುತ್ತಿರಬಹುದು. ಹಂತಕನಾಗಿ ಕಾಣಿಸಬಹುದು. ಕರ್ಮ ಎಷ್ಟು ವಿಧಗಳಿದ್ದರೆ ಅಷ್ಟು ವಿಧಗಳಾಗಿ ಕೆಟ್ಟವನಾಗಿಯೇ ಕಾಣಿಸುತ್ತಾನೆ. ಹಾಗೆ ಕೆಟ್ಟದಾಗಿ ಪ್ರಚಾರವಾದವನು ಎಷ್ಟು ಜ್ಞಾನಬೋಧನೆಯನ್ನು ಹೇಳಿದರೂ ಆತನನ್ನು ಜ್ಞಾನಿಯೆಂದು ಕೂಡಾ ಯಾರೂ ಅಂದುಕೊಳ್ಳುವುದಿಲ್ಲ. ಭಗವಂತನನ್ನು ಜ್ಞಾನಿ ಅಂದುಕೊಳ್ಳದೆ ಇರುವುದಕ್ಕೆ ಆತನು ಮಾಡಿದ ಪ್ರಪಂಚ ಕಾರ್ಯಗಳೇ ಕಾರಣ. ಭಗವಂತನು ಸ್ವಲ್ಪ ಕೆಟ್ಟದ್ದು ಮಾಡಿದರೂ, ಕೆಟ್ಟದಾಗಿ ಕಾಣಿಸಿದರೂ ಆತನನ್ನು ಪೂರ್ತಿ ಕೆಟ್ಟವನಾಗಿ ಪ್ರಜೆಗಳು ಪ್ರಚಾರ ಮಾಡುವುದರಿಂದ ಭಗವಂತನು ಅಜ್ಞಾನಿಯಾಗಿ, ದುರ್ಮಾರ್ಗನಾಗಿ ಗುರುತು ಹೊಂದಿರುತ್ತಾನೆ. ಹಾಗೆ ಪ್ರಚಾರವಾದವನನ್ನು ಯಾರೂ ಭಗವಂತನಾಗಿ ಗುರುತಿಸಲಾರರು. ಉದಾಹರಣೆಗೆ ಕಲಿಯುಗದಲ್ಲಿ ಬಂದಿರುವ ಯೇಸುನನ್ನು ತೆಗೆದುಕೊಂಡು ನೋಡಿದರೆ ಆತನು ಯಾರಿಗೂ ಯಾವ ಕೆಟ್ಟದ್ದು ಮಾಡದಿದ್ದರೂ ಆತನನ್ನು ಕೆಟ್ಟವನಾಗಿ ಲೆಕ್ಕಿಸಿ ಶಿಲುಬೆ ಹಾಕಿಸಿ ಸಾಯಿಸಿದ್ದಾರೆ. ಕೆಟ್ಟದು ಮಾಡದಿದ್ದರೂ ಕೆಟ್ಟವನಾಗಿ ಪ್ರಚಾರಮಾಡುವ ಪ್ರಜೆಗಳು ಅದೇ ಕೆಲಸವಾಗಿ ಸ್ವಲ್ಪ ಕೆಟ್ಟದು ಮಾಡಿದರೆ ಆತನನ್ನು ಪೂರ್ತಿ ಕೆಟ್ಟವನಾಗಿ ಪ್ರಚಾರ ಮಾಡುತ್ತಾರೆ ಹೊರತು ಆತನಲ್ಲಿನ ಜ್ಞಾನವನ್ನು ಗುರುತಿಸುವುದಿಲ್ಲ. ಜ್ಞಾನವನ್ನು ಗುರುತಿಸದಿರುವಾಗ ಭಗವಂತನನ್ನು ಯಾರೂ ಕಂಡುಹಿಡಿಯಲಾರರು. ಆದ್ದರಿಂದ 'ಭಗವಂತನು ಭೂಮಿಮೇಲೆ ಬಂದರೆ ಆತನನ್ನು ಕಂಡುಹಿಡಿಯುವುದು ದುಸ್ಸಾಧ್ಯವೆಂದು' ಹೇಳಿದ್ದೇವೆ. ತ್ರೇತಾಯುಗದಲ್ಲಿ ರಾವಣಬ್ರಹ್ಮ ಇದ್ದನೆಂದು ಆತನು ಸೀತಾದೇವಿಯನ್ನು ಕಳ್ಳನಂತೆ ಎತ್ತಿಕೊಂಡು ಹೋಗಿ ತನ್ನ ರಾಜ್ಯದಲ್ಲಿ

ಇಟ್ಟುಕೊಂಡಿದ್ದಾನೆಂದು ಪ್ರಚಾರವಾಗಿದೆ. ಆಗ ಆತನನ್ನು ಕುರಿತು ಏಕೆ ಸೀತೆಯನ್ನು ತೆಗೆದುಕೊಂಡು ಹೋಗಿದ್ದಾನೆಂದು ಸ್ವಲ್ಪವೂ ಕೂಡಾ ಯಾರೂ ಆಲೋಚಿಸದೆ ಅಪವಾದವನ್ನು ಆತನಿಗೆ ಹೊರಿಸಿ ರಾವಣಬ್ರಹ್ಮ ಎಂದರೇ ದುರ್ಮಾರ್ಗನು ಎಂದು ಎಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಆದರೆ ಈ ದಿನ ರಾವಣಬ್ರಹ್ಮ 'ಭಗವಂತನು' ಎಂದು ನಾವು ಹೇಳಿದರೆ ಯಾರೂ ನಂಬದೇ ಹೋಗಿ ನನ್ನನ್ನು ಕೂಡಾ ಕೆಟ್ಟವನಾಗಿ ಲೆಕ್ಕಿಸುತ್ತಾರೆ. ಅಂತಹ ಮನಸ್ತತ್ವವಿರುವ ಪ್ರಜೆಗಳ ಹತ್ತಿರಕ್ಕೆ ನಿಜವಾಗಲೂ ಭಗವಂತನು ಬಂದು ನಾನೇ ಭಗವಂತನು ಎಂದು ಹೇಳಿದರೂ! ಯಾರೂ ನಂಬುವುದಿಲ್ಲ. ಅಷ್ಟಾಗಿ ಯಾರಿಗೂ ತಿಳಿಯದಂತೆ, ಯಾರಿಗೂ ಗುರುತು ಸಿಗದಂತೆ ಬಂದಿರುವ ಭಗವಂತನನ್ನು ತಿಳಿಯುವುದು ಸಾಧ್ಯವಾಗುವ ಕೆಲಸವಲ್ಲ. ಒಂದುವೇಳೆ ಯಾರಾದರೂ ಪ್ರಪಂಚ ವಿಷಯಗಳೆಲ್ಲ ಪಕ್ಕಕ್ಕಿಟ್ಟು ಜ್ಞಾನವನ್ನು ಬೋಧಿಸುವ, ಧರ್ಮಗಳನ್ನು ಸ್ಥಾಪಿಸುವ ವ್ಯಕ್ತಿಯನ್ನು ಭಗವಂತನೆಂದು ಗುರುತಿಸಿದರೆ, ಆತನು ಯಾವ ಯೋಗ ಮಾಡದಿದ್ದರೂ ಆತನ ಪಾಪವೆಲ್ಲವೂ (ಕರ್ಮವೆಲ್ಲವೂ) ಕ್ಷಮಿಸಲ್ಪಟ್ಟು ಮೋಕ್ಷ ಹೊಂದುತ್ತಾನೆ. ಈ ವಿಷಯವನ್ನು ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ಜ್ಞಾನಯೋಗವೆಂಬ ಅಧ್ಯಾಯದಲ್ಲಿ ಒಂಭತ್ತನೇ ಶ್ಲೋಕದಲ್ಲಿ ಹೇಳಿದ್ದಾರೆ.

***9ನೇ ಶ್ಲೋ॥ ಜನ್ಮ ಕರ್ಮಚ ಮೇ ದಿವ್ಯ ಮೇವಂ ಯೊ ವೇತ್ತಿ ತತ್ತ್ವತಃ ।***
***ತ್ಯಕ್ತ್ವಾ ದೇಹಂ ಪುನರ್ಜನ್ಮನೈತಿ ಮಾಮೇತಿ ಸೋಽರ್ಜುನ! ॥***

**ಭಾವಾರ್ಥ :–** ಮನುಷ್ಯ ಯಾರಾದರೂ ನನ್ನ ಕರ್ಮಗಳನ್ನು, ಜನ್ಮವನ್ನು ಗ್ರಹಿಸಿದ ವ್ಯಕ್ತಿ ಮರಣಿಸಿದ ನಂತರ ಬೇರೆ ಜನ್ಮಕ್ಕೆ ಹೋಗುವುದಿಲ್ಲ. ಆತನು ದೇವರಾದ ಭಗವಂತನನ್ನು ಗುರುತಿಸುವುದರಿಂದ ಮೋಕ್ಷವನ್ನು ಹೊಂದುತ್ತಾನೆ.

ಈ ಶ್ಲೋಕದಲ್ಲಿನ ಭಾವವನ್ನು ನೋಡಿದರೆ ಮೋಕ್ಷವನ್ನು ಸುಲಭವಾಗಿ ಪಡೆಯಬಹುದೆಂಬ ಆಸೆ ಯಾರಿಗಾದರೂ ಉಂಟಾಗಬಹುದು. ಹಾಗೆಯೇ

ಭಗವಂತನನ್ನು ಯಾರಾದರೂ ಗುರುತಿಸಿದ್ದಾರಾ ಎಂದರೆ ಮೂರು ಯುಗಗಳ ಕಾಲದಲ್ಲಿ ಒಬ್ಬನೇ ಒಬ್ಬ ಭೀಷ್ಮನು ಹೊರತು ಯಾರೂ ಈತನೇ ಭಗವಂತನೆಂದು ಗುರುತಿಸಲಿಲ್ಲ. ಬಹಳಜನರಿಗೆ ಇಂದಿಗೂ ದೇವರಿಗು, ಭಗವಂತನಿಗು ವ್ಯತ್ಯಾಸ ತಿಳಿಯದವರು ಇದ್ದಾರೆ. 'ನಿರಾಕಾರನು ದೇವರೆಂದು, ಭಗವಂತನು ಸಾಕಾರ ನೆಂದು' ತಿಳಿಯದ ಬೋಧಕರು ಕೂಡಾ ಇದ್ದಾರೆ. ಈ ದಿನಗಳಲ್ಲಿ ಎಷ್ಟೋಜನ ಸ್ವಾಮಿಜೀಗಳು ದೇವರೆಂದು ಹೇಳುವ ಕಡೆ ಭಗವಂತನೆಂದು, ಭಗವಂತನೆಂದು ಹೇಳುವಕಡೆ ದೇವರೆಂದು ಹೇಳುತ್ತಿದ್ದಾರೆ. ದೇವರು ಭಗವಂತನಾಗಿ ಬಂದರೆ, ಭಗವಂತನನ್ನು ಯಾರೂ ಗುರುತಿಸದಂತಿರುವುದಕ್ಕೆ ಮನುಷ್ಯನಂತೆ ಕಷ್ಟಗಳು, ಮನುಷ್ಯನಂತೆ ಅವಮಾನಗಳು ಹೊಂದುತ್ತಿರುವುದರಿಂದ, ಆತನನ್ನು ನೋಡಿದವರು ಯಾರೂ ಈತನೇ ಭಗವಂತನೆಂದು ಗುರುತಿಸಲಾರರು. ಗುರುತಿಸುವುದಕ್ಕೆ ದುಸ್ಸಾಧ್ಯವಾದ ಭಗವಂತನನ್ನು ಗುರುತಿಸಿ, ಆತನು ಮಾಡುವ ಕೆಲಸಗಳನ್ನು ತಿಳಿದಾಗ ಅಂತಹವನಿಗೆ ತಕ್ಷಣ ಕರ್ಮ ಸುಟ್ಟುಹೋಗಿ ಮೋಕ್ಷ ಲಭಿಸುತ್ತದೆ. ಉದಾಹರಣೆಗೆ ಭೀಷ್ಮನು ಯಾವ ಜ್ಞಾನವನ್ನು ತಿಳಿಯಲಿಲ್ಲ, ಯಾವ ಯೋಗವನ್ನು ಮಾಡಲಿಲ್ಲ. ಆದರೂ ಶ್ರೀಕೃಷ್ಣನು ಭಗವಂತನೆಂದು ತಿಳಿದಿದ್ದರಿಂದ ಆತನಿಗೆ ಮೋಕ್ಷ ಲಭಿಸಿದೆ. ಭಗವಂತನು ಬಂದು ಹೋದ ನಂತರ ಕಂಡುಹಿಡಿದರೂ ಏನೂ ಪ್ರಯೋಜನೆಯಿಲ್ಲ. ಭಗವಂತನಿರುವ ಪ್ರಸ್ತುತ ಕಾಲದಲ್ಲಿ ಭಗವಂತನನ್ನು ತಿಳಿದವರಿಗೇ ಮೋಕ್ಷ ಹೊಂದುವ ಅವಕಾಶವಿದೆ. ಶ್ರೀಕೃಷ್ಣನಿದ್ದಾಗ ಜೀವಿಸಿರುವ ಭೀಷ್ಮನು ಆತನನ್ನು ತಿಳಿದುಕೊಂಡು ಸುಲಭವಾಗಿ ಮೋಕ್ಷವನ್ನು ಹೊಂದಿದ್ದಾನೆ. ಕೃಷ್ಣನ ನಂತರ ಭಗವಂತನಾಗಿ ಯೇಸು ಬರುವುದು ನಡೆದಿದೆ. ಕೃಷ್ಣನ ಜನ್ಮ ಧನಿಕನಾಗಿ ಇತ್ತು. ಎರಡನೇ ಸಲ ಕಲಿಯುಗದಲ್ಲಿ ಬಂದಿರುವ ಯೇಸು ಜನ್ಮ ಬಹಳ ಬಡತನದಿಂದ ಕೂಡಿತ್ತು. ಆತನು ಧರಿಸುವ ಅಂಗಿ ಕೂಡಾ ಎರಡನೆಯದು ಇಲ್ಲದ ಬಡವನಾಗಿ ಆತನು ಜೀವಿಸಿದ್ದಾನೆ. ಕೃಷ್ಣನು 126 ವರ್ಷಗಳು ಬದುಕಿದರೆ, ಯೇಸು ಕೇವಲ 33 ವರ್ಷಗಳೇ ಬದುಕಿದ್ದಾನೆ.

ಯೇಸು ತನ್ನ ಜೀವನದಲ್ಲಿ ಅನೇಕ ಕಷ್ಟಗಳು, ಅವಮಾನಗಳು ಅನುಭವಿಸಿದ್ದಾನೆ. ಆತನು ಸಾಧಾರಣ ಮನುಷ್ಯನಿಗಿಂತಲು ಹೆಚ್ಚಿನ ಕಷ್ಟಗಳನ್ನು, ಹಾಗೆಯೇ ಹೆಚ್ಚಾಗಿ ಅವಮಾನಗಳನ್ನು ಹೊಂದುವುದು ನೋಡಿ ಆತನನ್ನು ಮನುಷ್ಯನಿಗಿಂತ ಹೀನವಾಗಿ ನೋಡಿದ್ದಾರೆ ಹೊರತು ಭಗವಂತನಾಗಿ ಯಾರೂ ಗುರುತಿಸಲಿಲ್ಲ. ಯೇಸು ಸಜೀವವಾಗಿರುವ ದಿನಗಳಲ್ಲಿ 30 ವರ್ಷಗಳವರೆಗು ಜ್ಞಾನವನ್ನು ಬೋಧಿಸಲಿಲ್ಲ. ಕೊನೆಯಲ್ಲಿ ಮೂರು ವರ್ಷಗಳು ದೈವಜ್ಞಾನವನ್ನು ಬೋಧಿಸಿದ್ದಾನೆ. ಆ ಮೂರು ವರ್ಷಗಳಲ್ಲಿ ಆತನು ಹೇಳುವ ಬೋಧನೆಯನ್ನು ಅನುಸರಿಸಿ ಆತನನ್ನು ಭಗವಂತನಾಗಿ ಗುರುತಿಸುವ ಅವಕಾಶವಿದ್ದರೂ ಯಾರೂ ಗುರುತಿಸಲಾರದೆ ಹೋಗಿದ್ದಾರೆ. ಹತ್ತಿರವಾಗಿರುವ ಶಿಷ್ಯರಲ್ಲಿ ಮುಖ್ಯವಾದ 'ಪೇತುರು' ಎನ್ನುವ ಶಿಷ್ಯನು ಕೂಡಾ ಆತನು ಭಗವಂತನೆಂದು ವಿಶ್ವಾಸಿಸಲಾರ ದೆಹೋಗಿದ್ದಾನೆ. ಯೇಸು ಮೇಲೆ ಎಷ್ಟೋ ಭಕ್ತಿಭಾವ ಇದ್ದರೂ ಕೆಲವುಕಡೆ ಯೇಸುನನ್ನು ಸಂಶಯಿಸಿದ್ದಾನೆ. ಕೊನೆಗೆ ಯೇಸುನನ್ನು ದೊಡ್ಡ ಜ್ಞಾನಿಯನ್ನಾಗಿ ಗುರುತಿಸಿದ್ದಾನೆ ಹೊರತು, ಭಗವಂತನನ್ನಾಗಿ ತಿಳಿಯಲಾರದೆ ಹೋಗಿದ್ದಾನೆ. ಯೇಸು ಮರಣಿಸಿದ ನಂತರ ಅಂದರೇ ಯೇಸು ಶಿಷ್ಯರನ್ನು ಬಿಟ್ಟು ಕಾಣಿಸದಂತೆ ಹೋದನಂತರ ಆತನನ್ನು ದೇವರೆಂದು ಅಂದುಕೊಂಡರೂ, ಭಗವಂತನಾಗಿ ಬಂದಿರುವ ಸಾಕಾರ ದೇವರೆಂದು ಅಂದುಕೊಂಡರೂ ಏನೂ ಪ್ರಯೋಜನೆ ಇರುವುದಿಲ್ಲ. ಇದರಿಂದ ಭಗವಂತನು ಮನುಷ್ಯರ ಮಧ್ಯೆ ಇರುವಾಗಲೇ, ಆತನು ಸಜೀವವಾಗಿ ಇರುವಾಗಲೇ ತಿಳಿಯುವುದರಿಂದ ಮೋಕ್ಷ ಲಭಿಸುತ್ತದೆ ಹೊರತು, ಆತನು ಹೋದ ನಂತರ ಆತನು ಭಗವಂತನೇಯೆಂದು ಹೇಳಿ ಕೊಂಡರೂ ಪ್ರಯೋಜನೆಯಿಲ್ಲ.

ದೇವರು ಮನುಷ್ಯನಾಗಿ ಭೂಮಿಮೇಲೆಗೆ ಬಂದರೆ ಮನುಷ್ಯನಂತೆ ಪ್ರವರ್ತಿಸುತ್ತಾನೆ. ಆತನ ಶರೀರದಲ್ಲಿ ಜೀವಾತ್ಮ ಇರುವುದರಿಂದ ಎಲ್ಲಾ ಅನುಭವಗಳನ್ನು ಅನುಭವಿಸಬೇಕಾಗಿದೆ. ಭಗವಂತನಾಗಿ ಬರುವವನು ಎಷ್ಟು ಜನ್ಮಗಳಿಗಾದರೂ ಒಬ್ಬನೇ ಬರುತ್ತಿರುತ್ತಾನೆ. ಭಗವಂತನಾದ ಕೃಷ್ಣನ ಶರೀರದಲ್ಲಿ

ಯಾವ ಜೀವಿ ಇದ್ದಾನೋ, ಅದೇ ಜೀವಿಯೇ ಯೇಸುವಾಗಿ ಬಂದಾಗಲು ಕೂಡಾ ಇದ್ದಾನೆ. ಭಗವಂತನು ಎಷ್ಟು ಜನ್ಮಗಳಲ್ಲಿ ಬಂದರೂ ಒಂದೇ ಜೀವಿ, ಒಂದೇ ಆತ್ಮ ಇರುವುದರಿಂದ ಮತ್ತು ಒಂದೇ ಮನಸ್ಸು, ಒಂದೇ ಬುದ್ಧಿ ಇರುವುದರಿಂದ ಆತನಿಗೆ ಎಲ್ಲಾ ಜನ್ಮಗಳು ಜ್ಞಾಪಕವಿರುತ್ತವೆ. ಕೃಷ್ಣನಾಗಿ ಬಂದಾಗ ಯಾವ ಜ್ಞಾನವನ್ನು ಹೇಳಿದ್ದಾನೋ ಅದೇ ಜ್ಞಾನವನ್ನೇ ಯೇಸುವಾಗಿ ಬಂದಾಗ ಕೂಡಾ ಹೇಳಿದ್ದಾನೆ. ಆದರೇ ಹೇಳಿದ ಪ್ರಾಂತ, ಹೇಳಿದ ಭಾಷೆ ಬೇರೆ ಇರುವುದರಿಂದ ಕೃಷ್ಣನು ಹೇಳಿರುವುದು, ಯೇಸು ಹೇಳಿರುವುದು ಬೇರೆಬೇರೆ ಜ್ಞಾನವಾಗಿರುವಂತೆ ಕಾಣಿಸುತ್ತಿದೆ. ಬೇರೆಯಾಗಿ ಕಾಣಿಸಿದರೂ ಕೊನೆಗೆ ಇಬ್ಬರೂ ಹೇಳಿದ ವಾಕ್ಯದಲ್ಲಿನ ಸಾರಾಂಶ ಒಂದೇ ಇರುತ್ತದೆ. ಉದಾಹರಣೆಗೆ 'ಮೂರು ಎರಡುಗಳನ್ನು ಕೂಡಿದರೆ ಆರು ಆಗುತ್ತದೆ' ಎಂದು ಹೇಳಿದ ಮಾತನ್ನು ಮತ್ತೊಬ್ಬರು 'ಆರನ್ನು ಮೂರಸಲ ವಿಭಜಿಸಿದರೆ ಎರಡು ಬರುತ್ತದೆ' ಎಂದು ಹೇಳಿದರೂ ಒಂದೇ. ಎರಡು ಮಾತುಗಳ ಸಾರಾಂಶ ಒಂದೇ ಆದರೂ ಎರಡು ಮಾತುಗಳು ಬೇರೆಬೇರೆಯಾಗಿ ಕಾಣಿಸುತ್ತಿವೆ. ಹಾಗೆಯೇ ಮೊದಲು ಹೇಳಿದವನು, ಹಿಂದೆ ಹೇಳಿದವನು ಇಬ್ಬರೂ ಒಂದೇ ಆದರೂ, ಅವನೇ ಇವನು ಎಂದು ಗುರುತಿಸದಂತೆ ಒಂದೇ ಜ್ಞಾನವನ್ನೇ ಬೇರೆ ಭಾಷೆಯಲ್ಲಿ, ಬೇರೆ ವಿಧವಾಗಿ ಹೇಳಿದ್ದಾನೆ. ಆದ್ದರಿಂದ ಕೃಷ್ಣನೇ ಯೇಸುಯೆಂದು ಯಾರೂ ಗ್ರಹಿಸಲಾರದೆಹೋಗಿದ್ದಾರೆ. ಕೃಷ್ಣನಾಗಿರುವಾಗ **'ನಾನು ಎಂಬ ಭಾವನೆ ಇಲ್ಲದಂತೆ ಮಾಡಿದ ದುಷ್ಟಕಾರ್ಯದಲ್ಲಿನ ಪಾಪವು ಆತನನ್ನು ಅಂಟುವುದಿಲ್ಲ'** ಎಂದು ಹೇಳಿದ್ದಾನೆ. ಆತನೇ ಯೇಸುವಾಗಿ ಬಂದಾಗ 'ನಾನು ಎಂಬ ಭಾವನೆಯಿಂದ **'ಒಬ್ಬ ಸ್ತ್ರೀಯನ್ನು ಮೋಹದ ದೃಷ್ಟಿಯಿಂದ ನೋಡಿದರೂ ಆತನು ಆಗಲೇ ಆಕೆಯೊಂದಿಗೆ ವ್ಯಭಿಚರಿಸಿದವನಾಗುತ್ತಾನೆ.'** ಆ ಪಾಪ ಅವನಿಗೆ ಬರುತ್ತದೆ. ಅಲ್ಲಿ ಪಾಪ ಬರುವುದಿಲ್ಲ ಎಂದು ಹೇಳಿದರೂ, ಇಲ್ಲಿ ಪಾಪ ಬರುತ್ತದೆಂದು ಹೇಳಿದರೂ ಎರಡೂ ಒಂದೇ ಭಾವನೆಯಿಂದ ಕೂಡಿಕೊಂಡ ಜ್ಞಾನವಾಕ್ಯಗಳೇ ಯೆಂದು ಯಾರಿಗೂ ತಿಳಿದಿಲ್ಲ. ಆದ್ದರಿಂದ ವಾಕ್ಯಗಳನ್ನು ಬೇರೆಬೇರೆಯಾಗಿ

ತಿಳಿಯುವುದೇ ಅಲ್ಲದೆ ಆ ವಾಕ್ಯವನ್ನು ಹೇಳಿದ ಇಬ್ಬರೂ ಬೇರೆಬೇರೆಯಾಗಿರುವ ವರೆಂದು ಅಂದುಕೊಳ್ಳುತ್ತಾರೆ ಹೊರತು ಒಬ್ಬರೇಯೆಂದು ತಿಳಿಯಲಾರರು.

**ಪ್ರಶ್ನೆ :– ದೇವರು ನಿರಾಕಾರನೆಂದು, ಭಗವಂತನು ಆಕಾರವಿರುವ ಸಾಕಾರನೆಂದು ಹೇಳುವುದೇ ಅಲ್ಲದೆ ಅವರು ಹೀಗೆ ಇರುತ್ತಾರೆಂದು, ಭಗವಂತನ ಶರೀರದಲ್ಲಿ ಜೀವಿಯು ಹೀಗೆ ಇರುತ್ತಾನೆಂದು, ಆತ್ಮ ಹೀಗೆ ಇರುತ್ತಾನೆಂದು ಹೇಳುತ್ತಾ ಇವೆಲ್ಲ ರಹಸ್ಯಗಳೆಂದು ಯಾರೂ ಗುರುತಿಸದಿರುವವೆಂದು ನೀವು ಹೇಳುತ್ತಿದ್ದೀರ ಅಲ್ಲವೆ! ಭಗವಂತನು ಮೂರನೆ ಪುರುಷನೆಂದು, ಆತ್ಮ ಎರಡನೆ ಪುರುಷನೆಂದು ಕೂಡಾ ಹೇಳಿ ಅದೂ ರಹಸ್ಯವಾದ ವಿಷಯವೆಂದೇ ಹೇಳಿದ್ದಾರೆ. ಹೀಗೆ ಭಗವಂತನನ್ನು ಕುರಿತು ಎಷ್ಟೋ ರಹಸ್ಯಗಳನ್ನು, ಯಾರಿಗೂ ತಿಳಿಯದ ರಹಸ್ಯಗಳನ್ನು ನೀವು ಹತ್ತಿರವಿದ್ದು ನೋಡಿದಂತೆ ಇಲ್ಲಿಯವರೆಗು ಹೇಳಿದ್ದೀರ. ಎಷ್ಟೋ ರಹಸ್ಯವಾದ ಈ ವಿಷಯಗಳೆಲ್ಲ ನಿಮಗೆ ಹೇಗೆ ತಿಳಿದಿವೆಯೆಂದು ನಾವು ಪ್ರಶ್ನಿಸುತ್ತಿದ್ದೇವೆ. ಭೀಷ್ಮನು ಒಬ್ಬನೇ ಭಗವಂತನನ್ನು ತಿಳಿದುಕೊಂಡಿದ್ದಾನೆಂದು ಹೇಳಿದ ನಿಮಗೆ ಭಗವಂತನ ವಿಷಯಗಳು ಹೇಗೆ ತಿಳಿದಿವೆ? ಅನುಭವಿಸಿದರೆ ಹೊರತು ತಿಳಿಯದ ವಿಧಾನ ನಿನಗೆ ಹೇಗೆ ತಿಳಿದಿದೆ? ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದ ಜವಾಬ್ಧಾರಿ ನಿಮಗಿದೆ. ಆದ್ದರಿಂದ ನಮಗೆ ವಿವರವಾಗಿ ಅರ್ಥವಾಗುವಂತೆ ತಿಳಿಸುತ್ತೀರೆಂದು ಅಂದುಕೊಳ್ಳುತ್ತಿದ್ದೇವೆ.**

**ಉತ್ತರ :–** ಒಂದು ಹಣ್ಣಿನಲ್ಲಿನ ರುಚಿಯನ್ನು ಅಂದಾಜಿನಿಂದ ಹೇಳುವುದು ಅಶಾಸ್ತ್ರೀಯ ಆಗುತ್ತದೆ. ಆ ಹಣ್ಣನ್ನು ತಿಂದು ಅದರ ರುಚಿಯನ್ನು ಅನುಭವಿಸಿ ಹೇಳಿದರೆ ಅದು ಶಾಸ್ತ್ರಬದ್ಧವಾಗುತ್ತದೆ. ಆದ್ದರಿಂದ ನಾನು ಶಾಸ್ತ್ರಬದ್ಧವಾದ ಜ್ಞಾನವನ್ನು, ಯಾರೂ ತಪ್ಪು ಹಿಡಿಯದ ಜ್ಞಾನವನ್ನು ನಿಮಗೆ ಒದಗಿಸಬೇಕೆಂದು ಕೊಂಡಿದ್ದೇವೆ. ಹಾಗೆ ಒದಗಿಸುವುದಕ್ಕೆ ನಾನು ಮೊದಲು ಪ್ರತಿ ವಿಷಯವನ್ನು ಅನುಭವಿಸಿ ಅದರಲ್ಲಿನ ಸತ್ಯವನ್ನು ತಿಳಿದು ನಿಮಗೆ ತಿಳಿಸಬೇಕೆನ್ನುವ ಉದ್ದೇಶದಿಂದ ಭಗವಂತನ ಶರೀರದಲ್ಲಿನ ವಿಧಾನ ತಿಳಿಯುವು ದಕ್ಕೆ ನಾನು

ದೇವರನ್ನು ಬೇಡಿಕೊಂಡಿದ್ದೇನೆ. ಅಂತಿಮ ದೈವ ಗ್ರಂಥದಲ್ಲಿ (2–186) ರಲ್ಲಿ **"ದೇವರು ನಿಮಗೆ ಅತ್ಯಂತ ಸಮೀಪದಲ್ಲಿ ಇದ್ದಾನೆ. ನೀವು ಆಡುವ ಪ್ರತಿ ಮಾತನ್ನು ಕೇಳುತ್ತಿದ್ದಾನೆ."** ಎಂದು ಹೇಳಿದಂತೆ ಮತ್ತು ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ (15–16) ಶ್ಲೋಕದಲ್ಲಿ **"ನಿಮ್ಮೊಂದಿಗೆ ದೇವರಾದ ಆತ್ಮ ಕೂಡಿಕೊಂಡಿದೆ"** ಎನ್ನುವಂತೆ ದೇವರು ನಮ್ಮ ಪಕ್ಕದಲ್ಲಿಯೇ ಇದ್ದು ಮನುಷ್ಯ ಕೇಳುವ ಪ್ರತಿ ವಿಷಯವನ್ನು ನೋಡುತ್ತಿದ್ದಾನೆ. ನಾನು ಕೇಳಿರುವುದು ಪ್ರಪಂಚ ವಿಷಯವಲ್ಲ ದೇವರ ವಿಷಯ. ಆದ್ದರಿಂದ ದೇವರೇ ಆ ವಿಷಯವನ್ನು ನನಗೆ ತಿಳಿಸಬೇಕೆಂದುಕೊಂಡಿದ್ದಾನೆ. 1974ರಲ್ಲಿ ಆಗ ನನ್ನ ವಯಸ್ಸು 24 ವರ್ಷಗಳು, ಆಗ ನನ್ನ ಶರೀರದಲ್ಲಿ ಏನೋ ಬದಲಾವಣೆಯಾಗಿದೆ ಅಂದು ಕೊಳ್ಳುತ್ತೇನೆ. ಹಾಗೆ ಏಕೆ ಅಂದುಕೊಳ್ಳಬೇಕಾಗಿ ಬಂದಿದೆಯೆಂದರೇ ನಾನು ಇತರರೊಂದಿಗೆ ಹೇಳುವಮಾತು ಚಾಚೂ ತಪ್ಪದೇ ನೇರವೇರುತ್ತಿತ್ತು. ಅದು ಏಕೆ ನಡೆಯುತ್ತಿತ್ತೋ ಆಗ ನನಗೆ ತಿಳಿಯದು. ಉದಾಹರಣೆಗೆ ಆ ಕಾಲದಲ್ಲಿ ಜೂಜಾಟದಲ್ಲಿ ನಂಬರ್‌ಗಳಿಗೆ ಹಣ ಕಟ್ಟಿದರೆ, ಕಟ್ಟಿದ ನಂಬರ್ ಬಂದರೆ ಅದಕ್ಕೆ ವಿಪರೀತವಾದ ಹಣ ಬರುತ್ತಿತ್ತು. ಒಂದು ರೂಪಾಯಿಗೆ 95 (ತೊಂಭತ್ತೈದು) ರೂಪಾಯಿಗಳು ಬರುತ್ತಿದ್ದವು. ಆಗ ಕೆಲವರು ಓದು ಬರದವರು, ಉಳಿದವರು ನನ್ನನ್ನು ಹಣ ಬರುವ ನಂಬರ್ ಹೇಳೆಂದು ಕೇಳುತ್ತಿದ್ದರು. ಆಗ ಅವರಿಗೆ ಹಣ ಹೋದರೆ ಇನ್ನೊಂದು ಸಲ ನನ್ನನ್ನು ಕೇಳುವುದಿಲ್ಲ ಎಂಬ ಉದ್ದೇಶದಿಂದ ಯಾವುದೋ ಒಂದು ನಂಬರ್ ಬಾಯಿಗೆ ಬಂದಿರುವುದು ಹೇಳಿ ಕಳುಹಿಸುತ್ತಿದ್ದೆನು. ಆಗ ಅವರಿಗೆ ಹಣ ಹೋಗುತ್ತವೆ, ಎರಡನೆಸಲ ನನ್ನನ್ನು ಕೇಳುವುದಿಲ್ಲ ಎಂದು ಅಂದುಕೊಳ್ಳುತ್ತಿದ್ದೆನು. ಆದರೆ ಮರುದಿನ ನಾನು ಹೇಳಿದ ನಂಬರೇ ಬರುವುದು, ಆ ನಂಬರ್ ಕಟ್ಟಿದವರಿಗೆ ವಿಪರೀತವಾಗಿ ಹಣ ಬರುವುದು ನಡೆಯುತ್ತಿತ್ತು. ಅದರಿಂದ ಮತ್ತಷ್ಟು ಹೆಚ್ಚಾಗಿ ಮನುಷ್ಯರು ಬಂದು ನನ್ನನ್ನು ಬರುವ ನಂಬರ್ ಹೇಳೆನ್ನುತ್ತಿದ್ದರು. ನಾನು ಹೇಳಿದ ನಂಬರ್ ಕುರುಡು ನಂಬಿಕೆಯಿಂದ ಬಂದಿದೆಹೇಳು ಎಂದು ಅಂದುಕೊಳ್ಳುತ್ತಿದ್ದೆನು.

ಮೊದಲು ಹಾಗೆ ಅಂದುಕೊಂಡರೂ ನಂತರ ಹೇಳಿದ ನಂಬರ್ ಕೂಡಾ ಬರುತ್ತಿತ್ತು. ಅವರಿಗೆ ಬಂದಿರುವ ಹಣವನ್ನು ನೋಡಿ ನನಗೂ ಕೂಡಾ ಆಸೆ ಹುಟ್ಟುತ್ತಿತ್ತು. ನಾನು ಆಗ ಹಣವಿಲ್ಲದ ಪರಿಸ್ಥಿತಿಯಲ್ಲಿ ಇರುತ್ತಿದ್ದೆನು. ಅಂತಹ ಸಮಯದಲ್ಲಿ ಬರುವ ನಂಬರ್ ನಾನು ಬರೆದು, ಬಾರದ ನಂಬರ್ ಅವರಿಗೆ ಹೇಳಬೇಕೆಂದುಕೊಂಡು ಒಂದು ದಿನ ಹಾಗೇ ಮಾಡಿದ್ದೇನೆ. ಆಗ ಅವರಿಗೆ ಹೇಳಿದರೂ ಬರುವುದಿಲ್ಲ ಎಂದುಕೊಂಡ ನಂಬರ್ ಬರುವುದು, ಬರುತ್ತದೆಂದು ಕೊಂಡ ನಾನು ಹಾಕಿಕೊಂಡ ನಂಬರ್ ಬರದೆ ಇರುವುದು ನಡೆದಿದೆ. ಅದು ಒಂದು ವಿಚಿತ್ರವಾಗಿ ತೋಚಿದೆ. ನಾನು ಇತರರಿಗೆ ಹೇಳಿದ ನಂಬರ್ ಬರುವುದೇನು ಸ್ವತಃವಾಗಿ ನಾನು ಹಾಕಿಕೊಂಡ ನಂಬರ್ ಬಾರದೆ ಹೋಗುವುದೇನು? ಎಂಬ ಪ್ರಶ್ನೆ ಬಂದಿದೆ.

ಪ್ರಪ್ರಥಮವಾಗಿ ನನಗೆ ನಡೆದ ಸಂಘಟನೆಯಿಂದ ನನ್ನಲ್ಲಿ ಪ್ರಶ್ನೆ ಏರ್ಪಟ್ಟರೂ ಆ ದಿನ ನನಗೆ ಸಮಾಧಾನ ಸಿಗಲಿಲ್ಲ. ಮೊದಲು ಈ ಸಂಘಟನೆಗಿಂತ ಮೊದಲು ಭಗವಂತನ ಶರೀರದಲ್ಲಿನ ವಿಧಾನವನ್ನು ತಿಳಿಸೆಂದು ನಾನು ಕೋರಿದ ಕೋರಿಕೆಯನ್ನು ಮರೆತುಹೋಗಿದ್ದೇನೆ. ನಾನು ಎರಡನೆ ಆತ್ಮವನ್ನೇ ಕೋರಬೇಕೆಂದು, ಮೂರನೆ ಆತ್ಮವನ್ನು ಕೋರಬಾರದೆಂದು ಆ ದಿನ ನನಗೆ ತಿಳಿಯಲಿಲ್ಲ. ನಾನು ದೇವರನ್ನು ಕೋರಿದ್ದೇನೆಂದು ಮಾತ್ರ ತಿಳಿದಿದೆ. ಆ ಕೋರಿಕೆ ಎರಡನೆ ಆತ್ಮ ಪರಧಿಯೊಳಗಿನದೆಂದು ನನಗೆ ತಿಳಿದಿಲ್ಲ. ದೇವರು ಎರಡು ಆತ್ಮಗಳಾಗಿ ಇದ್ದಾನೆಂದು ತಿಳಿಯದಿದ್ದರೂ ದೇವರೇ ಭಗವಂತನಾಗಿ ಹುಟ್ಟುತ್ತಾನೆಂಬ ನಂಬಿಕೆ ಇರುತ್ತಿತ್ತು. ಆದರೆ ಮೂರನೆ ಆತ್ಮವಾದ ಪರಮಾತ್ಮ ಭಗವಂತನಾಗಿ ಬರುತ್ತಾನೆಂದು ತಿಳಿಯದು. ಆದರೂ ನನ್ನ ಕೋರಿಕೆ ಭಗವಂತನನ್ನು ಕುರಿತು ತಿಳಿದುಕೊಳ್ಳಬೇಕೆನ್ನುವುದು. ನನ್ನ ಕೋರಿಕೆಯನ್ನು ಅನುಸರಿಸಿ ಉತ್ತರ ಪ್ರಾರಂಭವಾಗಿದೆಯೆಂದು ಕೂಡಾ ತಿಳಿದಿಲ್ಲ. ಇತರರಿಗೆ ಹೇಳಿದರೆ ಮಾತು ನೇರವೇರುವುದು, ನನಗೆ ಉಪಯೋಗ ಪಡದಂತೆ ಹೋಗುವುದು ನನಗೆ ತಿಳಿಸುವ ಉತ್ತರದಲ್ಲಿ ಭಾಗವೆಂದು ಆಗ ನಾನು ಗ್ರಹಿಸಲಿಲ್ಲ.

ಆ ವಿಷಯವನ್ನು ಬಿಟ್ಟುಹಾಕಿದ ನಂತರ ಸ್ವಲ್ಪ ಕಾಲಕ್ಕೆ ನಾನು ಹೇಳಿದರೆ ಇತರರ ರೋಗಗಳು ಗುಣವಾಗಿ ಹೋಗುತ್ತಿದ್ದವು. ಎಲ್ಲಿಯೂ ವಾಸಿಯಾಗುವುದಿಲ್ಲ ಎನ್ನುವ ರೋಗಗಳು ಕೂಡಾ ಬಾಯಿ ಮಾತಿನಿಂದಾಗಲಿ, ಕೈ ಸ್ಪರ್ಶದಿಂದಾಗಲಿ ವಾಸಿಯಾಗಿ ಹೋಗುತ್ತಿದ್ದವು. ನನ್ನ ಮಾತಿಗೆ ಅಷ್ಟು ದೊಡ್ಡ ಶಕ್ತಿ ಹೇಗೆ ಬಂದಿದೆಯೋ ನನಗೆ ತಿಳಿಯದು. ಆದರೆ ಆ ಶಕ್ತಿ ನನಗೆ ಇದಕ್ಕು ಮೊದಲು ಇಲ್ಲ. ಈಗ ಎಲ್ಲಿಂದ ಬಂದಿದೆಯೆಂದು ಆಲೋಚಿಸುತ್ತಿದ್ದೆನು ಆದರೂ ಆ ದಿನ ಎಲ್ಲಾ ಅಗಮ್ಯಗೋಚರವಾಗಿರುತ್ತಿತ್ತು.

ಈ ವಿಧವಾಗಿ ಹೊರಗಿನ ಕೆಲಸಗಳು ನನಗೆ ತಿಳಿಯದಂತೆ ನನ್ನ ಪ್ರಮೇಯವಿಲ್ಲದೆ, ನನ್ನ ಶಕ್ತಿ ಏನೂ ಅಲ್ಲದಂತೆ ನೆರವೇರುತ್ತಿದ್ದವು. ಆಗ ಅದೆಲ್ಲವೂ ನನ್ನಿಂದ ನಡೆಯಲಿಲ್ಲವೆಂದು ತಿಳಿದರೂ, ಯಾರಿಂದ ನಡೆಯುತ್ತಿದ್ದವೋ ತಿಳಿಯುತ್ತಿರಲಿಲ್ಲ. ನನಗೆ ತಿಳಿಯದ ರಹಸ್ಯವೇನೊ ಇದೆಯೆಂದು ಮಾತ್ರ ಅಂದುಕೊಳ್ಳುತ್ತಿದ್ದೆನು. ಈ ವಿಧವಾಗಿ ಕಾಲ ಕಳೆಯುತ್ತಿರುವಾಗ ಕ್ರಮೇಣ ಹೊರಗಿನ ವಿಷಯಗಳಲ್ಲಿಯೇ ಆಶ್ಚರ್ಯಪಡಬೇಕಾದ ವಿಷಯಗಳಲ್ಲದೆ ಒಳಗಿನ ಜ್ಞಾನ ವಿಷಯಗಳಲ್ಲಿಯೇ ಇತರರು ಬೋಧಕರಾಗಿರುವವರು, ಗುರುಗಳಾಗಿ ಇರುವವರು ಹೇಳಿದ ಬೋಧನೆಗಳಿಗೆ ವಿರುದ್ಧವಾಗಿ ಸ್ವಲ್ಪ, ಪ್ರತ್ಯೇಕವಾಗಿ ಕೆಲವು ಬೋಧನೆಗಳನ್ನು ನಾನು ಹೇಳುವುದು ಪ್ರಾರಂಭಿಸಿದ್ದೇನೆ. ನಾನು ಹೇಳಿದ ಬೋಧನೆಗಳು ನನಗೆ ಮೊದಲು ತಿಳಿದಿರುವವಲ್ಲ. ನಾನು ಎಲ್ಲಿಯೂ ಕಲಿತಿರುವವಲ್ಲ. ಆದರೂ ನಾನು ಹೇಳಿರುವ ಬೋಧನೆಗಳು ಶಾಸ್ತ್ರಬದ್ಧವಾಗಿ ಇರುವುದೇ ಅಲ್ಲದೆ ಇತರರು ಹೇಳಿರುವುದಕ್ಕಿಂತ ಸತ್ಯವಾಗಿರುತ್ತಿದ್ದವು. ಕಾಲ ಕಳೆದಂತೆಲ್ಲ ದೊಡ್ಡ ದೊಡ್ಡ ದೈವ ರಹಸ್ಯಗಳನ್ನು ಹೇಳುತ್ತಿದ್ದೆನು. ಎಲ್ಲಾ ಸಂಚಲನವಾದ ಬೋಧನೆಗಳನ್ನು ಹೇಳುವುದೇ ಅಲ್ಲದೆ ಗ್ರಂಥರೂಪದಲ್ಲಿ ಬರೆಯಲು ಆರಂಭಿಸಿದ್ದೇನೆ. ಗ್ರಂಥಗಳು ಕೂಡಾ ಇತರರನ್ನು ಚೆನ್ನಾಗಿ ಆಕರ್ಷಿಸುತ್ತಿದ್ದವು. ಇದೆಲ್ಲವೂ ಗಮನಿಸಿದರೆ ಪ್ರಪಂಚದಲ್ಲೇ ಜ್ಞಾನದಲ್ಲಿ ನಾನೇ ಮೊದಲನೆಯವನೆಂದು ತಿಳಿದಿದೆ.

ವಾಸ್ತವವಾಗಿ ನನಗೆ ಭಗವದ್ಗೀತೆ ಶ್ಲೋಕಗಳನ್ನು ಓದುವುದಕ್ಕೆ ಬರುವುದಿಲ್ಲ. ಒಂದು ಶ್ಲೋಕವನ್ನು ಕೂಡಾ ನೋಡದಂತೆ ಹೇಳಲಾರೆನು. ಸಂಸ್ಕೃತ ಪದಗಳನ್ನು ಹೇಳುವುದಕ್ಕೆ ಬರುವುದಿಲ್ಲ. ಆದರೂ **'ತ್ರೈತ ಸಿದ್ಧಾಂತ ಭಗವದ್ಗೀತೆ'** ಎಂಬ ಹೆಸರಿನಿಂದ ಭಗವದ್ಗೀತೆ ಶ್ಲೋಕಗಳಿಗೆ ಭಾವಗಳನ್ನು ಬರೆಯುವುದು ನಡೆದಿದೆ. ಅದ್ವೈತ ಸಿದ್ಧಾಂತವನ್ನು ಹೇಳಿದ ಶಂಕರಾಚಾರ್ಯರು, ವಿಶಿಷ್ಟಾದ್ವೈತವನ್ನು ಹೇಳಿದ ರಾಮಾನುಜಾಚಾರ್ಯರು, ದ್ವೈತ ಸಿದ್ಧಾಂತವನ್ನು ಹೇಳಿದ ಮಧ್ವಾಚಾರ್ಯರು ಹೇಳಿದ ಬೋಧನೆಗಳನ್ನು ಅವರ ಸಿದ್ಧಾಂತಗಳನ್ನು ಅತಿಕ್ರಮಿಸಿ ನಾನು ತ್ರೈತ ಸಿದ್ಧಾಂತವನ್ನು ಹೇಳುವುದು, ಆ ಸಿದ್ಧಾಂತದ ಮೂಲಕ ಇಲ್ಲಿಯವರೆಗು ಯಾರಿಗೂ ತಿಳಿಯದ ಜ್ಞಾನವನ್ನು ಹೇಳುವುದು, ಮುಂತಾದ ವಿಷಯಗಳನ್ನು ನೋಡಿದರೆ ಇದೆಲ್ಲಾ ನನಗೆ ಸ್ವಲ್ಪವಾದರೂ ತಿಳಿದಿಲ್ಲ. ನಾನು ಎಲ್ಲಿಯೂ ಕಲಿಯಲಿಲ್ಲ. ಅಂಥಾದ್ದು ನಾನು ಹೇಗೆ ಹೇಳಿದ್ದೇನೆ! ಎಂದು ನನಗೇ ಆಶ್ಚರ್ಯವಾಗಿದೆ. ಅಲ್ಲಿಗೂ ಕೂಡಾ ಆ ವಿಧವಾಗಿ ಏಕೆ ನಡೆಯುತ್ತಿದೆಯೋ ತಿಳಿಯಲಿಲ್ಲ. ಹಿಂದೂಗಳಲ್ಲಿ ಸಿದ್ಧಾಂತ ಜ್ಞಾನವನ್ನು, ಸಂಚಲನ ಜ್ಞಾನವನ್ನು, ರಹಸ್ಯ ಜ್ಞಾನವನ್ನು ನಾನು ತಿಳಿಸುವುದು ನಡೆದಿದೆ. ನಂತರ ಅದೇ ವಿಧವಾಗಿ ಇತರ ದೈವಗ್ರಂಥಗಳಾದ ಬೈಬಲ್ ಗ್ರಂಥಗಳಲ್ಲಿ ಕ್ರೈಸ್ಥರಿಗೆ ತಿಳಿಯದ ಜ್ಞಾನವನ್ನು ಹೇಳುವುದು ನಡೆದಿದೆ. ಬೈಬಲ್‌ನಲ್ಲಿ ಕೆಲವು ವಾಕ್ಯಗಳಿಗೆ ಇಲ್ಲಿಯವರೆಗೂ ತಿಳಿಯದ ವಿವರವನ್ನು ಹೇಳಿ ಕ್ರೈಸ್ಥರನ್ನು ಸಂತೃಪ್ತಿಪಡಿಸುವುದಾಗಿದೆ. ಹಾಗೆಯೇ ಅಂತಿಮ ದೈವಗ್ರಂಥವಾದ ಖುರ್‌ಆನ್‌ನಲ್ಲಿ ಕೆಲವು ವಾಕ್ಯಗಳು ಬಹಳ ಸೂಕ್ಷ್ಮ ವಿವರದೊಂದಿಗೆ ಕೂಡಿಕೊಂಡಿರುವವಾಗಿದ್ದು ಇಲ್ಲಿಯವರೆಗು ಮುಸ್ಲಿಮ್‌ರಿಗೆ ಅರ್ಥವಾಗದಿರುವವಾಗಿ ಇವೆ. ಅವುಗಳನ್ನು ಬಹಳಜನ ತಪ್ಪಾಗಿ ಅರ್ಥ ಮಾಡಿಕೊಂಡು ಇರುವುದರಿಂದ ಆ ವಾಕ್ಯಗಳಿಗು ಶಾಸ್ತ್ರಬದ್ಧವಾಗಿ ಪೂರ್ತಿ ಅರ್ಥವನ್ನು ವಿವರವಾಗಿ ನಾನು ಬರೆಯುವುದು ನಡೆದಿದೆ. ಖುರ್‌ಆನ್ ಗ್ರಂಥದಲ್ಲಿನ ಅರ್ಥವಾಗದ ಕೆಲವು ವಾಕ್ಯಗಳನ್ನು ತೆಗೆದುಕೊಂಡು **"ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು"** ಎಂದು ಒಂದು

ಗ್ರಂಥವನ್ನು, **'ಅಂತಿಮ ದೈವ ಗ್ರಂಥದಲ್ಲಿ ವಜ್ರ ವಾಕ್ಯಗಳು"** ಎಂದು ಮತ್ತೊಂದು ಗ್ರಂಥವನ್ನು ಬರೆಯುವುದಾಗಿದೆ. ಈ ವಿಧವಾಗಿ ಎರಡು ದೈವ ಗ್ರಂಥಗಳಲ್ಲಿನ ವಾಕ್ಯಗಳಿಗು ನಾನು ಹೇಗೆ ವಿವರವನ್ನು ಬರೆದಿದ್ದೇನೊ ನನಗೆ ಅರ್ಥವಾಗದ ವಿಷಯವಾಗಿದೆ. ಆ ಎರಡು ಗ್ರಂಥಗಳು ಮೊದಲು ಯಾವುದೇ ಪರಿಚಯವಿಲ್ಲ. ಆದರೂ ಆ ಗ್ರಂಥಗಳಲ್ಲಿನ ವಾಕ್ಯಗಳಿಗು ವಿವರವನ್ನು ತಿಳಿಸಿ ಎಷ್ಟೋಜನ ಮುಸ್ಲಿಮ್‌ರಿಂದ, ಕ್ರೈಸ್ಥರಿಂದ ಪ್ರಶಂಸೆಗಳು ಹೊಂದುವುದು ನಡೆದಿದೆ.

ದೈವಜ್ಞಾನದಲ್ಲಿ ಪ್ರಪಂಚದಲ್ಲಿಯೇ ಅತ್ಯುನ್ನತವಾದ ಜ್ಞಾನ ನನ್ನಿಂದ ಬರುತ್ತಿದೆಯೆಂದು ಸ್ವಲ್ಪಮಟ್ಟಿಗೆ ಅರ್ಥವಾಗಿದೆ. ನನಗೆ ತಿಳಿಯದವುಗಳನ್ನು ನಾನು ಹೇಗೆ ಬರೆಯುತ್ತೇನೆ? ಎನ್ನುವ ಪ್ರಶ್ನೆ ಬಂದಾಗ, ದ್ವಿತೀಯ ದೈವ ಗ್ರಂಥವಾದ ಬೈಬಲ್‌ನಲ್ಲಿನ ವಾಕ್ಯವೊಂದು ಜ್ಞಾಪಕಬಂದಿದೆ. ಅದು ಈ ವಿಧವಾಗಿದೆ ನೋಡಿರಿ.

**(ಮತ್ತಾಯ 10-20) "ನಿಮ್ಮ ತಂದೆ ಆತ್ಮ ನಿಮ್ಮೊಳಗಿದ್ದು ಮಾತನಾಡುತ್ತಿದ್ದಾನೆ ಹೊರತು ಮಾತನಾಡುವವರು ನೀವಲ್ಲ."**

ಈ ವಾಕ್ಯವನ್ನು ನಾನೇ ಇತರರಿಗೆ ವಿವರವಾಗಿ ಹೇಳಿದ್ದೇನೆ. ನಾನು ಹೇಳಿದ ವಿವರದ ಪ್ರಕಾರ ಯಾರೂ ಸ್ವತಃವಾಗಿ ಮಾತನಾಡುತ್ತಿಲ್ಲವೆಂದು, ಹಾಗೆಯೇ ಯಾರೂ ಯಾವ ಕೆಲಸವನ್ನು ಮಾಡುತ್ತಿಲ್ಲವೆಂದು, ಮನುಷ್ಯರು ಮಾಡುವ ಕೆಲಸಗಳನ್ನು, ಮನುಷ್ಯರು ಮಾತನಾಡುವ ಮಾತುಗಳನ್ನು ನಿನಗೆ ತಂದೆಯಾದ ದೇವರು ಮಾತನಾಡುತ್ತಿದ್ದಾನೆ ಹೊರತು ನೀನು ಮಾತನಾಡಲಿಲ್ಲ ವೆಂದು ವಾಕ್ಯ ವಿವರವನ್ನು ಹೇಳಿದ್ದೇನೆ. ಆ ವಿವರದ ಪ್ರಕಾರ ನಾನು ಬರೆದಿರುವುದು ನನ್ನ ತಂದೆಯಾದ ಆತ್ಮ ಬರೆದಿದ್ದಾನೆ ಹೊರತು ನಾನು ಅಲ್ಲವೆಂದು ಅರ್ಥವಾಗಿದೆ. ನಾನು ಏನು ಮಾಡಿದರೂ, ಏನು ಬರೆದರೂ ಅದೆಲ್ಲವೂ ನಾನು ಬರೆದಿರುವುದು ಅಲ್ಲವೆಂದು ತಿಳಿದುಹೋಗಿದೆ. ಆದರೆ ನಾನು ಬರೆದಿರುವುದು ಯಾರೂ, ಏಕೆ ಬರೆಯಲಾರದೆ ಹೋಗಿದ್ದಾರೆನ್ನುವ

ಪ್ರಶ್ನೆ ಕೂಡಾ ಬಂದಿದೆ. ಅದಕ್ಕೆ ಉತ್ತರವಾಗಿ ಪ್ರಪಂಚ ವಿಷಯಗಳಾದರೆ ನೀನು ಮಾಡಿರುವುದು ಯಾರಾದರೂ ಮಾಡಬಹುದು. ಹಾಗೆಯೇ ನೀನು ಮಾತನಾಡಿರುವುದು ಯಾರಾದರೂ ಮಾತನಾಡಬಹುದು. ಇಲ್ಲಿ ನಾವು ಮಾತನಾಡುವುದು ಪ್ರಪಂಚ ವಿಷಯಗಳನ್ನಲ್ಲ, ಗ್ರಂಥರೂಪವಾಗಿ ಬರೆದ ಜ್ಞಾನ ಎಲ್ಲರೂ ಹೇಳುವುದಲ್ಲ. ಅಂದರೇ ಎಲ್ಲರ ಶರೀರದಲ್ಲಿನ ಆತ್ಮ ಪ್ರಪಂಚ ವಿಷಯಗಳನ್ನು ಎಲ್ಲರಲ್ಲಿ ಮಾಡಿದಂತೆ, ದೈವ ವಿಷಯಗಳನ್ನು ಕೆಲವರಿಂದಲೇ ಹೇಳಿಸುತ್ತದೆ, ಬರೆಯಿಸುತ್ತದೆ. ಅದರಲ್ಲಿಯೂ ಸತ್ಯಬದ್ಧವಾದ ಜ್ಞಾನವನ್ನು ತಾನು ಆಯ್ಕೆ ಮಾಡಿಕೊಂಡ ಮನುಷ್ಯನ ಮುಖಾಂತರವೇ ಹೇಳಿಸುತ್ತದೆ. ಅದೇ ವಿಧವಾಗಿ 'ನನ್ನ ಹತ್ತಿರಕ್ಕೆ ಅತ್ಯುನ್ನತ ಜ್ಞಾನ ಬರುವುದಕ್ಕೆ ಆತ್ಮವಾದ ದೇವರು ನನ್ನನ್ನು ಆಯ್ಕೆ ಮಾಡಿಕೊಂಡಿದ್ದಾನೆಂದು' ಅಂದುಕೊಂಡಿದ್ದೇನೆ. ಅದರ ಪ್ರಕಾರ ನನ್ನ ಶರೀರದಿಂದ ಆತ್ಮವೇ ಉನ್ನತವಾದ ಜ್ಞಾನವನ್ನು ಬೋಧಿಸುತ್ತಿದೆಯೆಂದು ನನಗೆ ತಿಳಿದುಹೋಗಿದೆ.

ದೇವರು ನನ್ನನ್ನು ನೇಮಿಸಿಕೊಂಡು, ನನ್ನ ಮೂಲಕ ತನ್ನ ಜ್ಞಾನವನ್ನು ಬೋಧಿಸುವುದು ನನಗೆ ದೊಡ್ಡ ವರವಿದ್ದಂತೆ ಆದರೂ ನಾನು ಕೋರಿಕೊಂಡಿರುವುದು ಭಗವಂತನ ಶರೀರದಲ್ಲಿ ಆತ್ಮ ಯಾವ ವಿಧವಾಗಿ ಪ್ರವರ್ತಿಸುತ್ತಿದೆ? ಯಾವ ವಿಧವಾಗಿ ಜ್ಞಾನವನ್ನು ಬೋಧಿಸುತ್ತಿದೆಯೆಂದು ತಿಳಿಯಬೇಕೆಂದು, ಆ ಅನುಭವವನ್ನು ನಾನು ಹೊಂದಿದರೆ ಇತರರಿಗೆ ಅನುಭವಪೂರ್ವಕವಾಗಿ ಹೇಳಬಲ್ಲೆನೆಂದು ನಾನು ಅಂದುಕೊಂಡಿದ್ದೇನೆ. ಅದಕ್ಕೆ ಉತ್ತರವಾಗಿ ನನ್ನಲ್ಲಿನ ಆತ್ಮ ನನ್ನ ಬುದ್ಧಿಗೆ ಒದಗಿಸಿದ ಸಮಾಚಾರ ಹೀಗಿದೆ. ಭಗವಂತನ ಶರೀರದಲ್ಲಿ ಆತ್ಮ ಈಕಡೆ ಪ್ರಪಂಚ ವಿಷಯಗಳಲ್ಲಿ ಮೊದಲೇ ನಿರ್ಣಯಿಸಲ್ಪಟ್ಟಿರುವ ಕರ್ಮದಪ್ರಕಾರ ಪ್ರಪಂಚ ಕೆಲಸಗಳು ಮಾಡುತ್ತಿರುತ್ತದೆ. ನಂತರ ಆಗ ಅಗತ್ಯವಾದ ಧರ್ಮಗಳನ್ನು ತಿಳಿಸುವ ನಿಮಿತ್ತ ಜ್ಞಾನವನ್ನು ಸ್ವತಃವಾಗಿ ಬೋಧಿಸುತ್ತಿರುತ್ತದೆ. ಈಗ ನಿನ್ನ ಶರೀರದಲ್ಲಿನ ಆತ್ಮ ನಿನ್ನ ಕರ್ಮದ ಪ್ರಕಾರ ಪ್ರಪಂಚ ಕೆಲಸಗಳು ಮಾಡುತ್ತಿದೆ. ಹಾಗೆಯೇ ಈ ದಿನ ಯಾರಿಗೂ ತಿಳಿಯದ, ಪ್ರಪಂಚದಲ್ಲೇ

ಉತ್ತಮವಾದ ಜ್ಞಾನವನ್ನು ಭಗವಂತನ ಶರೀರದಲ್ಲಿ ಬೋಧಿಸಿದಂತೆಯೇ ಬೋಧಿಸುತ್ತಿದೆ. ಈಗ ಭಗವಂತನ ಶರೀರದಲ್ಲಿ ಇರುವುದು, ನಿನ್ನ ಶರೀರದಲ್ಲಿ ಇದ್ದಂತೆಯೇ ಅಲ್ಲವೆ! ಭಗವಂತನ ಶರೀರದಲ್ಲಿ ನಡೆದಂತೆಯೇ ನಿನ್ನ ಶರೀರದಲ್ಲಿ ನಡೆಯುತ್ತಿದೆ ಅಲ್ಲವೆ! ನೀನು ಭಗವಂತನ ಶರೀರದಲ್ಲಿ ನಡೆಯುವ ವಿಧಾನವನ್ನು ಕುರಿತು ಕೇಳಿದ್ದೀಯಾ, ಆದ್ದರಿಂದ ಭಗವಂತನು ಬೋಧಿಸುವ ಉತ್ತಮವಾದ ಜ್ಞಾನವನ್ನೇ ನಿನ್ನಿಂದ ಹೇಳಿಸುತ್ತಿದ್ದೇವೆ. ಆಗ ನೀನು ಭಗವಂತನ ಶರೀರದಲ್ಲಿರುವ ವಿಧಾನವನ್ನು ಅನುಭವಿಸಿದಂತೆಯೇ ಅಲ್ಲವೆ! ಎಲ್ಲಾ ಬೋಧಕರು ಹೇಳುವ ಸಾಧಾರಣವಾದ ಜ್ಞಾನವನ್ನು ನೀನು ಹೇಳಿದ್ದರೆ, ಅದು ಭಗವಂತನ ಶರೀರದಲ್ಲಿರುವ ಆತ್ಮ ಹೇಳಿದಂತೆ ಅಲ್ಲವೆಂದು ತಿಳಿದುಹೋಗುತ್ತದೆ. ಏಕೆಂದರೆ! ಅದು ಸಾಧಾರಣ ಬೋಧನೆಯಾಗಿರುತ್ತದೆ. ಭಗವಂತನು ಬೋಧಿಸುವ ಬೋಧನೆ ಅಸಾಧಾರಣವಾಗಿರುತ್ತದೆ. ಯಾರೂ ಭೂಮಿಮೇಲೆ  ಬೋಧಿಸದಿರುವುದಾಗಿರುತ್ತದೆ. ಶಾಸ್ತ್ರಬದ್ಧವಾದುದಾಗಿ, ಸತ್ಯಸಮೇತವಾದುದಾಗಿರುತ್ತದೆ. ಈಗ ನಿನ್ನಿಂದ ಬರುವ ಬೋಧನೆ ಪ್ರಪಂಚದಲ್ಲಿ ಯಾವ ಮಾನವನು ಬೋಧಿಸದ ಅತ್ಯುನ್ನತವಾದ ಬೋಧನೆ ಆದಾಗ, ನೀನು ಹೊಂದಿದ ಅನುಭೂತಿ ಇಲ್ಲವೆ ಅನುಭವ ಭಗವಂತನ ಶರೀರದೊಳಗಿನದ್ದು ಅಲ್ಲವೆ! ನೀನು ಭಗವಂತನ ವಿಧಾನವನ್ನು ಅನುಭವಿಸಿದಂತೆ ಆಗಿರುವುದರಿಂದ  ನೀನು ಕೋರಿದ ಕೋರಿಕೆಯನ್ನು ದೇವರು ನೆರವೇರಿಸಿದಂತೆ ಅಲ್ಲವೆ! ಇದರಲ್ಲಿ ನಿನಗೆ ಏನಾದರೂ ಅನುಮಾನವಿದೆಯಾ? ಎನ್ನುವ ಉತ್ತರ ದೊರೆತಿದೆ.

ಆಗ ನನ್ನ ಬುದ್ಧಿಯನ್ನುಪಯೋಗಿಸಿ ಆಲೋಚಿಸಿದರೆ ಒಳಗಿನಿಂದ ಬಂದ ಸಮಾಧಾನ ಸತ್ಯವೇಯೆಂದು ಅರ್ಥವಾಗಿದೆ. ಆ ಸಮಯದಿಂದ ನನ್ನ ಮುಖಾಂತರ ಬರುವ ಜ್ಞಾನವನ್ನು ನಾನು ಹೇಳುತ್ತಿಲ್ಲ, ನನ್ನಲ್ಲಿರುವ ಆತ್ಮವೇ (ದೇವರೇ) ಹೇಳುತ್ತಿದ್ದಾನೆಂದು ಎಲ್ಲರೊಂದಿಗೆ ಹೇಳುತ್ತಿದ್ದೇನೆ. ನನ್ನ ಮಾತನ್ನು ಕೇಳಿದ ಕೆಲವರು ನನ್ನ ಮಾತಿನಲ್ಲಿನ ಸತ್ಯವನ್ನು ತಿಳಿಯದೆ "ಆತನು ಹೇಳುವ ಜ್ಞಾನವನ್ನು ತಾನು ಹೇಳಿದ್ದೇನೆಂಬ ಅಹಮ್ ಇಲ್ಲದಂತೆ ಹೇಳುತ್ತಿದ್ದಾನೆ"

ಎಂದು ಅಂದುಕೊಳ್ಳುತ್ತಿದ್ದಾರೆ. ಅಷ್ಟೇ ಹೊರತು ಇದೆಲ್ಲವೂ ಭಗವಂತನ ಶರೀರದಲ್ಲಿ ನಡೆದಂತೆ ನಡೆಯುತ್ತಿದೆಯೆಂದು, ಅತ್ಯುನ್ನತವಾದ ಜ್ಞಾನವನ್ನು ಹೇಳುವವನು ಆತ್ಮವೇ ಆದರೂ, ಅದು ಭಗವಂತನ ಶರೀರದಲ್ಲಿ ಹೇಳಿದಂತೆ ಉನ್ನತವಾದ ಜ್ಞಾನವೇ ಹೇಳಲ್ಪಡುತ್ತಿದೆಯೆಂದು ಅರ್ಥ ಮಾಡಿಕೊಳ್ಳದೆ ಹೋಗಿದ್ದಾರೆ. ಹೇಳುವ ಜ್ಞಾನವನ್ನು ಕೇಳುತ್ತಿದ್ದರೂ ಇದು ಉತ್ತಮವಾದ ಜ್ಞಾನವೆಂದು, ಇದನ್ನು ಭಗವಂತನ ಆತ್ಮ ಹೊರತು ಯಾರೂ ಹೇಳಲಾರರೆಂದು ತಿಳಿಯದಂತಿದ್ದಾರೆ.

ಕೆಲವರು ನನ್ನ ಶರೀರದಲ್ಲಿನ ಆತ್ಮ ನನ್ನ ಕೋರಿಕೆಯನ್ನು ಅನುಸರಿಸಿ ಉನ್ನತವಾದ ಜ್ಞಾನವನ್ನು ಹೇಳಿದರೆ ಅದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇಲ್ಲದವರು ನಾನು ಹೇಳುವುದು ಜ್ಞಾನವೇ ಅಲ್ಲವೆಂದು, ಅಜ್ಞಾನವನ್ನು ಬೋಧಿಸುತ್ತಿದ್ದಾನೆಂದು ಹೇಳುತ್ತಿದ್ದಾರೆ. ಅವರು ಹಾಗೆ ಹೇಳಿದಾಗ ದೇವರು ಅವರಿಗೆ ಜ್ಞಾನವನ್ನು ಏಕೆ ಅರ್ಥವಾಗುವಂತೆ ಮಾಡಲಿಲ್ಲವೆಂದು ಅನಿಸುತ್ತಿರುತ್ತದೆ. ಎಲ್ಲರಿಗೂ ಉನ್ನತವಾದ ಜ್ಞಾನ ಅರ್ಥವಾಗುತ್ತಿಲ್ಲ ಎನ್ನುವುದು ಪ್ರಶ್ನೆಯಾಗಿ ನಿಂತುಹೋಗಿ! ಅದಕ್ಕೆ ಉತ್ತರ ಕೂಡಾ ಈ ವಿಧವಾಗಿ ತಿಳಿದಿದೆ. ದೇವರ ಜ್ಞಾನದ ಮೇಲೆ ಶ್ರದ್ಧೆ ಇರುವವನಿಗೆ ಮಾತ್ರವೇ ದೇವರು ಹೇಳುವ ಜ್ಞಾನ ಅರ್ಥವಾಗುತ್ತದೆ. ಶ್ರದ್ಧೆ ಇಲ್ಲದವನಿಗೆ ಭಗವಂತನು ಹೇಳಿದ ಬೋಧನೆಗಳು ಅರ್ಥವಾಗುವುದಿಲ್ಲವೆಂದು ತಿಳಿಯುತ್ತಿದೆ. ಮನುಷ್ಯನಿಗೆ ಇರುವ ಶ್ರದ್ಧೆಯನ್ನನು ಸರಿಸಿ ಜ್ಞಾನ ಅರ್ಥವಾಗುವುದು ಅಥವಾ ಅರ್ಥವಾಗದಿರುವುದು ನಡೆಯುತ್ತಿದೆ. ಜ್ಞಾನವನ್ನು ನಂಬುವವರು ದೇವರ ಆಕಾರ ರೂಪ (ಭಗವಂತನು) ಹೇಳಿದ ಜ್ಞಾನವನ್ನು ಅರ್ಥಮಾಡಿಕೊಂಡರೂ, ಹೇಳಲ್ಪಟ್ಟ ಜ್ಞಾನ ಭಗವಂತನ ಮುಖಾಂತರ ಬಂದಿದೆಯೆಂದು ನಂಬಲಿಲ್ಲ. ಸಾಧಾರಣ ಬೋಧಕನು ಹೇಳಿದ ಬೋಧನೆಯಾಗಿಯೇ ನಂಬುತ್ತಾರೆ. ಹೇಳಿದವನು ಸಾಧಾರಣ ಮನುಷ್ಯನಾಗಿಯೇ ಕಾಣಿಸುತ್ತಾನೆ ಆದರೆ, ಭಗವಂತನು ಹೇಳಿದ ಜ್ಞಾನ ಕೇಳಿದರೂ ಭಗವಂತನನ್ನು ಗುರುತಿಸಲಾರರು. ದೇವರು ಹೇಗೆ ತಿಳಿಯಲ್ಪಡುವುದಿಲ್ಲವೊ ಭಗವಂತನು

ಬೋಧನೆ ಹೇಳಿದರೂ, ಆತನ ಬೋಧನೆ ಉನ್ನತವಾದುದಾಗಿ ಇದ್ದರೂ, ಎಷ್ಟು ತಿಳುವಳಿಕೆಯುಳ್ಳವರಾದರೂ ಈತನೇ ಭಗವಂತನೆಂದು ಗುರುತಿಸಿ ಹೇಳಲಾರರು. ಭಗವಂತನನ್ನು ಗುರುತಿಸದಿರುವಾಗ ಭಗವಂತನಿಗೆ ವಿರೋಧ ಮಾಡುವುದು ನಡೆಯುತ್ತಿರುತ್ತದೆ. ಅಷ್ಟೇಅಲ್ಲದೆ ಭಗವಂತನನ್ನು ಕೆಲವು ವಿಷಯಗಳಲ್ಲಿ ವಿಭೇದಿಸಿ, ಆತನನ್ನು ಅವಮಾನಿಸುತ್ತಿದ್ದಾರೆಂದು ಭಗವದ್ಗೀತೆ ಗ್ರಂಥದಲ್ಲಿ ಕೂಡಾ ಹೇಳಿದ್ದಾರೆ.

ಒಬ್ಬ ಮನುಷ್ಯನಲ್ಲಿ ಎರಡು ಕೋನಗಳಿವೆಯೆಂದು ಮೊದಲೆ ಹೇಳಿ ಕೊಂಡಿದ್ದೇವೆ. ಸಾಧಾರಣ ಮನುಷ್ಯನ ಶರೀರದಲ್ಲಿ ಜೀವಿಯ ಕೋನ ಒಂದು, ಆತ್ಮ ಕೋನ ಮತ್ತೊಂದು ಇರುತ್ತದೆ. ದೇವರ ಶರೀರವಾದ ಭಗವಂತನಲ್ಲಿ ಜೀವಿಯ ಕೋನ ಇರುವುದಿಲ್ಲ. ಭಗವಂತನಾಗಿ ಹುಟ್ಟಿದವನು ಪರಮಾತ್ಮ ಆಗಿರುವುದರಿಂದ ಆತನಿಗೆ ಪ್ರಕೃತಿ ಸಂಬಂಧ ಗುಣಗಳಿಂದ ಏರ್ಪಟ್ಟ ಕರ್ಮ ಇಲ್ಲದಿರುವುದರಿಂದ, ಪ್ರಸ್ತುತ ಅನುಭವಿಸುವುದಕ್ಕೆ ಪರಮಾತ್ಮ ಅಂದುಕೊಂಡ ಪ್ರಕಾರ ಏರ್ಪಟ್ಟಿರುವುದರಿಂದ ಅದು ಪ್ರಕೃತಿ ಕರ್ಮವಲ್ಲ. ಆದ್ದರಿಂದ ಎಲ್ಲಾ ಅನುಭವಗಳು ನಿರ್ಣಯಿಸಲ್ಪಟ್ಟ ಅಥವಾ ಹೊಸದಾಗಿ ತಯಾರು ಮಾಡಲ್ಪಟ್ಟ ಕರ್ಮಪ್ರಕಾರ ಇರುವುದರಿಂದ ಭಗವಂತನಲ್ಲಿ ಜೀವಿಯ ಕೋನ ಇರುವುದಿಲ್ಲ. ಭಗವಂತನ ಶರೀರದಲ್ಲಿ ಆತ್ಮ, ಜೀವಾತ್ಮಗಳನ್ನು, ಪರಮಾತ್ಮ ಸ್ವತಃವಾಗಿ ವಿಭಜಿಸಿರುವುದರಿಂದ ಆತ್ಮಗಳ ವಿಷಯಗಳಲ್ಲಾಗಲಿ, ಕರ್ಮ ವಿಷಯಗಳಲ್ಲಾಗಲಿ ಸರ್ವ ಸಾಧಾರಣ ಮನುಷ್ಯನಂತೆ ಇರದೆ ಭಗವಂತನ ಶರೀರ ಪ್ರತ್ಯೇಕವಾದು ದಾಗಿರುತ್ತದೆ. ಆದ್ದರಿಂದ ಭಗವಂತನ ಶರೀರದಲ್ಲಿ ಕೂಡಾ ಎರಡು ಕೋನಗಳಿದ್ದರೂ ಒಂದು ಆತ್ಮ ಕೋನ, ಎರಡು ಪರಮಾತ್ಮ ಕೋನ ಇರುತ್ತದೆ. ಎಲ್ಲಾ ಶರೀರಗಳಲ್ಲಿ ಆತ್ಮ ಕೆಲಸ ಮಾಡುತ್ತಿರುವಾಗ, ಜೀವಾತ್ಮ ಕೆಲಸಗಳಲ್ಲಿ ಬಂದಿರುವ ಫಲಿತವಾದ ಕಷ್ಟಸುಖಗಳನ್ನು ಅನುಭವಿಸುತ್ತಿರುವಾಗ, ಪರಮಾತ್ಮ ಸಾಕ್ಷಿಯಾಗಿ ನೋಡುತ್ತಿರುತ್ತಾನೆ. ಆದರೆ ಭಗವಂತನ ಶರೀರದಲ್ಲಿ ಒಂದೇ ಪರಮಾತ್ಮ ಮೂರು ಆತ್ಮಗಳಾಗಿ ಪ್ರಸ್ತುತಕ್ಕೆ ವಿಭಜಿಸಲ್ಪಟ್ಟಿರುವುದರಿಂದ ಜೀವಾತ್ಮ

ಆತ್ಮ ಒಂದುಕಡೆ, ಪರಮಾತ್ಮ ಒಂದುಕಡೆ ಇರುವುದರಿಂದ, ಎರಡು ಕೋನಗಳು ಭಗವಂತನ ಶರೀರದಲ್ಲಿರುತ್ತವೆ. ಆದರೆ ಜೀವಾತ್ಮ ಎಲ್ಲ ಶರೀರಗಳಂತೆ ಬಂದಿರುವ ಅನುಭವಗಳನ್ನು ಅನುಭವಿಸುತ್ತಿರುವಾಗ, ಆತ್ಮ ಪ್ರತ್ಯೇಕವಾದ ಜ್ಞಾನ ಹೇಳುವ ಕೋನದಲ್ಲಿರುವಾಗ, ಪರಮಾತ್ಮ ಎಲ್ಲ ಶರೀರಗಳಲ್ಲಿರುವಂತೆ ಸಾಕ್ಷಿಯಾಗಿ ಮಾತ್ರ ಇಲ್ಲದೆ ಆಗಾಗ ಹೊರಗಿನ ಪ್ರಕೃತಿ ಮೇಲೆ ತನ್ನ ದೃಷ್ಠಿಯನ್ನು ಹರಿಸಿ ಯಾವಾಗಾದರೂ ಅಗತ್ಯ ಬಂದರೆ ಅಪರೂಪವಾಗಿ ಪ್ರಕೃತಿಗೆ ಸೂಚನೆಗಳನ್ನು ಕೊಟ್ಟು ನಡೆಸುತ್ತಿರುತ್ತಾನೆ.

ದ್ವಾಪರಯುಗದಲ್ಲಿ ಕೃಷ್ಣನಾಗಿ ಬಂದಾಗ ಭಾರತ ಯುದ್ಧದಲ್ಲಿ (ಕುರುಕ್ಷೇತ್ರ ಯುದ್ದದಲ್ಲಿ) ಭಗವಂತನ ಶರೀರದಲ್ಲಿನ ಪರಮಾತ್ಮ ಪ್ರಕೃತಿಯನ್ನು ಶಾಸಿಸಿ **'ಮಧ್ಯಾಹ್ನ ಕಾಲವನ್ನು ಸಾಯಂಕಾಲವಾಗಿ ಬದಲಾಯಿಸಿ ಇತರರೆಲ್ಲರೂ ಸಾಯಂಕಾಲವಾಗಿದೆಯೆಂದು ಭ್ರಮಿಸುವಂತೆ ಮಾಡಿದ್ದಾನೆ.'** ಹಾಗೆಯೇ ಕಲಿಯುಗದಲ್ಲಿ ಯೇಸು ಆಗಿ ಬಂದಾಗ ಭಗವಂತನಾದ ಆತನ ಶರೀರದಲ್ಲಿನ ಜೀವಿಯು ಸಾಧಾರಣ ಕಷ್ಟ ಸುಖಗಳನ್ನು ಅನುಭವಿಸುವಂತೆ ಆತ್ಮ ಕೋನದಿಂದ ಆತ್ಮ ಕೆಲಸ ಮಾಡುತ್ತಿರುವಾಗ, ಪರಮಾತ್ಮ ಯೇಸು ಜೀವನದಲ್ಲಿ ಒಂದುಸಲ **ಸಮುದ್ರವನ್ನು, ತುಫಾನ್‌ನನ್ನು ಶಾಸಿಸಿ** ತನ್ನ ಇರುವಿಕೆಯನ್ನು ಸಾರಿಕೊಂಡಿದ್ದಾನೆ. ಈ ಎರಡು ಯುಗಗಳಲ್ಲಿನ ಎರಡು ಅವತಾರಗಳಲ್ಲಿ ಪ್ರಕೃತಿಯನ್ನು ಶಾಸಿಸಿದಂತೆ ಕೆಲವರಿಗೆ ತಿಳಿದಿದೆ. ಆದರೆ ತ್ರೇತಾಯುಗದಲ್ಲಿ ಭಗವಂತನು ಯಾರು? ಎನ್ನುವುದು ಪ್ರಜೆಗಳಿಗೆ ತಿಳಿಯದಂತೆ ಹೋಗಿದೆ. ತ್ರೇತಾಯುಗದಲ್ಲಿನ ಭಗವಂತನನ್ನು ಕೆಲವರು ಅದೇ ಕೆಲಸವಾಗಿ ಕೆಟ್ಟದಾಗಿ ಪ್ರಚಾರ ಮಾಡಿರುವುದರಿಂದ ಆತನನ್ನು ಸಾಧಾರಣ ಮನುಷ್ಯನಾಗಿ ಕೂಡಾ ಲೆಕ್ಕಿಸುತ್ತಿಲ್ಲ. ಅಂತಹ ಸಂದರ್ಭದಲ್ಲಿ ಭಗವಂತನನ್ನು ಗುರುತಿಸುವುದಕ್ಕೆ ಅವಕಾಶವೇ ಇಲ್ಲ. ಸರ್ವಸಾಧಾರಣವಾಗಿ ಭಗವಂತನನ್ನು ಗುರುತಿಸುವುದು ದುಸ್ಸಾಧ್ಯವೆಂದು ಹೇಳಿಕೊಂಡಿದ್ದೇವೆ.

ಆದರೆ ಕೆಲವರು ಜ್ಞಾನಿಗಳು ಭಗವಂತನು ಹೇಳಿಹೋದ ಜ್ಞಾನವನ್ನು ಗುರುತಿಸಿ ಅದರ ಆಧಾರವಾಗಿ ದ್ವಾಪರ, ಕಲಿಯುಗದಲ್ಲಿನ ಭಗವಂತರನ್ನು

ಸೂಚನಪ್ರಾಯವಾಗಿ ಗುರುತಿಸಿದ್ದಾರೆ. ಆದರೆ ತ್ರೇತಾಯುಗದಲ್ಲಿನ ಭಗವಂತನು ಹೇಳಿದ ಜ್ಞಾನವನ್ನು ನೋಡಿ ಆತನನ್ನು ಗುರುತಿಸುವುದಕ್ಕೆ ಅವಕಾಶವಿದ್ದರೂ, ಆಗ ಬಂದಿರುವ ಭಗವಂತನನ್ನು ಮೊದಲೇ ದುರ್ಮಾರ್ಗನನ್ನಾಗಿ ಕೆಲವರು ಚಿತ್ರಿಸಿ ತೋರಿಸುವುದರಿಂದ, ಆತನ ಜ್ಞಾನವನ್ನು ಕೂಡಾ ನೋಡದಂತೆ ಪಕ್ಕಕ್ಕಿಟ್ಟು, ಆತನನ್ನು ಒಬ್ಬ ದುರ್ಮಾರ್ಗನನ್ನಾಗಿ ಲೆಕ್ಕಿಸುವುದು ನಡೆದಿದೆ. ಆದ್ದರಿಂದ ನಾವು ಆತನ ಜ್ಞಾನವನ್ನು ಶ್ರೇಷ್ಠವಾದುದೆಂದು ಹೇಳಿದರೂ ಪ್ರಜೆಗಳು ಕೇಳುವುದಿಲ್ಲ. ಆದ್ದರಿಂದ ನಾವು ಜ್ಞಾನವನ್ನು ನೋಡಿ ಇಂತಹವನು ಭಗವಂತನೆಂದು ಹೇಳುವುದಕ್ಕೆ ಬದಲು ಆತನ ಕೋನದಲ್ಲಿ ಪ್ರಕೃತಿಯನ್ನು ಶಾಸಿಸಿದ ಸಂಘಟನೆಯನ್ನನುಸರಿಸಿ ಆತನು ಭಗವಂತನೆಂದು ಹೊರಗೆ ಹೇಳುತ್ತಿದ್ದೇವೆ. ಕಲಿಯುಗದಲ್ಲಿ ಪ್ರಕೃತಿಯಾದ 'ಸಮುದ್ರವನ್ನು ತುಫಾನ್‌ನನ್ನು ಪರಮಾತ್ಮ ಶಾಸಿಸಿದಾಗ,' ದ್ವಾಪರಯುಗದಲ್ಲಿ 'ಸೂರ್ಯನನ್ನು ಶಾಸಿಸುವುದು' ನಡೆದಿದೆ. ಇನ್ನು ತ್ರೇತಾಯುಗದಲ್ಲಿ ಒಟ್ಟಾರೆ **"ನವಗ್ರಹಗಳನ್ನು ಶಾಸಿಸಿ, ಅನೂಹ್ಯವಾಗಿ ಎಲ್ಲರನ್ನು ಒಂದು ವರಸೆಯಲ್ಲಿಡುವುದು ನಡೆದಿದೆ."** ಪ್ರಕೃತಿಯಲ್ಲಿನ ಭಾಗಗಳಾದ ಒಟ್ಟಾರೆ ನವಗ್ರಹಗಳೆಲ್ಲವನ್ನು ಶಾಸಿಸಿ ಘಟನೆಯನ್ನು ಅನುಸರಿಸಿ ಆತನು ದೇವರಾದ ಭಗವಂತನೆಂದು ಗುರುತಿಸಿದ್ದೇವೆ. ಆತನು ಅಂದಿನ ಕಾಲದಲ್ಲಿ ಉತ್ತಮವಾದ ಜ್ಞಾನವನ್ನು ಹೇಳಿದರೂ, ಆತನ ಜ್ಞಾನವನ್ನು ನೋಡಿ ಆತನನ್ನು ಗ್ರಹಿಸದಿದ್ದರೂ, ಪ್ರಕೃತಿ ಸಂಘಟನೆಯನ್ನು ಅನುಸರಿಸಿ ಅಂದಿನ ಭಗವಂತನನ್ನು ಗುರುತಿಸಿದ್ದೇವೆ. ಹಾಗೆ ಗುರುತಿಸಲ್ಪಟ್ಟವನೇ ರಾವಣಬ್ರಹ್ಮ. ರಾವಣಬ್ರಹ್ಮನನ್ನು ಕುರಿತು ಯಾರೋ ಹೇಳಿರುವುದು ಕೇಳಿ ಕೆಟ್ಟವನೆಂದು ನಿರ್ಣಯಕ್ಕೆ ಬರದೆ, ಜಾಗ್ರತೆಯಾಗಿ ನೋಡಿದರೆ ತಪ್ಪದೇ ರಾವಣಬ್ರಹ್ಮನನ್ನು ಭಗವಂತನನ್ನಾಗಿ ಗುರುತಿಸಬಹುದು.

ಮನುಷ್ಯನ ಶರೀರದಲ್ಲಿ ಜೀವಿಯ ಕೋನ, ದೇವರ ಕೋನ ಎರಡು ಇರುವಾಗ, ಭಗವಂತನ ಶರೀರದಲ್ಲಿ ಆತ್ಮ ಕೋನ, ಪರಮಾತ್ಮ ಕೋನವೆಂದು ಎರಡು ಕೋನಗಳಿವೆ. ಸಾಧಾರಣ ಮನುಷ್ಯನಲ್ಲಿಯೂ, ಭಗವಂತನಲ್ಲಿಯೂ ಆತ್ಮ ಒಂದೇ ವಿಧವಾದ ಕೆಲಸವನ್ನು ಮಾಡಿದರೂ, ಪರಮಾತ್ಮ ಸಾಧಾರಣ

ಮನುಷ್ಯನಲ್ಲಿ ಸಾಕ್ಷಿಯಾಗಿ ಮಾತ್ರ ಇರುವವನು ಭಗವಂತನ ಶರೀರದಲ್ಲಿ ಪ್ರಕೃತಿ ಮೇಲಿನ ಸಹಯೋಗದಿಂದ ಸ್ವತಃವಾಗಿ ಪ್ರಕೃತಿಯನ್ನು ಶಾಸಿಸುತ್ತಿದ್ದಾನೆ. ಪ್ರಕೃತಿಯನ್ನು ಶಾಸಿಸುವ ವಿಧಾನವನ್ನು ಅನುಸರಿಸಿ ತ್ರೇತಾಯುಗದಲ್ಲಿ ರಾವಣ ಬ್ರಹ್ಮನನ್ನು ಕಂಡುಕೊಂಡು, ಉಳಿದ ಎರಡು ಯುಗಗಳಲ್ಲಿ ಜ್ಞಾನವನ್ನು ಅನುಸರಿಸಿ ಭಗವಂತರನ್ನು ಕಂಡುಕೊಳ್ಳುವುದು ನಡೆದಿದೆ. ಇದೆಲ್ಲಾ ನನಗೆ ಸ್ವಂತವಾಗಿ ತಿಳಿದ ವಿಧಾನವನ್ನು ನಾನು ತಿಳಿಸುವುದು ನಡೆದಿದೆ. ಭಗವಂತನ ಶರೀರದಲ್ಲಿನ ಸ್ವಯಂ ಅನುಭವವನ್ನು ತಿಳಿದು ನಿಮಗೆ ತಿಳಿಸುವುದು ನಡೆದಿದೆ. ಭಗವಂತನ ವಿಧಾನವನ್ನು ತಿಳಿಯಬೇಕೆಂಬ ಕೋರಿಕೆಯನ್ನು ದೇವರನ್ನು ಕೋರಿ ಆ ಕೋರಿಕೆ ಪ್ರಕಾರ ನಾನು ಅನುಭವಿಸಿದ ಅನುಭವದ ಪ್ರಕಾರ ತಿಳಿಸಿದ್ದೇನೆ ಹೊರತು ನನ್ನ ಸ್ವತಃವಾಗಿ ಬರೆದಿರುವುದು ಏನೂ ಇಲ್ಲ. ಈ ಗ್ರಂಥದ ಮೂಲಕ ನಿಮ್ಮ ಹೊರಗಿನ ಗಮನವನ್ನು ಒಳಗೆ ಇಟ್ಟು ನಿಮ್ಮಲ್ಲಿನ ಎರಡು ಕೋನಗಳು ಹೇಗಿವೆಯೋ ತಿಳಿದರೆ, ನೀವು ದೇವರಿಗೆ (ಆತ್ಮಗೆ) ಹತ್ತಿರವಾಗಿ ಮೋಕ್ಷವನ್ನು (ಪರಮಾತ್ಮನನ್ನು) ಸೇರಬಹುದು. ನೀವೆಲ್ಲರೂ ಪರಲೋಕ ರಾಜ್ಯವಾದ ಮೋಕ್ಷವನ್ನು ಹೊಂದ ಬೇಕೆಂದು ಕೋರುತ್ತಾ ಮುಗಿಸುತ್ತಿದ್ದೇವೆ.

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**